Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–31 | ಜುಲೈ 29–ಆಗಸ್ಟ್ 4, 2024 | ಪುಟ 16 | ರೂ.10/–
Volume-18 | Issue-31 | July 29-August 4, 2024 | Pages:16 | Price: 10/-



ಜನತೆಯ ಅಗಾಧ ಸಮಸ್ಯೆಗಳನ್ನು ನಿರ್ಲಕ್ಷಿಸಿದ ಬಜೆಟ್

14 ಗಂಟೆಗಳ ಕೆಲಸದ ದಿನ:

ಐಟಿ ಉದ್ಯೋಗಿಗಳಿಂದ ವ್ಯಾಪಕ ವಿರೋಧ



ತಾರತಮ್ಯಕ್ಕೆ ರಾಜ್ಯದ ಪ್ರತಿಭಟನೆ ಸಕಾಲಿಕ

ಮಹಾರಾಷ್ಟ್ರ ಸರ್ಕಾರದ 'ಜನ ಸುರಕ್ಷಾ' ಎಂಬ ಕರಾಳ ಮಸೂದೆ

ನಿರುದ್ಯೋಗ, ಬಡತನ, ಪ್ರಶ್ನೆಪತ್ರಿಕೆ ಸೋರಿಕೆಯಂತಹ ಅವೇ ಸಮಸ್ಯೆಗಳು ಬಿಹಾರ ಹಾಗೂ ಮಧ್ಯಪ್ರದೇಶದಲ್ಲೂ ಮತದಾರರನ್ನು ಕಾಡುತ್ತಿರುವಾಗ, ಪ್ರಬಲ ನೆಲೆಯಿದ್ದ ಉತ್ತರಪ್ರದೇಶದಲ್ಲಿ ಮಾತ್ರ ಏಕೆ ಬಿಜೆಪಿ ಹೀನಾಯವಾಗಿ ಸೋತಿದೆ ಎಂಬುದು ಈ ಚುನಾವಣೆಯ ವಿಸ್ಮಯಗಳಲ್ಲೊಂದು. ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯರಾದ ಸುಭಾಷಿಣಿ ಅಲಿ ಇದನ್ನು ಈ ಲೇಖನದಲ್ಲಿ ಅರ್ಥೈಸಲು ಪ್ರಯತ್ನಿಸಿದ್ದಾರೆ.

ಸುಭಾಷಿಣಿ ಅಲಿ ಅನುವಾದ: ಟಿ. ಸುರೇಂದ್ರ ರಾವ್

‘ನ ಮಥುರಾ ನ ಕಾಶಿ, ಜೀತೇಗಾ ಅವಧೇಶ್ ಪಾಸಿ’

ಅಯೋಧ್ಯಾ ಮತ್ತು ಉತ್ತರ ಪ್ರದೇಶ ಫಲಿತಾಂಶದ ವಿಶ್ಲೇಷಣೆ, ಮಹತ್ವ

2024 ರ ಲೋಕಸಭಾ ಚುನಾವಣೆಗೆ ಮುಂಚೆ, ಮತದಾರರನ್ನು ಪ್ರಭಾವಿಸುವ ವಿಷಯಗಳ ಬಗ್ಗೆ ವ್ಯಾಪಕ ಚರ್ಚೆಗಳು ನಡೆದವು. ರಾಮಮಂದಿರ ಉದ್ಘಾಟನೆಯು ಬಹಳ ದೊಡ್ಡ ಪ್ರಭಾವ ಬೀರಬಹುದೆಂದು ನಂಬಲಾಗಿತ್ತು. ಬಿಜೆಪಿಯ ಸಂಘಟನಾ ಸಾಮರ್ಥ್ಯ, ಅಪಾರ ಹಣ ಹಾಗೂ ಬೇರುಮಟ್ಟದಲ್ಲಿ ಅದು ಹೊಂದಿರುವ ಕರಾರುವಕ್ಕಾದ ನಿರ್ವಹಣಾ ಚಾತುರ್ಯವು ಇತರರು ಚುನಾವಣೆ ಗೆಲ್ಲುವುದು ಕಷ್ಟ ಎಂಬ ಭಾವನೆ ಮೂಡಿಸಿತ್ತು.

ಮತ್ತೊಂದೆಡೆ, ಇಂಡಿಯಾ ಮೈತ್ರಿಕೂಟದ ಚುನಾವಣಾ ಸಿದ್ಧತೆ, ಅದರೊಳಗಿನ ಆಂತರಿಕ ವಿರೋಧಾಭಾಸಗಳು, ದೇಶದ ಅತ್ಯಂತ ದೊಡ್ಡ ರಾಜ್ಯದಲ್ಲಿ ಚುನಾವಣೆಯನ್ನು ಎದುರಿಸುವಲ್ಲಿನ ಅದರ ಸಾಮರ್ಥ್ಯ ಮತ್ತು ಸಂಘಟನಾ ಕೊರತೆಗಳ ಹಿನ್ನೆಲೆಯಲ್ಲಿ ಆ ಕೂಟವನ್ನು ವಿಶ್ಲೇಷಕರು ಹಾಗೂ ರಾಜಕೀಯ ತಜ್ಞರು ಚುನಾವಣಾ ಕಣದಿಂದಲೇ ತೆಗೆದುಹಾಕಿದ್ದರು. ಚುನಾವಣಾ ಪ್ರಚಾರ ಆರಂಭವಾಗುವ ಮೊದಲೇ ಅಂತಹ ವದಂತಿಗಳನ್ನು ಹಬ್ಬಿಸಲಾಗಿತ್ತು.

ಚುನಾವಣಾ ಪೂರ್ವ ಎಣಿಕೆಗಳು

ಬಿಜೆಪಿಗೆ ಇರುವಂತೆ ಪ್ರಧಾನ ಮಂತ್ರಿಯ ಅಭ್ಯರ್ಥಿಯೊಬ್ಬರು ಇಂಡಿಯಾ ಮೈತ್ರಿಕೂಟಕ್ಕೆ ಇಲ್ಲ ಎಂದು ವ್ಯಾಪಕ ಪ್ರಚಾರ ಮಾಡಲಾಗಿತ್ತು. ಅದೂ ಸಾಲದೆಂಬಂತೆ ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳ ಮೇಲೆ ಬಿಜೆಪಿಯ ಸಂಪೂರ್ಣ ಪ್ರಾಬಲ್ಯ, ಅದರೊಂದಿಗೆ ಚುನಾವಣಾ ಆಯೋಗದ ನಿರ್ಲಜ್ಜ ಶಾಮೀಲು, ಸರ್ಕಾರದ ಹಾಗೂ ಸ್ವಾಯತ್ತ ಎಂದು ಕರೆದುಕೊಳ್ಳುವ ಸಂಸ್ಥೆಗಳ ಬಹು ದೊಡ್ಡ ವಿಭಾಗದ ಅಧಿಕಾರಿಗಳು ಬಹಿರಂಗವಾಗಿಯೇ ಕೇಂದ್ರ ಸರ್ಕಾರದ ತೊತ್ತುಗಳಂತೆ ನಡೆದುಕೊಳ್ಳುತ್ತಿದ್ದ ರೀತಿಗಳು ಚುನಾವಣೆಯಲ್ಲಿ ಬಿಜೆಪಿಯ ಗೆಲುವನ್ನು ಬಹುಪಾಲು ನಿರೀಕ್ಷಿಸಲಾಗಿತ್ತು. ‘400 ಕ್ಕೂ ಹೆಚ್ಚು’ ಎಂಬ ಬಿಜೆಪಿಯ ಪ್ರಚಾರ ಅದು ಸಫಲವಾಗಬಹುದೇನೋ ಎಂಬ ನಿರೀಕ್ಷೆಯನ್ನು ಹುಟ್ಟುಹಾಕಿತ್ತು.

ಇಂತಹ ಅಭಿಪ್ರಾಯಗಳು ಮಡುಗಟ್ಟುತ್ತಿರುವಾಗಲೇ ಅಥವಾ ಅದನ್ನು ವ್ಯವಸ್ಥಿತವಾಗಿ ಬೆಳೆಸುತ್ತಿರುವಾಗಲೇ–ಬಹುಮಟ್ಟಿನ ಎಲ್ಲಾ ವಿಶ್ಲೇಷಕರು ಹಾಗೂ ತಜ್ಞರು ಮತ್ತು ಅಸಂಖ್ಯಾತ ಚಿಕ್ಕ ಪುಟ್ಟ ದೊಡ್ಡ ಮಟ್ಟದ ಸಮೀಕ್ಷೆಗಳು ದೇಶದಲ್ಲಿನ ಹಣದುಬ್ಬರ, ನಿರುದ್ಯೋಗ, ಸಾಲದ ಬಾಧೆ ಹಾಗೂ ಕುಸಿಯುತ್ತಿರುವ ಜೀವನದ ಮಾನದಂಡಗಳ ಬಗ್ಗೆ ಜನವಿಭಾಗಗಳು ಚಡಪಡಿಸುತ್ತಿರುವುದನ್ನು ತಿಳಿಸುತ್ತಿದ್ದವು. ಆದರೆ ಸರ್ಕಾರದ ವಿರುದ್ಧದ ಈ ಎಲ್ಲಾ ಮನೋಭಾವವನ್ನು ಹಾಗೂ ಅತೃಪ್ತಿಗಳನ್ನು ಬಿಜೆಪಿಯು ಹೋಗಲಾಡಿಸಿ ವಿಜಯದತ್ತ ಸಾಗುತ್ತವೆ ಎಂದೂ ಹೇಳಲಾಗುತ್ತಿತ್ತು. ಏಕೆಂದರೆ ಬಿಜೆಪಿಗೆ ಮತ್ತು ಆರ್‌ಎಸ್‌ಎಸ್ ನೇತೃತ್ವದ ಸಂಘ ಪರಿವಾರಕ್ಕೆ ಇರುವ ಅಪಾರ ಸಂಪನ್ಮೂಲಗಳು, ಕೇಂದ್ರ ಸರ್ಕಾರದಲ್ಲಿ ಮತ್ತು ಕೆಲವು ಪ್ರಮುಖ ರಾಜ್ಯಗಳಲ್ಲಿ ಅದಕ್ಕಿರುವ ಅಧಿಕಾರದ ಪ್ರಭಾವ ಮತ್ತು ರಾಜಕೀಯ ಧೃವೀಕರಣದ ಸಾಮರ್ಥ್ಯ ಹಾಗೂ ಇವೆಲ್ಲಕ್ಕೂ ಮಿಗಿಲಾಗಿ ಅತ್ಯುನ್ನತ ನಾಯಕನ ವ್ಯಕ್ತಿತ್ವದ ಪ್ರಭಾವಳಿ ಜನರ ಮೇಲೆ ಬೀರಿರುವ ಅಸಾಮಾನ್ಯ ಪ್ರಭಾವ ಎಲ್ಲಾ ಅಡಚಣೆಗಳನ್ನು ನಿವಾರಿಸಿ ಹಾಕುತ್ತವೆ ಎಂಬ ಅದಮ್ಯ ನಂಬಿಕೆ ಇತ್ತು.

ಈ ಚುನಾವಣಾ ಪೂರ್ವ ಅಂಶಗಳು ದೇಶಾದ್ಯಂತ ಎಲ್ಲಾ ಕಡೆಗಳಲ್ಲೂ ಪಸರಿಸಿದ್ದವಾದರೂ, ಅಂತಿಮ ಫಲಿತಾಂಶಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿದ್ದವು. ಆಸಕ್ತಿದಾಯಕ ವಿಷಯವೆಂದರೆ ಬಿಜೆಪಿ ಆಳ್ವಿಕೆಯ ಉತ್ತರ ಭಾರತದ ರಾಜ್ಯಗಳಲ್ಲಿ–ಮಧ್ಯ ಪ್ರದೇಶ, ಬಿಹಾರ ಹಾಗೂ ಉತ್ತರಪ್ರದೇಶದಲ್ಲಿ–ಫಲಿತಾಂಶಗಳು ತೀರಾ ಭಿನ್ನವಾಗಿದ್ದವು. ಉತ್ತರಪ್ರದೇಶದಲ್ಲಿ ಅತ್ಯಾಶ್ಚರ್ಯಕರ ಫಲಿತಾಂಶ ಬಂದಿದ್ದು, ಅಲ್ಲಿ ಬಿಜೆಪಿ ಭಾರೀ ಸೋಲನ್ನು ಉಣ್ಣಬೇಕಾಯಿತು, ಕಳೆದೆರಡು ಲೋಕಸಭಾ ಚುನಾವಣೆಗಳಲ್ಲಿ ಬಂದಂತೆ ಈ ಬಾರಿಯೂ ತಮಗೆ ಅತ್ಯುತ್ತಮ ಫಲಿತಾಂಶ ದೊರೆಯುತ್ತದೆ ಎಂದು ಬಿಜೆಪಿ ಭಾವಿಸಿತ್ತು.

ಹಿಂದುತ್ವಕ್ಕೆ ಪ್ರತಿಯಾಗಿ ಜಾತಿ ಎಚ್ಚರದ ರಾಜಕೀಯ: ಒಂದು ಅವಲೋಕನ

ಹಿಂದಿನ ಹಲವಾರು ಚುನಾವಣೆಗಳಲ್ಲಿಯಂತೆ ಈ ಬಾರಿಯೂ ಬಿಜೆಪಿಯ ಚುನಾವಣಾ ಪ್ರಚಾರವು ಮೂರು ದೇವಸ್ಥಾನ ಪಟ್ಟಣಗಳಾದ ಅಯೋಧ್ಯಾ, ಕಾಶಿ ಹಾಗೂ ಮಥುರಾ ಸುತ್ತ ಕೇಂದ್ರೀಕೃತವಾಗಿತ್ತು. ಈ ಮೂರೂ ಪಟ್ಟಣಗಳಲ್ಲಿನ ಮಸೀದಿಗಳು ದೊಡ್ಡ ದೇವಸ್ಥಾನಗಳನ್ನು ಕೆಡವಿ ಕಟ್ಟಿದ್ದಾಗಿವೆ ಎಂಬ ಆರೋಪದೊಂದಿಗೆ ಬಿಜೆಪಿ ಹಾಗೂ ಅದರ ಅಂಗ ಸಂಸ್ಥೆಗಳಾದ ಸಂಘಪರಿವಾರದ ಸಂಘಟನೆಗಳು ನಿರಂತರವಾಗಿ ಪ್ರಚಾರವನ್ನು ನಡೆಸಿದ್ದವು. ಅಯೋಧ್ಯಾ ಹಾಗೂ ಮಥುರಾಗಳು ಅನುಕ್ರಮವಾಗಿ ರಾಮ ಹಾಗೂ ಕೃಷ್ಣನ ಜನ್ಮಸ್ಥಳಗಳು ಎಂದೂ ಪ್ರಚಾರ ನಡೆಸಿದ್ದವು. ಈ ಸ್ಥಳಗಳನ್ನು ಮತ್ತೆ ‘ಹಿಂದೂ’ಗಳಿಗೆ ಹಿಂಪಡೆಯಬೇಕು ಎಂದು ಹಿಂದೂ ಮಹಾಸಭಾ ಹಾಗೂ ಸಂಘಪರಿವಾರದ ಸಂಘಟನೆಗಳು 1948 ರಿಂದಲೂ ವ್ಯಾಪಕ ಪ್ರಚಾರವನ್ನು ಸಂಘಟಿಸಿವೆ. ಕೋಮು ಗಲಭೆಗಳನ್ನು ಹುಟ್ಟುಹಾಕಿ, ಅಪಾರ ಪ್ರಮಾಣದ ಪ್ರಚಾರ ಸಾಮಗ್ರಿಗಳನ್ನು ಸಿದ್ಧಪಡಿಸಿ ಹಂಚುವ ಮೂಲಕ ತೀವ್ರತರದ ಕೋಮು ಸಂಘರ್ಷವನ್ನು ಸೃಷ್ಟಿಸುವಲ್ಲಿ ಅವು ಯಶಸ್ವಿಯಾಗಿವೆ. ದೊಡ್ಡ ಸಂಖ್ಯೆಯ ಜನರು ನಂಬುವಂತೆ ಕಲ್ಪಿತ ಕಥನಗಳನ್ನು, ಕಟ್ಟುಕತೆಗಳನ್ನು ಹರಿಬಿಟ್ಟಿದ್ದಾರೆ.

ಈ ರಾಜ್ಯದಲ್ಲಿ ಬಿಜೆಪಿಗೆ ಒಂದು ರಾಜಕೀಯ ನೆಲೆಯನ್ನು ಸೃಷ್ಟಿಸುವಲ್ಲಿ ಈ ಚಳವಳಿಯು ಯಶಸ್ಸನ್ನು ಪಡೆದಿದೆ ಮತ್ತು ಅಷ್ಟೇ ಅಲ್ಲ, 1989 ರ ಲೋಕಸಭಾ ಚುನಾವಣೆಯ ನಂತರ ಬಿಜೆಪಿಗೆ ಒಂದು ರಾಷ್ಟ್ರಮಟ್ಟದ ರಾಜಕೀಯ ಪಕ್ಷದ ಸ್ಥಾನಮಾನವನ್ನು ದೊರಕಿಸಿಕೊಟ್ಟಿದೆ. ಆ ನಂತರದಲ್ಲಿ ಬಿಜೆಪಿಗೆ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ತ್ವರಿತಗತಿಯಲ್ಲಿ ಬೆಳೆಯಲು ಅವಕಾಶವಾಯಿತು. ಉತ್ತರಪ್ರದೇಶದಲ್ಲಿನ 80 ಲೋಕಸಭಾ ಸ್ಥಾನಗಳು ಕಳೆದ ಎರಡು ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿಗೆ ಸಂಸತ್ತಿನಲ್ಲಿ ಬಹುಮತ ಗಳಿಸುವಲ್ಲಿ ಸಹಾಯಕವಾಯಿತು. ಪ್ರಧಾನ ಮಂತ್ರಿಯವರ ಸ್ವಂತ ಕ್ಷೇತ್ರ ಕೂಡ ಈ ರಾಜ್ಯದಲ್ಲೇ ಇದೆ. ಅಲ್ಪಸಂಖ್ಯಾತರ, ವಿಶೇಷವಾಗಿ ಮುಸ್ಲಿಮರ ವಿರುದ್ಧ ಅತ್ಯಂತ ಭೀಕರ ದಾಳಿಗಳು ನಡೆದಿದ್ದು ಮತ್ತು ನಡೆಯುತ್ತಿರುವುದು ಈ ರಾಜ್ಯದಲ್ಲೇ ಎನ್ನುವುದನ್ನು ಮರೆಯಬಾರದು ಮತ್ತು ಅದು ನಾನಾ ಬಗೆಯ ವಿಷಕಾರಿ ಕೋಮುವಾದಿ ರಾಜಕೀಯ ಧೃವೀಕರಣಕ್ಕೆ ನಾಂದಿ ಹಾಡಿದೆ ಕೂಡ.

ಆದರೆ, 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು 30ಕ್ಕೂ ಹೆಚ್ಚು ಸ್ಥಾನಗಳನ್ನು ಕಳೆದುಕೊಂಡಿದೆ, ಲೋಕಸಭೆಯಲ್ಲಿ ಬಹುಮತದ ಸ್ಥಾನಮಾನವನ್ನು ಕೂಡ ಕಳೆದುಕೊಂಡಿತು. ಅಷ್ಟೇ ಅಲ್ಲ, ಮತಗಳಿಕೆಯ ಪ್ರಮಾಣದಲ್ಲಿ ಕೂಡ ಬಿಜೆಪಿಯ ಪಾಲು ಶೇಕಡಾ 49.6 ರಿಂದ ಶೇಕಡಾ 41.4 ಕ್ಕೆ ಕುಸಿಯಿತು. ಒಟ್ಟು ಮತಗಳಿಕೆಯಲ್ಲಿ ಹೆಚ್ಚು ಮತಗಳನ್ನು ಪಡೆದಿದ್ದರೂ ಸಹ 2019 ಕ್ಕಿಂತ 2024ರ ಚುನಾವಣೆಯಲ್ಲಿ ಬಿಜೆಪಿಗೆ 65 ಲಕ್ಷ ಮತಗಳು ಕಡಿಮೆ ಬಂದಿವೆ. ಪ್ರಧಾನ ಮಂತ್ರಿಗಳ ಕ್ಷೇತ್ರವಾದ ವಾರಣಾಸಿಯಲ್ಲಿ ಅವರು ಗಳಿಸಿದ ಮತ ಪ್ರಮಾಣದ ಅಂತರವು 2019ರ 4,79,505 ರಿಂದ 2024 ರಲ್ಲಿ 1,52,513 ಕ್ಕೆ ಭಾರಿ ಕುಸಿತ ಕಂಡಿದೆ.

ನಿರುದ್ಯೋಗ, ಬಡತನ, ಪ್ರಶ್ನೆಪತ್ರಿಕೆ ಸೋರಿಕೆಯಂತಹ ಅವೇ ಸಮಸ್ಯೆಗಳು ಬಿಹಾರ ಹಾಗೂ ಮಧ್ಯಪ್ರದೇಶದಲ್ಲೂ ಮತದಾರರನ್ನು ಕಾಡುತ್ತಿರುವಾಗ ಉತ್ತರಪ್ರದೇಶದಲ್ಲಿ ಮಾತ್ರ ಏಕೆ ಹೀಗಾಯಿತು ಎನ್ನುವುದನ್ನು ನಾವು ಬಹಳ ಮುಖ್ಯವಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಬಿಹಾರದಲ್ಲಿ ಆರ್.ಜೆ.ಡಿ. ನೇತೃತ್ವದ ಮಹಾಘಟಬಂಧನ್ 39ರಲ್ಲಿ ಕೇವಲ 7 ಸ್ಥಾನಗಳನ್ನು ಮಾತ್ರ ಗೆಲ್ಲಲು ಸಾಧ್ಯವಾಯಿತು ಮತ್ತು ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಎಲ್ಲಾ 29 ಸ್ಥಾನಗಳನ್ನೂ ಬಿಜೆಪಿಗೆ ಬಿಟ್ಟುಕೊಡಬೇಕಾಯಿತು.



ಇವುಗಳಿಗೆ ಉತ್ತರ ಕಂಡುಕೊಳ್ಳುವಾಗಲೇ, ಹಿಂದಿನ ಚುನಾವಣೆಗಳಲ್ಲಿ ನಡೆದಿರುವುದನ್ನು ಅರಿಯುವುದು ವಿಷಯಾಂತರವೆನಿಸಿದರೂ ಕೂಡ ನಮಗೆ ಸ್ವಲ್ಪ ಸಹಾಯವಾಗಬಹುದು. 1992ರಲ್ಲಿ ಅಯೋಧ್ಯಾದಲ್ಲಿ ಮಸೀದಿ ಧ್ವಂಸವಾದ ನಂತರ, ಅಲ್ಲಿಯ ಬಿಜೆಪಿ ರಾಜ್ಯ ಸರ್ಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಡಳಿತ ಜಾರಿ ಮಾಡಲಾಯಿತು. ನಂತರದಲ್ಲಿ, 1993ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮುಲಾಯಂ ಸಿಂಗ್ ನೇತೃತ್ವದ ಸಮಾಜವಾದಿ ಪಕ್ಷ ಹಾಗೂ ಕಾನ್ಶೀರಾಂ ನೇತೃತ್ವದ ಬಹುಜನ ಸಮಾಜ ಪಕ್ಷಗಳು ಚುನಾವಣಾ ಮೈತ್ರಿಯನ್ನು ರಚಿಸಿಕೊಂಡು ಬಿಜೆಪಿಯನ್ನು ಎದುರಿಸಿದವು. ಬಾಬರಿ ಮಸೀದಿಯ ಧ್ವಂಸದ ನಂತರ ಹಿಂದೂ ವಿಜಯೋತ್ಸವ ಅಚರಣೆಯ ಸಂಭ್ರಮದಲ್ಲಿದ್ದ ಬಿಜೆಪಿಯ ಕೋಮು ಧೃವೀಕರಣದ ಉತ್ತುಂಗದಲ್ಲಿ ಚುನಾವಣೆ ನಡೆದಿತ್ತು. ಆದರೆ ಸಮಾಜವಾದಿ ಹಾಗೂ ಬಹುಜನ ಸಮಾಜ ಪಕ್ಷಗಳ ಮೈತ್ರಿಕೂಟದ “ಮಿಲ್ ಗಯೆ ಮುಲಾಯಂ ಕಾನ್ಶೀರಾಂ, ಹವಾ ಮೆ ಉಡ್ ಗಯೇ ಜೈ ಶ್ರೀ ರಾಮ್” (ಸಿಕ್ಕರು ಮುಲಾಯಂ ಕಾನ್ಶೀರಾಂ, ಗಾಳಿಯಲ್ಲಿ ಹಾರಿಹೋಯಿತು ಜೈ ಶ್ರೀರಾಂ) ಘೋಷಣೆಯು ಭಾರಿ ಜನಪ್ರಿಯತೆ ಗಳಿಸಿತು.

422 ಸ್ಥಾನಗಳಿರುವ ಉತ್ತರ ಪ್ರದೇಶದಲ್ಲಿ ಬಿಜೆಪಿಯ 177 ಕ್ಕಿಂತ ಒಂದು ಸ್ಥಾನ ಹೆಚ್ಚು ಗಳಿಸುವ ಮೂಲಕ ಎಸ್.ಪಿ–ಬಿ.ಎಸ್.ಪಿ. ಕೂಟವು ಶಕ್ತಿಯುತವಾದ ಕೂಟವಾಗಿ ಹೊರಹೊಮ್ಮಿತು. ಎಡ ಪಕ್ಷಗಳು, ಕಾಂಗ್ರೆಸ್, ಜನತಾ ದಳ ಹಾಗೂ ಜನತಾ ಪಕ್ಷಗಳ ಬೆಂಬಲ ಪಡೆದು ಎಸ್‌ಪಿ–ಬಿಎಸ್‌ಪಿ ಕೂಟವು ಸರ್ಕಾರ ರಚಿಸಿತು. ಜಾತಿ ಸಂಯೋಜನೆಯ ಮೂಲಕ ಕೋಮು ಧೃವೀಕರಣವನ್ನು ಸೋಲಿಸಬಹುದು ಎಂಬುದನ್ನು ಈ ಚುನಾವಣಾ ಗೆಲುವು ಸಾಬೀತುಮಾಡಿತು.

2024ರ ಲೋಕಸಭಾ ಚುನಾವಣೆ ನಡೆದಾಗ, ಅದಾಗಲೇ ಇದ್ದ ಬಿಜೆಪಿಯ ‘ಸೋಲಿಲ್ಲದ ಸರದಾರ’ ಎಂಬ ಭಾವನೆಯ ನಡುವೆಯೇ ಸಮಾಜವಾದಿ ಪಕ್ಷದ ಕೂಟದಿಂದ ಹಲವು ಜನರು ಹೊರಹೋಗುವುದರಿಂದಾಗಿ ಪರಿಸ್ಥಿತಿ ಬಿಗಡಾಯಿಸಿತ್ತು. ಇಬ್ಬರು ಪ್ರಮುಖ ಮುಖಂಡರುಗಳಾದ ಸುಹೇಲ್ ದೇವ್ ಭಾರತೀಯ ಸಮಾಜ ಪಕ್ಷದ (ಎಸ್‌ಬಿಎಸ್‌ಪಿ) ಓಂ ಪ್ರಕಾಶ್ ರಾಜ್‌ಭರ್ ಹಾಗೂ ರಾಷ್ಟ್ರೀಯ ಲೋಕ ದಳ(ಆರ್‌ಎಲ್‌ಡಿ)ದ ಜಯಂತ್ ಚೌಧರಿ ಸಮಾಜವಾದಿ ಕೂಟದಿಂದ ಹೊರನಡೆದು ಬಿಜೆಪಿಯೊಂದಿಗೆ ಕೈಜೋಡಿಸಿದರು. 2019 ರ ಲೋಕಸಭಾ ಚುನಾವಣೆಯಲ್ಲಿ ಸಮಾಜವಾದಿ ಪಕ್ಷದೊಂದಿಗೆ ಮೈತ್ರಿ ಹೊಂದಿದ್ದ ಬಿಎಸ್‌ಪಿಯು ಏಕಾಂಗಿಯಾಗಿ ಹೋರಾಡುವುದಾಗಿ ತೀರ್ಮಾನಿಸಿತ್ತು. ಒಟ್ಟಾರೆಯಾಗಿ, ಇಂಡಿಯಾ ಮೈತ್ರಿಕೂಟದ ಸ್ಥಿತಿ ಅತಂತ್ರವಾಗಿತ್ತು.

ಪಿಡಿಎ ಘೋಷಣೆ ಮತ್ತು ಸಂವಿಧಾನ ರಕ್ಷಿಸಿ ಆಂದೋಲನ

ಪರಿಸ್ಥಿತಿ ಹೀಗಿದ್ದಾಗ್ಯೂ, ಸಮಾಜವಾದಿ ಪಕ್ಷದ ‘ಪಿಡಿಎ’ (ಪಿಚಡಾ–ಹಿಂದುಳಿದ, ದಲಿತ, ಅಲ್ಪಸಂಖ್ಯಾತ, ಮಹಿಳೆ, ಅಂಚಿನಲ್ಲಿರುವವರು) ಘೋಷಣೆಯು ರಾಜ್ಯಾದ್ಯಂತ ಅನುರಣಿಸಿತು. ಅಖಿಲೇಶ್ ಯಾದವ್ ಅವರ ಅತ್ಯಂತ ಎಚ್ಚರದ ಹಾಗೂ ಜಾಣತನದ ನಡೆಯು ‘ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಯಾದವರಲ್ಲದೇ ಇತರ ಒಬಿಸಿಯವರಿಗೆ ಹೆಚ್ಚಿನ ಸ್ಥಾನಗಳನ್ನು

ಪುಟ 4 ಕ್ಕೆ

ತಾರತಮ್ಯಕ್ಕೆ ರಾಜ್ಯದ ಪ್ರತಿಭಟನೆ ಸಕಾಲಿಕ

ಸಂಪಾದಕೀಯ

ಒಂದು ರಾಷ್ಟ್ರ ಒಂದು ಚುನಾವಣೆ, ಕ್ಷೇತ್ರ ಪುನರ್ ವಿಂಗಡಣೆ, ನೀಟ್ ಪರೀಕ್ಷಾ ಪದ್ಧತಿಗೆ ವಿರೋಧ ವ್ಯಕ್ತಪಡಿಸಿ ಕರ್ನಾಟಕದ ವಿಧಾನಸಭೆ ನಿರ್ಣಯ ಅಂಗೀಕರಿಸಿದ್ದು ಮಹತ್ವದ ಘಟನೆ. ಈ ಮೂಲಕ ಕರ್ನಾಟಕ ಸರ್ಕಾರ ಭಾರತದ ಒಕ್ಕೂಟ ಸರ್ಕಾರದ, ಬಿಜೆಪಿಯ ಸಂಕುಚಿತ ಉದ್ದೇಶಗಳಿಗೆ ತನ್ನ ಅಸಮ್ಮತಿಯನ್ನು ದಾಖಲಿಸಿದೆ. ಅಧಿವೇಶನ ನಡೆಯುತ್ತಿದ್ದ ಸಂದರ್ಭದಲ್ಲೇ ಭಾರತದ ಒಕ್ಕೂಟ ಸರ್ಕಾರ ತನ್ನ 2024–25 ನೆಯ ಸಾಲಿನ ಹೊಸ ಆಯ ವ್ಯಯ ಮಂಡಿಸಿದೆ. ಇದರಲ್ಲಿ ಕರ್ನಾಟಕದ ಬಹುತೇಕ ಅತ್ಯಗತ್ಯ ಕೋರಿಕೆಗಳ ಬಗ್ಗೆ ಕಡು ನಿರ್ಲಕ್ಷ್ಯವನ್ನು ತೋರಿಸಲಾಗಿದೆ. ಇದರ ವಿರುದ್ದವೂ ತನ್ನ ತೀವ್ರ ಆಕ್ರೋಶದ ಪ್ರತಿಭಟನೆಯನ್ನೂ ವ್ಯಕ್ತ ಪಡಿಸಿರುವುದು ಗಮನಾರ್ಹವಾಗಿದೆ.

ದೇಶದ ಆರ್ಥಿಕ ಯೋಜನೆಗಳನ್ನು ರೂಪಿಸುವ ನೀತಿ ಆಯೋಗದ ಸಭೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಗೈರು ಹಾಜರಾಗುವ ಮೂಲಕವೂ ತೀವ್ರ ಪ್ರತಿಭಟನೆಯನ್ನು ದಾಖಲಿಸಿದ್ದಾರೆ. ಇದೇ ಸಂದರ್ಭದಲ್ಲಿ ತಮಗಾಗುತ್ತಿರುವ ತಾರತಮ್ಯಗಳನ್ನು ವಿರೋಧಿಸಿ ತಮಿಳುನಾಡು, ತೆಲಂಗಾಣ, ಹಿಮಾಚಲ ಪ್ರದೇಶದ ಮುಖ್ಯಮಂತ್ರಿಗಳು ಸಹ ನೀತಿ ಆಯೋಗದ ಸಭೆಯನ್ನು ಬಹಿಷ್ಕರಿಸಿದ್ದಾರೆ. ತಮ್ಮ ಬೇಡಿಕೆಗಳನ್ನು ತಿರಸ್ಕರಿಸಿದ್ದಕ್ಕೆ ಪ್ರತಿಭಟನೆಯನ್ನು ದಾಖಲಿಸುತ್ತಲೇ ದೇಶವನ್ನು ಇಡಿಯಾಗಿ ತೆಕ್ಕೆಗೆ ತೆಗೆದುಕೊಳ್ಳುವಲ್ಲಿ ಬಜೆಟ್ ವಿಫಲವಾಗಿದೆ ಎಂಬ ಆಕ್ಷೇಪವನ್ನು ಎತ್ತಲಾಗಿದೆ. ಅಧಿಕಾರಕ್ಕೆ ಏರಲು ತಮ್ಮನ್ನು ಬೆಂಬಲಿಸಿದರು ಎನ್ನುವ ಕಾರಣದಲ್ಲಿ, ಆ ಪಕ್ಷಗಳ 'ಷರತ್ತಿನ ಕೋರಿಕೆಯಂತೆ ಬಿಹಾರ ಮತ್ತು ಆಂದ್ರ ಪ್ರದೇಶ ರಾಜ್ಯಗಳಿಗೆ ಭರಪೂರ ಅನು'ದಾನ' ನೀಡಿದ್ದು ಖಂಡನೆಗೂ ಗುರಿಯಾಗಿದೆ. ದೇಶ ಎಂದರೆ ಆಡಳಿತದಲ್ಲಿರುವ ಬಿಜೆಪಿ ಪಕ್ಷದ ಇಚ್ಛೆಯಂತೆ ದೇಶದ ಜನರ ಹಣವನ್ನು ಧಾರಾಳವಾಗಿ ಕೆಲವೇ ರಾಜ್ಯಗಳಿಗೆ ನೀಡುವುದಲ್ಲ ಎನ್ನುವ ಎಚ್ಚರಿಕೆಯನ್ನು ನೀಡಿದ್ದಾರೆ. ಕೇಂದ್ರದ ಆಯವ್ಯಕ್ಕೆ ಮೊದಲು ಕರ್ನಾಟಕದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಕರ್ನಾಟಕದಿಂದ ಆಯ್ಕೆಯಾಗಿರುವ ಸಚಿವರಾದ ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್, ಭಾರಿ ಕೈಗಾರಿಕೆಗಳ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಮತ್ತು ಬಿಜೆಪಿಯ ಪ್ರಮುಖ ನಾಯಕರನ್ನು ಒಳಗೊಂಡ ಎಲ್ಲ ಸಂಸದರನ್ನು ಆಹ್ವಾನಿಸಿ ಸಭೆಯನ್ನು ನಡೆಸಿ ಮಂಡಿಸಿದ ಕೋರಿಕೆಯೂ ನಿಷ್ಫಲವಾಗಿದೆ. 15ನೇ ಹಣಕಾಸು ಆಯೋಗದ ಶಿಫಾರಸಿನಂತೆ ಸಿರಿಫೆರಲ್ ರಸ್ತೆಗಳ ನಿರ್ಮಾಣ, ಬೆಂಗಳೂರಿನಲ್ಲಿ ಅಭಿವೃದ್ಧಿ ಯೋಜನೆಗೆ 11,485 ಕೋಟಿ ರೂಪಾಯಿಗಳ ಅನುದಾನ ಕೋರಿಕೆ, ಭದ್ರಾ ಯೋಜನೆಗಾಗಿ ಸುಮಾರು 5,300 ಕೋಟಿ ರೂ.ಗಳ ಹಣ ನೀಡಲು ಹಣಕಾಸು ಮಂತ್ರಿಗಳು ನೀಡಿದ ಭರವಸೆ, ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ಪೂರಕ ಅನುದಾನ ನೀಡುವಂತೆ ಕೋರಿಕೆ ಸಲ್ಲಿಸಲಾಗಿತ್ತು. ಮಹದಾಯಿ ಯೋಜನೆ, ಮೇಕೆದಾಟು, ಕೃಷ್ಣಾ ಮೇಲ್ದಂಡೆ ಯೋಜನೆಗಳ ಬಗೆಗೆ ಕೇಂದ್ರ ಸರ್ಕಾರ ಕಡು ಮೌನ ವಹಿಸಿದೆ. ರಾಯಚೂರಿನಲ್ಲಿ 'ಏಮ್ಸ್ ಆಸ್ಪತ್ರೆ' ಸ್ಥಾಪಿಸುವ ಕುರಿತಾಗಿ ಏನೊಂದೂ ಮಾತನಾಡಿಲ್ಲ. ಈಗಾಗಲೇ ಕರ್ನಾಟಕಕ್ಕೆ ನ್ಯಾಯ ಸಮ್ಮತವಾಗಿ ಸಿಗಬೇಕಾಗಿರುವ ತೆರಿಗೆಯ ಪಾಲು ಸಿಕ್ಕದೆ ರಾಜ್ಯ ವಂಚಿತವಾಗಿದೆ. ಕೇಂದ್ರ ಸರ್ಕಾರದ ಇಂತಹ ತಾರತಮ್ಯ ಮತ್ತು ರಾಜ್ಯ ಸರ್ಕಾರಗಳಿಗೆ ನ್ಯಾಯ ಸಮ್ಮತ ಪಾಲು ನೀಡದೆ ಒಕ್ಕೂಟ ವ್ಯವಸ್ಥೆಯ ಮೂಲ ತತ್ವಗಳಿಗೆ ದ್ರೋಹ ಬಗೆದ ನಿಲುವಿನಿಂದ ಕರ್ನಾಟಕವನ್ನು ಒಳಗೊಂಡು ಕೇರಳ ಮುಂತಾದ ಅನೇಕ ರಾಜ್ಯಗಳು ಅಭಿವೃದ್ಧಿಗೆ ಹಣವಿಲ್ಲದೆ ತತ್ತರಿಸುತ್ತಿವೆ. ಬಿಜೆಪಿಯೇತರ ಅಥವಾ ಎನ್.ಡಿ.ಎ. ಕೂಟ ಸೇರದ ವಿರೋಧ ಪಕ್ಷ ಗಳ ಸರ್ಕಾರಗಳ ವಿರುದ್ದ ಬಿಜೆಪಿ ರಾಜಕೀಯ ಸೇಡು ತೀರಿಸಿಕೊಳ್ಳುತ್ತಿದೆ. ಹೀಗೆ ಕಾಣುವಾಗಲೂ ಮೂಲದಲ್ಲಿ ರಾಜ್ಯಗಳಿಗೆ ನ್ಯಾಯ ಸಮ್ಮತ ಪಾಲು ನೀಡದೇ ಸಂಪನ್ಮೂಲ ಕಬಳಿಸುವ ಸರ್ವಾಧಿಕಾರತನದ ಪಿತೂರಿಯೂ ಇಲ್ಲಿ ಅಡಗಿರುವುದನ್ನು ನಿರ್ಲಕ್ಷಿಸಲಾಗದು.

ಕರ್ನಾಟಕ ಈಗಾಗಲೇ ಕಳೆದ ಎರಡು ವರ್ಷಗಳಿಂದ ತೀವ್ರ ಬರಗಾಲವನ್ನು ಎದುರಿಸಿದೆ. ಸುಮಾರು 123 ತಾಲೂಕುಗಳಲ್ಲಿ ಕುಡಿಯುವ ನೀರು, ಆಹಾರ, ಮೇವಿನ ಕೊರತೆಯಿಂದ ಜನ, ಜಾನುವಾರುಗಳು ಬದುಕುಳಿಯಲು ತತ್ವಾರ ಅನುಭವಿಸಿಯಾಗಿದೆ. ರಾಜ್ಯದ ಕೋರಿಕೆಯಂತೆ 12,557 ಕೋಟಿ ನೆರವಿಗೆ ಬದಲು ಕೇವಲ 400 ಕೋಟಿಯಷ್ಟು ಹಣವನ್ನು ಕೊಟ್ಟು ಕೈತೊಳೆದುಕೊಂಡಿದೆ. ಅದೂ ನ್ಯಾಯಾಲಯದ ಮಧ್ಯಪ್ರದೇಶದಿಂದ ಎನ್ನುವುದು ಸನ್ನಿವೇಶದ ಘೋರ ಸ್ಥಿತಿಗೆ ಹಿಡಿದ ಕನ್ನಡಿ. ಇಂತಹ ಹಿನ್ನೆಲೆಯಲ್ಲಿ ರಾಜ್ಯಕ್ಕೆ ತೆರಿಗೆಯ ಪಾಲು ಮತ್ತು ವಿಶೇಷ ಅನುದಾನ ನೀಡುವುದು ಅತ್ಯಂತ ಅಗತ್ಯವಾಗಿತ್ತು. ಇವೆಲ್ಲವನ್ನು ತಿರಸ್ಕರಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರ ರಾಜ್ಯದ ಜನತೆಗೆ ಅನ್ಯಾಯವೆಸಗಿದೆ. ಈ ಸ್ಥಿತಿಯಲ್ಲಿ ತಾರತಮ್ಯದ ವಿರುದ್ಧ ಪ್ರತಿಭಟನೆಯ ಧ್ವನಿ ಎತ್ತಿರುವುದು ಸಕಾಲಿಕ. ಈ ಹೋರಾಟ ಮತ್ತಷ್ಟು ವಿಸ್ತಾರಬೇಕಿದೆ.

ಇಂತಹ ಮಹತ್ವದ ವಿಷಯಗಳನ್ನು ಪರಿಗಣಿಸದೆ ಪ್ರಧಾನಮಂತ್ರಿ, ಹಣಕಾಸು ಮಂತ್ರಿಗಳ ಮೇಲೆ ಒತ್ತಡವನ್ನು ಹಾಕಿ ರಾಜ್ಯಕ್ಕೆ ಸಿಗಬೇಕಾದ ಪಾಲನ್ನು ಪಡೆಯುವಲ್ಲಿ ರಾಜ್ಯದಿಂದ ಆಯ್ಕೆಯಾದ ಸಚಿವರು ಮತ್ತು ಆಡಳಿತ ಪಕ್ಷದ ಸಂಸದರು ಸಂಪೂರ್ಣ ವಿಫಲರಾಗಿದ್ದಾರೆ. ಒಂದು ರೀತಿಯಲ್ಲಿ ಪ್ರಶ್ನೆಯನ್ನು ಎತ್ತದೆ ಅಧಿಕಾರಕ್ಕಾಗಿ ಗುಲಾಮಿತನದ ಮನೋಭಾವ ಪ್ರದರ್ಶಿಸಿದ್ದಾರೆ. ದಿನನಿತ್ಯವು ಕರ್ನಾಟಕ ರಾಜ್ಯದಲ್ಲೇ ಸುತ್ತುವ ಕೈಗಾರಿಕಾ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಅವರು ಈ ಬಜೆಟನ್ನು ಕೊಂಡಾಡಿರುವುದು ಜನತೆಗೆ ಬಗೆದ ದ್ರೋಹ. ಅಧಿಕಾರಕ್ಕಾಗಿ ಬಾಲ ಬಡಿಯುವ, ರಾಜ್ಯದ ಹಿತಾಸಕ್ತಿಗಳನ್ನು ಬಲಿ ಕೊಡುವ ಪ್ರವೃತ್ತಿಯನ್ನು ತೋರಿಸಿದ್ದಾರೆ. ಹಿಂದೆಯೂ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಬಿಜೆಪಿ ಪಕ್ಷದ ಡಬಲ್ ಇಂಜಿನ್ ಸರ್ಕಾರ ಅಧಿಕಾರದಲ್ಲಿ ಇರುವಾಗಲೂ ಯಾವೊಬ್ಬ ಬಿಜೆಪಿ ನಾಯಕರು ಅದಕ್ಕಾಗಿ ಧ್ವನಿ ಎತ್ತದೆ ಇರುವುದು ಕೂಡ ಗುಲಾಮಿತನದ ಮನೋಭಾವ. ರಾಜ್ಯಕ್ಕೆ ಆಗುತ್ತಿರುವ ತಾರತಮ್ಯಗಳನ್ನು ಪ್ರಶ್ನಿಸುತ್ತಿರುವಾಗಲೇ ಗದ್ದ, ಗೋಜುಗಳನ್ನು ಸೃಷ್ಟಿಸಿದ ಬಿಜೆಪಿಯ ಉದ್ದೇಶ ಅರ್ಥವಾಗುವಂತಹುದೇ!

ಸದನದ ಕಲಾಪಗಳು: ಹಾದಿ ತಪ್ಪಿಸುವ ತಂತ್ರಗಳೇ ಮೇಲುಗೈ

ಈ ವಾರ

ಎಸ್.ವೈ.ಗುರುಶಾಂತ್

ಇಪ್ಪತ್ತೊಂದು ದಿನಗಳ ಕರ್ನಾಟಕ ವಿಧಾನಸಭಾ ಅಧಿವೇಶನ ಮುಕ್ತಾಯವಾಯಿತು. ಹಗರಣಗಳು, ಆರೋಪ–ಪ್ರತ್ಯಾರೋಪಗಳ ಭಾರಿ ಸದ್ದು ಮಾಡಿದವು. ಸದನದ ಕಲಾಪಗಳು ಸುಸೂತ್ರವಾಗಿ ನಡೆಯುವುದು ಬಿಜೆಪಿ–ಜೆಡಿಎಸ್ ಪಕ್ಷಗಳಿಗೆ ಬೇಕಿರಲಿಲ್ಲ. ಏನಾದರೂ ಒಂದೊಂದು ಖ್ಯಾತೆ ತೆಗೆದು ವಿಷಯಗಳು, ಚರ್ಚೆಯ ಹಾದಿ ತಪ್ಪಿಸಲು ಪ್ರಯತ್ನಿಸುತ್ತಲೇ ಬಂದವು. ಕಳೆದ ಚುನಾವಣೆಯಲ್ಲಿ ಯಾಕೆ ತಿರಸ್ಕಾರಕ್ಕೆ ಒಳಗಾದರು, ಅದರಿಂದ ಕಲಿಯಬೇಕಾದ ಪಾಠಗಳೇನು, ಸರಿ ಪಡಿಸಿಕೊಳ್ಳ ಬೇಕಾದ ಕ್ರಮಗಳೇನು ಎಂಬ ಬಗ್ಗೆ ಬಿಜೆಪಿಗೆ ಕಿಂಚಿತ್ತೂ ಕಾಳಜಿ ಇದುವರೆಗೂ ವ್ಯಕ್ತವಾಗಲಿಲ್ಲ. ಲೋಕಸಭಾ ಚುನಾವಣೆಯಲ್ಲಿಯೂ ಅದು ಡಂಗುರ ಹೊಡೆದಷ್ಟು ಸ್ಥಾನಗಳೂ ಬರಲಿಲ್ಲ. ಆ ಅಂದಾಜಿನಿಂದಲೇ ಜೆಡಿಎಸ್ ಪಕ್ಷದೊಂದಿಗೆ ಮೈತ್ರಿ, ರಾಜಿಗಳನ್ನು ಮಾಡಕೊಳ್ಳ ಬೇಕಾದ ಸ್ಥಿತಿ ಬಂತು. ಜನಾದೇಶದಿಂದ ಪಾಠ ಕಲಿಯುವ ಬದಲಾಗಿ ಅವನ್ನೆಲ್ಲಾ ಬದಿಗೊತ್ತಿ ಭಂಡತನದಿಂದ ಸಮರ್ಥಿಸಿಕೊಳ್ಳುವ ದಾಷ್ಟ್ಯತೆಯೇ ಕಂಡು ಬಂತು.

ಹಾಗೆ ನೋಡಿದರೆ ವಿಧಾನಸಭಾ ಅಧಿವೇಶನಕ್ಕೆ ಪೂರ್ವಭಾವಿಯಾಗಿಯೇ ಒಂದು ನೀಲನಕ್ಷೆಯನ್ನು ಬಿಜೆಪಿ–ಜೆಡಿಎಸ್ ಪಕ್ಷಗಳು ಸಿದ್ಧಗೊಳಿಸಿಕೊಂಡಿದ್ದವು. ಕಳೆದ ಅವಧಿಯಲ್ಲಿ ಕಾಂಗ್ರೆಸ್ ಜೆಡಿಎಸ್ ಮೈತ್ರಿಕೂಟದ ಸರ್ಕಾರವನ್ನು ಉರುಳಿಸಿ ಅಧಿಕಾರಕ್ಕೆ ಬಂದ ಯಡ್ಯೂರಪ್ಪ, ಬಸವರಾಜ ಬೊಮ್ಮಾಯಿ ಯವರ ಬಿಜೆಪಿ ಸರ್ಕಾರದ ಬ್ರಹ್ಮಾಂಡ ಭ್ರಷ್ಟಾಚಾರ, ದುರಾಡಳಿತ, ಕೋಮುದ್ವೇಷ, ಸಾಮಾಜಿಕ ತ್ವೇಷ, ವಿಭಜನೆಯ ರಾಜಕಾರಣಗಳಿಂದ ಅಂಟಿದ ಕಳಂಕವನ್ನು ತೊಳೆದುಕೊಳ್ಳಲು ಬಿಜೆಪಿ ಕಂಡುಕೊಂಡ ದಾರಿ ಎಂದರೆ ಅವನ್ನೆಲ್ಲಾ ತನ್ನ ಎದುರಾಳಿಗಳ ಮೇಲೆ ಆರೋಪಿಸುವುದು. ಇದನ್ನು ಬಹಳ ಯೋಜಿತವಾಗಿಯೇ ಆರಂಭಿಸಿದ ಬಿಜೆಪಿಗೆ ಜೆಡಿಎಸ್ ನ ಮೈತ್ರಿ ಹೊಸ ಬಲ ತಂದುಕೊಟ್ಟಿದೆ. ಈಗಲೂ ಕುಮಾರಸ್ವಾಮಿಯವರು ದೇಶದ ಸಚಿವ ಎನ್ನುವುದಕ್ಕಿಂತ ಕರ್ನಾಟಕದಲ್ಲಿ ಕಾಂಗ್ರೆಸ್ ವಿರುದ್ದ ಧಾಳಿ ಮಾಡಲು, ಅಧಿಕಾರ ಬಳಸಿ ಸಂಪನ್ಮೂಲ ಕ್ರೋಢೀಕರಿಸಿಕೊಳ್ಳಲು ಅನುಕೂಲವಾದರೆ ತನ್ನ ಪಕ್ಷವನ್ನು ಪುನಶ್ಚೇತನ ಮಾಡಲು, ಅಧಿಕಾರ, ಅವಕಾಶಗಳನ್ನು ಬಳಸಿ ಅವರ ಕುಟುಂಬಸ್ಥರನ್ನು ಆಯಕಟ್ಟಿನಲ್ಲಿ ಸ್ಥಾಪಿಸಲು ನೇಮಕಗೊಂಡಂತಿದೆ. ಈ ಅಧಿವೇಶನದಲ್ಲಿ ಜನರ ಸಮಸ್ಯೆಗಳತ್ತ ಹೆಚ್ಚು ಗಮನ ಕೇಂದ್ರೀಕರಿಸಬೇಕಿತ್ತು. ಪ್ರಜ್ವಲ್ ರೇವಣ್ಣ, ಸೂರಜ್ ರೇವಣ್ಣ ನವರ ಅತ್ಯಾಚಾರ, ಲೈಂಗಿಕ ಹಗರಣಗಳು, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಆದ ಹಣಕಾಸಿನ ಅವ್ಯವಹಾರ, ಮಳೆಯಿಂದಾದ ತೀವ್ರ ಹಾನಿ, ಎದುರಾಗಬಹುದಾದ ಸಂಕಷ್ಟಗಳು ಇತ್ಯಾದಿ ಚರ್ಚೆ ಆಗಬೇಕಿತ್ತು. ಭಾರತ ಸರ್ಕಾರದಿಂದ ಕರ್ನಾಟಕಕ್ಕೆ ಆಗುತ್ತಿರುವ ನಿರಂತರ ಅನ್ಯಾಯಗಳ ಬಗ್ಗೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧಗಳ ಕುರಿತಾದ ವಿಷಯಗಳು ಪ್ರಾಮುಖ್ಯತೆಯನ್ನು ಪಡೆಯಬೇಕಿತ್ತು.

ಈ ನಡುವೆ ವಿಧಾನಸಭಾ ಅಧಿವೇಶನಕ್ಕೆ ಮೊದಲೇ ಮೈಸೂರಿನ ಮೂಡಾದಲ್ಲಿ ಸಿದ್ದರಾಮಯ್ಯನವರ ಕುಟುಂಬದಿಂದ ನಡೆದಿದೆ ಎನ್ನಲಾದ ಪಕ್ಷಪಾತದ, ಸೈಟುಗಳ ಹಂಚಿಕೆಯಲ್ಲಾದ 'ಹಗರಣ' ವನ್ನು ಸ್ಫೋಟಗೊಳಿಸಲಾಯಿತು. ಈ ಕುರಿತ ಹಗರಣದ ಮಾಹಿತಿಗಳು ಹೊರಬಂದ ನಂತರ ಮುಖ್ಯಮಂತ್ರಿಗಳು ಮತ್ತು ಕಾಂಗ್ರೆಸ್ ಪಕ್ಷದ ವಕ್ತಾರರು ನೀಡಿದ ಯಾವ ಸ್ಪಷ್ಟನೆಗಳನ್ನು ಬಿಜೆಪಿ ಕೇಳಲು ಸಿದ್ಧವಿರಲಿಲ್ಲ. ಈ ವಿಷಯದ ಸುತ್ತ ವಾದ ವಿವಾದಗಳು, ದಾಖಲೆಗಳ ಬಿಡುಗಡೆಗಳು ನಡೆಯುತ್ತಲೇ ಹೋದಂತೆ ಬಿಜೆಪಿ ಮತ್ತು ಜೆಡಿಎಸ್ ನ ಅವಧಿಯಲ್ಲೂ ನಡೆದ ಹತ್ತಾರು ಹಗರಣಗಳು, ಕುಮಾರಸ್ವಾಮಿಯವರ ಕುಟುಂಬ, ಯಡ್ಯೂರಪ್ಪನವರ ಬಳಗ ಪಡೆದ ಹತ್ತಾರು ಸೈಟುಗಳ ಪ್ರಕರಣ, ಹಗರಣ ಎನ್ನಬಹುದಾದ ಸಂಗತಿಗಳು ಬಯಲಿಗೆ ಬಂದವು. ಇದರಲ್ಲಿ ಬಿಜೆಪಿ ಮತ್ತು ಜೆಡಿಎಸ್ಸಿನ ಮುಖಂಡರುಗಳ ಪಾಲು ಇರುವುದು ಕಂಡು ಬಂತು. ಈ ವಿಷಯಗಳು ವಿಧಾನಸಭೆಯಲ್ಲಿ ಚರ್ಚೆಗೆ ಒಳಗಾಗುವ, ಸತ್ಯಸಂಗತಿಗಳು ಹೊರಬರುವ ಕಡೆಗೆ ಗಮನ ನೀಡದೆ ಪರಸ್ಪರ ದೋಷಾರೋಪಣೆ ಯಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳು ಮುಳುಗಿದವು. ಮುಖ್ಯಮಂತ್ರಿಗಳು ನೀಡಿದ ಯಾವ ದಾಖಲೆ, ಸ್ಪಷ್ಟನೆಯನ್ನು ಒಪ್ಪಲು ಬಿಜೆಪಿ ಜೆಡಿಎಸ್ ಸಿದ್ದವಿರಲಿಲ್ಲ. ಈ ಪ್ರಕರಣದ ಬಗ್ಗೆ ವಿಚಾರಣೆ ನಡೆಸಲು ವಿಶ್ರಾಂತ ನ್ಯಾಯಮೂರ್ತಿ ಬಿ.ಎಂ. ದೇಸಾಯಿಯವರ ತನಿಖಾ ಆಯೋಗವನ್ನು ಸರ್ಕಾರ ನೇಮಿಸಿದ್ದು ಬಿಜೆಪಿ ಜೆಡಿಎಸ್ ಗಳಿಗೆ ತೃಪ್ತಿ ತರಲಿಲ್ಲ. ಪ್ರತಿ ಸಲದಂತೆ ಈ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕು ಎನ್ನುವ ಆಗ್ರಹ, ಅದಕ್ಕಿಂತಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಕೊಡಬೇಕು ಎನ್ನುವ ಬೇಡಿಕೆ ಪ್ರಮುಖ ಸ್ಥಾನವನ್ನು ಪಡೆದುಕೊಂಡವು. ಬಿಜೆಪಿ ಜೆಡಿಎಸ್ ನ ಅಬ್ಬರವನ್ನು ನೋಡಿದರೆ ನಡೆದಿರಬಹುದಾದ ಹಗರಣಗಳ ಬಗೆಗೆ ತನಿಖೆ ಮತ್ತು ಸತ್ಯ ಹೊರಬರುವುದಕ್ಕಿಂತ ಹೆಚ್ಚಾಗಿ ಸಿದ್ದರಾಮಯ್ಯನವರು ಭ್ರಷ್ಟರು, ಅವರನ್ನು ಅಧಿಕಾರದ ಸ್ಥಾನದಿಂದ ತೊಲಗಿಸಬೇಕು ಎನ್ನುವ ಕಡೆಗೆ ಹೆಚ್ಚು ಒತ್ತು ಇರುವಂತೆ ಕಂಡಿತು. ಈ ಮೂಡಾ ಹಗರಣ ಹೊರಬರುವಲ್ಲಿ ಅಧಿಕಾರ ಗದ್ದುಗೆಯ ಮೇಲೆ ಕಣ್ಣಿರಿಸಿದ ಆಡಳಿತ ಕಾಂಗ್ರೆಸ್ ಪಕ್ಷದ ಕೆಲವರ ಕೈವಾಡ ಇದೆ ಎನ್ನುವ ಅನುಮಾನಗಳು ಅಲ್ಲಲ್ಲಿ ಸುಳಿದಾಡಿದವು. ವಿಷಯ ಅದೇನೇ ಇದ್ದರೂ ತನಿಖೆಗೆ ಒಂದು ಆಯೋಗ ರಚನೆಯಾದ ಮೇಲೆ ಆ ವಿಷಯದಲ್ಲಿ ತಮ್ಮಲ್ಲಿರುವ ದಾಖಲೆಗಳು, ವಾದ ಇತ್ಯಾದಿಗಳನ್ನು ಅಲ್ಲಿಗೆ ಸಲ್ಲಿಸಿ ಒಂದು ಇತ್ಯರ್ಥಕ್ಕೆ ಬರುವುದು ಪದ್ಧತಿ. ಆದರೆ ಬಿಜೆಪಿ ಜೆಡಿಎಸ್ ಪಕ್ಷ ಗಳಿಗೆ ಇದು ಬೇಕಿರಲಿಲ್ಲ ಎನ್ನುವುದು ಸ್ಪಷ್ಟವಿತ್ತು. ಹೀಗಾಗಿಯೇ ವಿಧಾನಸಭೆಯಲ್ಲಿ ನಾಲ್ಕು ದಿನಗಳು ಇದರ ಕುರಿತು ಚರ್ಚೆಗೆ ಅವಕಾಶವನ್ನು ಕಲ್ಪಿಸಲಾಗಿತ್ತು. ಆದರೂ ಮತ್ತೆ ಮತ್ತೆ ಚರ್ಚೆಗೆ ಒತ್ತಾಯಿಸಿ ಧರಣಿಯನ್ನು ನಡೆಸಿದ ಬಿಜೆಪಿಯ ಬೇಡಿಕೆಯನ್ನು ವಿಧಾನ ಸಭೆಯಲ್ಲೂ ವಿಧಾನ ಪರಿಷತ್ತಿನಲ್ಲೂ ಸಭಾಧ್ಯಕ್ಷರು, ಸಭಾಪತಿಗಳು ನಿಯಮಗಳ ಹೊರತಾದುದು ಎಂದು ತಿರಸ್ಕರಿಸಿದ್ದು ಬಿಜೆಪಿಗೆ ಒಂದು ಅಸ್ತ್ರ ಸಿಕ್ಕಂತಾಯಿತು. ಇದನ್ನೇ ಬಳಸಿ ಕೊನೆಯ ದಿನಗಳಲ್ಲಿ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಒಳಗಡೆಯಲ್ಲಿ ಕೋಲಾಹಲ ಮತ್ತು ಅಹೋರಾತ್ರಿ ನಿರಂತರ ಧರಣಿ ಸತ್ಯಾಗ್ರಹ

ಪುಟ 7 ಕ್ಕೆ

ಅಯೋಧ್ಯಾ ಮತ್ತು ಉತ್ತರ ಪ್ರದೇಶ ಫಲಿತಾಂಶದ ವಿಶ್ಲೇಷಣೆ, ಮಹತ್ವ......

ಪುಟ 2 ರಿಂದ

ನೀಡುವುದು, ದಲಿತ ಅಭ್ಯರ್ಥಿಗಳನ್ನು ಸಾಮಾನ್ಯ ಕೆಟಗರಿಯಲ್ಲಿ ಹಾಗೂ ಮುಸ್ಲಿಂರು ಹೆಚ್ಚಿರುವ ಕಡೆ ಮುಸ್ಲಿಮೇತರರನ್ನು ನಿಲ್ಲಿಸುವುದು ಇಂತಹ ನಡೆ'ಯು ಕಾರ್ಯಸಾಧನೆ ಮಾಡಿತು. ಒಮ್ಮೆ ಪ್ರಚಾರ ಆರಂಭವಾದ ಕೂಡಲೇ, ವಿಶೇಷವಾಗಿ ಮೊದಲ ಎರಡು ಮತದಾನದ ಸುತ್ತುಗಳಲ್ಲಿ, ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿಯೊಂದಿಗಿನ ಜಂಟೀ ಪ್ರಚಾರವು ಬಹಳ ಮುಖ್ಯವಾಗಿ ಯುವಜನರನ್ನೂ ಒಳಗೊಂಡಂತೆ ಮೊದಲ ಬಾರಿಯ ಹಲವು ಮತದಾರರಲ್ಲಿ ಉತ್ಸಾಹ ಮೂಡಿಸಿತು.


ಶಕ್ತಿಯುತ ಬಿಜೆಪಿಯು ಸಂವಿಧಾನಕ್ಕೆ ಅಪಾಯ ಉಂಟುಮಾಡುತ್ತದೆ ಎಂಬ ವಿಷಯದತ್ತ ವಿಪಕ್ಷ ಮುಖಂಡರುಗಳು ಹೆಚ್ಚು ಗಮನ ಹರಿಸಿದರು. ಮೀಸಲಾತಿಯನ್ನು ತೆಗೆದುಹಾಕಿದರೆ ತಮ್ಮ ಉದ್ಯೋಗದ ಲಭ್ಯತೆಗಳು ಗಣನೀಯವಾಗಿ ಕಡಿಮೆಯಾಗುತ್ತವೆ ಎಂಬುದನ್ನು ಕಂಡುಕೊಂಡ ದಲಿತ ಸಮುದಾಯ ಹಾಗೂ ಹಲವಾರು ಯುವ ಒಬಿಸಿ ಜನರು ವಿಪಕ್ಷಗಳತ್ತ ಆಕರ್ಷಿತರಾದರು. ಖಾಸಗೀಕರಣ ಹಾಗೂ ಸಾರ್ವಜನಿಕ ಆಸ್ತಿಗಳ ಮಾರಾಟದ ಬಿಜೆಪಿಯವರ ನೀತಿಗಳು ವಿಪಕ್ಷಗಳ ಪ್ರಚಾರಕ್ಕೆ ಹೆಚ್ಚು ವಿಶ್ವಾಸಾರ್ಹತೆಯನ್ನು ಒದಗಿಸಿದವು. ಅಂಬೇಡ್ಕರ್ ಅವರ ಸಂವಿಧಾನಕ್ಕೆ ಬಂದಿರುವ ಅಪಾಯವು ದಲಿತ ಗುಂಪುಗಳಿಗೆ ಒಂದು ರೀತಿಯ ಭಾವನಾತ್ಮಕ ವಿಷಯವಾದರೂ ಅವರ ನಡುವೆ ರಾಜಕೀಯ ಪ್ರಜ್ಞೆ ಇರುವ 'ಜಾಟವ' ರಂಥವರಲ್ಲಿ ಹೆಚ್ಚು ಪರಿಣಾಮ ಬೀರಿದೆ. ಪಾರಂಪರಿಕವಾಗಿ ಆ ಸಮುದಾಯವು ಬಿಎಸ್‌ಪಿಯ ಬೆಂಬಲಿಗರಾಗಿದ್ದಾಗ್ಯೂ ಬಿಎಸ್‌ಪಿಯು ಈ ಬಾರಿಯ ಚುನಾವಣೆ ಪ್ರಚಾರದಲ್ಲಿ ಅನುಸರಿಸಿದ ತಂತ್ರವು ಅವರಲ್ಲಿ ನಿರಾಸೆ ಹಾಗೂ ಹತಾಶೆ ಉಂಟುಮಾಡಿದೆ.

ಪ್ರಚಾರದ ಆರಂಭದಲ್ಲಿ, ಮಾಯಾವತಿಯವರ ಅಭಿಷಿಕ್ತ ಉತ್ತರಾಧಿಕಾರಿ ಹಾಗೂ ಅವರ ಸೋದರಳಿಯ ಆನಂದ್ ಬಿಜೆಪಿಯ ವಿರುದ್ಧ ತೀವ್ರತರದ ಭಾಷಣ ಮಾಡಿದ್ದರು, ಆದರೆ ಎರಡನೆಯ ಸುತ್ತಿನ ಪ್ರಚಾರದ ನಂತರ ಮಾಯಾವತಿಯವರು ಸಾರ್ವಜನಿಕವಾಗಿ ಅವರಿಗೆ ಛೀಮಾರಿ ಹಾಕಿ ಪ್ರಚಾರ ಕಾರ್ಯದಿಂದ ದೂರವಿಟ್ಟರು, ಆ ನಡೆಯು ಬಿಜೆಪಿಯವರಿಗೆ ಸಹಜವಾಗಿಯೇ ಸಹಾಯವಾಯಿತು. ಅಷ್ಟೇ ಅಲ್ಲ, ಜಾನ್‌ಪುರದಲ್ಲಿನ ತಮ್ಮ ಅಭ್ಯರ್ಥಿಯನ್ನು ಮಾಯಾವತಿಯವರು ಬದಲಾಯಿಸಿದರು ಕೂಡ. ಮಾಯಾವತಿಯವರ ಈ ನಡೆಯು ಅವರ ಬೆಂಬಲಿಗರಲ್ಲಿ ಅಚ್ಚರಿ ಮೂಡಿಸಿತು ಮತ್ತು ಅವರು ಸಮಾಜವಾದಿ ನೇತೃತ್ವದ ಮೈತ್ರಿಕೂಟಕ್ಕೆ ಬೆಂಬಲ ನೀಡಿ ಬಿಜೆಪಿಯನ್ನು ಸೋಲಿಸಿ ಸಂವಿಧಾನವನ್ನು ಉಳಿಸಬೇಕು ಎಂಬ ತೀರ್ಮಾನಮಾಡಿದರು. ಇದು ವಿಪಕ್ಷಗಳ ಪರವಾಗಿ ಅತ್ಯಂತ ನಿರ್ಣಾಯಕವಾದ ಬೆಳವಣಿಗೆಯಾಗಿತ್ತು.

ಜೀವನೋಪಾಯ ಸಮಸ್ಯೆಗಳತ್ತ ಗಮನ

ಬಿಜೆಪಿಯಿಂದ ಸಂವಿಧಾನಕ್ಕೆ ಉಂಟಾಗುತ್ತಿರುವ ಅಪಾಯದ ಜತೆಯಲ್ಲೇ ಜನಸಾಮಾನ್ಯರ ದಿನನಿತ್ಯದ ಸಮಸ್ಯೆಗಳಾದ ನಿರುದ್ಯೋಗ, ಹೆಚ್ಚುತ್ತಿರುವ ಸಾಲಬಾಧೆ, ರೈತರ ಬಿಕ್ಕಟ್ಟು, ಮಹಿಳೆಯರು ಮತ್ತು ದಲಿತರ ಮೇಲಿನ ದೌರ್ಜನ್ಯಗಳ ಬಗ್ಗೆ ಮೈತ್ರಿಕೂಟವು ಹೆಚ್ಚು ಗಮನ ಹರಿಸಿತು. ಟಿಕೆಟ್ ಹಂಚಿಕೆ ಹಾಗೂ ಪಿಡಿಎ ಘೋಷಣೆಯು ದೊಡ್ಡ ಪ್ರಮಾಣದಲ್ಲಿ ಈ ಸಮುದಾಯದವರಲ್ಲಿ ಉತ್ಸಾಹ ಮೂಡಿಸಿತು, ಏಕೆಂದರೆ ಸಮಸ್ಯೆಗಳಿಂದ ಹೆಚ್ಚು ಬಾಧಿತರಾದವರಲ್ಲಿ ಈ ವಿಭಾಗದ ಜನರೇ ಹೆಚ್ಚಿದ್ದರು ಮತ್ತು ಅದು ಮೈತ್ರಿಕೂಟದ ಪಾಲುದಾರ ಪಕ್ಷಗಳ ಪರವಾಗಿ ನಿಲ್ಲುವಂತೆ ಮಾಡಿತು. ಬಿಜೆಪಿ ಸರ್ಕಾರದ ನೀತಿಗಳಿಂದ ಹೆಚ್ಚು ಬಾಧಿತರಾದ ಹಾಗೂ ಬಿಜೆಪಿಯ ವಿಷಪೂರಿತ ಕೋಮುವಾದಿ ಪ್ರಚಾರ ಹಾಗೂ ದಾಳಿಗಳಿಗೆ ತುತ್ತಾಗಿದ್ದ ಮುಸ್ಲಿಂ ಅಲ್ಪಸಂಖ್ಯಾತರು ಸಾಮೂಹಿಕವಾಗಿ ಮೈತ್ರಿಕೂಟಕ್ಕೆ ಬೆಂಬಲ ನೀಡಿದರು.

ಮೊದಲ ಸುತ್ತಿನ ನಂತರ ಮೈತ್ರಿಕೂಟದ ಆವೇಗ ಹಾಗೂ ಗೆದ್ದುಕೊಂಡ ಸ್ಥಾನಗಳ ಸಂಖ್ಯೆ



ಹೆಚ್ಚುತ್ತಿರುವಾಗಲೇ, ಉತ್ತರಪ್ರದೇಶದ ಪಶ್ಚಿಮ ಮತ್ತು ಕೇಂದ್ರ ಪ್ರದೇಶಗಳಲ್ಲಿ ಸಮಾಜವಾದಿ ಪಕ್ಷದ ಗೆಲುವಿನ ವೇಗ ಪ್ರಭಾವಶಾಲಿಯಾಗಿತ್ತು. 2012ರಲ್ಲಿ ಬಿಜೆಪಿಯ ಕೋಮು ಧೃವೀಕರಣದ ಪ್ರಚಾರದಿಂದಾಗಿ ಮತ್ತು ಸ್ವತಃ ಅಮಿತ್ ಶಾ ಅವರ ವಿಷಪೂರಿತ ಭಾಷಣಗಳಿಂದ ಉಂಟಾದ ಕೋಮು ಗಲಭೆಗಳಿಂದ ತತ್ತರಿಸಿದ್ದ ಪಶ್ಚಿಮ ಉತ್ತರಪ್ರದೇಶದ ಕೈರಾನಾದಲ್ಲಿ ಒಂದು ಪ್ರಮುಖ ರಾಜಕೀಯ ಮನೆತನದ ಮುಸ್ಲಿಂ ಗುಜ್ಜರ್ ಮಹಿಳೆಯು, ಪ್ರಸ್ತುತ ಸಂಸದನಾಗಿರುವ ಬಿಜೆಪಿಯ ಹಿಂದೂ ಗುಜ್ಜರ್ ಅಭ್ಯರ್ಥಿಯನ್ನು ಸಾಕಷ್ಟು ಅಂತರದಿಂದಲೇ ಸೋಲಿಸಿದ್ದಾರೆ. ಈ ಗೆಲುವಿಗೆ ರೈತರ ಹೋರಾಟವು ಪ್ರಮುಖ ಪಾತ್ರ ವಹಿಸಿದೆಯಾದರೂ ಅಭ್ಯರ್ಥಿಗಳ ಆಯ್ಕೆಯು ಬಹು ಮುಖ್ಯವಾದ ಅಂಶವಾಗಿತ್ತು ಎನ್ನುವುದನ್ನು ನೆನಪಿಡಬೇಕು. ಕೇವಲ ಸ್ಥಳೀಯ ಅಂಶಗಳಿಂದ ಮಾತ್ರವಲ್ಲ ರಾಷ್ಟ್ರೀಯ ದೃಷ್ಟಿಯಿಂದ ಕೂಡ ಈ ಚುನಾವಣಾ ಫಲಿತಾಂಶವು ಆಳವಾದ ವಿಶ್ಲೇಷಣೆಗೆ ಒಳಗಾಗಬೇಕಿದೆ.

ವರ್ಷದ ಅತ್ಯಂತ ಬಿಸಲಿನ ಝಳದಲ್ಲಿ ತೀವ್ರ ಸಂಕಟದ ದೀರ್ಘ ಕಾಲದ ಈ ಚುನಾವಣೆಯಲ್ಲಿ ಎಲ್ಲಾ ಏಳು ಸುತ್ತುಗಳಲ್ಲೂ ಉತ್ತರಪ್ರದೇಶ ಮತದಾನ ಮಾಡಿದೆ. ಗರಿಷ್ಠ ಸಂಖ್ಯೆಯ ಬಹಿರಂಗ ಸಭೆಗಳಲ್ಲಿ ಪ್ರಧಾನ ಮಂತ್ರಿಯವರು ಭಾಷಣ ಮಾಡುವುದರಿಂದ ಆದು ಬಿಜೆಪಿಗೆ ಅನುಕೂಲವಾಗುವುದು ಎಂದು ಆರಂಭದ ಎಣಿಕೆಯಾಗಿತ್ತು. ಆದರೆ ಅನಿರೀಕ್ಷಿತವಾಗಿ ಸಂಭವಿಸಿದ್ದೇನೆಂದರೆ, ಉತ್ತರಪ್ರದೇಶದಲ್ಲಿ ಜನರ ಬೆಂಬಲ ಹಾಗೂ ಆವೇಗವನ್ನು ಪಡೆಯಲು ವಿಪಕ್ಷಗಳ ಜಂಟೀ ಮೈತ್ರಿಕೂಟಕ್ಕೆ ಸಾಕಷ್ಟು ಸಮಯ ದೊರಕಿತು. ರಾಹುಲ್ ಗಾಂಧಿಯವರು ಕೇರಳದ ವಯನಾಡಿನಲ್ಲಿ ಚುನಾವಣೆ ಮುಗಿಸಿ ಇಲ್ಲಿ ಅಖಿಲೇಶ್ ಯಾದವರೊಂದಿಗೆ ಪ್ರಚಾರ ಮಾಡಲು ಸೇರಿಕೊಂಡರು. ಅದೇ ಸಮಯದಲ್ಲಿ, ರಾಯ್ ಬರೆಲಿಯಲ್ಲಿ ರಾಹುಲ್ ಸ್ಪರ್ಧೆ ಮಾಡಬೇಕು ಹಾಗೂ ಅಮೇಥಿಯಲ್ಲೂ ಸ್ಥಾನವನ್ನೂ ಬಿಡಬಾರದು ಎಂದು ಕಾಂಗ್ರೆಸ್ ತೀರ್ಮಾನ ಮಾಡಿತು. ಇದು ಜಂಟೀ ಪ್ರಚಾರಕ್ಕೆ ಭಾರಿ ಬಲವನ್ನು ತಂದುಕೊಟ್ಟಿತು, ರಾಜ್ಯದ ಉತ್ತರ ಭಾಗಗಳಲ್ಲಿ ನಂತರದ ಸುತ್ತಿನ ಮತದಾನದ ಹೊತ್ತಿಗೆ ಮೇಲುಗೈ ಪಡೆದು ಸಮಾಜವಾದಿ ಪಕ್ಷವು ಉತ್ತಮ ಚುನಾವಣಾ ಗೆಲುವನ್ನು ಪಡೆಯಲು ಸಾಧ್ಯವಾಯಿತು.

ಅಯೋಧ್ಯಾ ತೀರ್ಪಿನ ಮಹತ್ವ

ಫೈಜಾಬಾದ್ (ಅಯೋಧ್ಯಾ)ನಲ್ಲಿ ಸಮಾಜವಾದಿ ಪಕ್ಷದ ಗೆಲುವು ಜಾತ್ಯತೀತ ಮೌಲ್ಯಗಳಿಗೆ ಬದ್ಧರಾದವರಲ್ಲಿ ಸಂತೋಷವನ್ನು ಉಂಟುಮಾಡಿದೆ, ತಮ್ಮ ಉದ್ದೇಶಕ್ಕೆ ದೊರೆತ ಬಹು ದೊಡ್ಡ ವಿಜಯ ಎಂದು ಅವರು ಮನಗಂಡಿದ್ದಾರೆ. ಈ ಗೆಲುವು ಇನ್ನೂ ಹೆಚ್ಚಿನ ಸಂಕೀರ್ಣವಾಗಿರುವುದರಿಂದ ನಾವು ಅದರ ಕಾರಣಗಳನ್ನು ತಿಳಿಯಬೇಕಾದ ಅವಶ್ಯಕತೆ ಇದೆ. ಬಿಜೆಪಿ ಸದ್ಯದ ಸಂಸದ ಲಲ್ಲೂ ಸಿಂಗ್ ಒಬ್ಬ ರಜಪೂತ್ ಆಗಿದ್ದು, ಈ ಚುನಾವಣೆಯಲ್ಲಿ 400 ಕ್ಕಿಂತ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಅಗತ್ಯವಿದೆ, ಏಕೆಂದರೆ ಸಂವಿಧಾನವನ್ನು ಮೂಲಭೂತವಾಗಿ ಬದಲಾಯಿಸಬೇಕಾಗಿದೆ ಎಂದು ಹೇಳಿದ್ದ. ಅವರ ಈ ಪ್ರಚಾರವು ಸಂವಿಧಾನಕ್ಕೆ ಅಪಾಯವಿದೆ ಎಂಬ ವಿಪಕ್ಷಗಳ ಪ್ರಚಾರಕ್ಕೆ ವಿಶ್ವಾಸಾರ್ಹತೆಯನ್ನು ತಂದುಕೊಟ್ಟಿತು. ಜಾಣತನದ ರಾಜಕೀಯ ನಡೆಯನ್ನು ಅನುಸರಿಸಿದ ಸಮಾಜವಾದಿ ಪಕ್ಷವು ದಲಿತ ಉಪಜಾತಿಯ ಪಾಸಿ ಗುಂಪಿಗೆ ಸೇರಿದ ಅವಧೇಶ್ ಕುಮಾರ್ ಅವರನ್ನು ಅಭ್ಯರ್ಥಿಯನ್ನಾಗಿ ನಿಲ್ಲಿಸಿತ್ತು. ಅವಧೇಶ್ ಕುಮಾರ್ ಅವರು ಅದಾಗಲೇ 7 ಬಾರಿ ಸಮಾಜವಾದಿ ಪಕ್ಷದ ಶಾಸಕರಾಗಿ ಆ ಲೋಕಸಭಾ ಕ್ಷೇತ್ರಕ್ಕೆ ಸೇರಿರುವ ವಿಧಾನಸಭಾ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಇದು ದಲಿತ ಮತದಾರರಲ್ಲಿ ಒಂದು ವಿಶೇಷ ಉತ್ಸಾಹದ ಅಲೆಯನ್ನು ಎಬ್ಬಿಸಿತ್ತು. ಅವರ ಜತೆಯಲ್ಲಿ ಅಷ್ಟೇ ಸಂಖ್ಯೆಯಲ್ಲಿರುವ ದೊಡ್ಡ ಪ್ರಮಾಣದ ಮುಸ್ಲಿಮರು, ಯಾದವರು ಹಾಗೂ ಇತರ ವಿಭಾಗದ ಗ್ರಾಮೀಣ ಬಡವರು ಸೇರಿಕೊಂಡು ಅವರ ವಿಜಯವನ್ನು ಖಾತ್ರಿಪಡಿಸಿದರು.

ಅಯೋಧ್ಯಾ ವಿಧಾನಸಭಾ ವಲಯದಲ್ಲೇ, ಮಂದಿರ ನಿರ್ಮಾಣಕ್ಕಾಗಿ ಸಾವಿರಾರು ಜನರು ತಮ್ಮ ಮನೆ ಮಾರುಗಳನ್ನು ಹಾಗೂ ಜಮೀನುಗಳನ್ನು ಕಳೆದುಕೊಂಡು ವ್ಯಾಪಕ ಸಾರ್ವಜನಿಕ ಕೋಪವಿದ್ದಾಗಲೂ ಅಲ್ಲಿ ಬಿಜೆಪಿ ಗೆದ್ದಿದೆ. ಏಕೆಂದರೆ, ಪ್ರಾಯಶಃ ಈ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದ ಮೇಲ್ಜಾತಿಯ ಜನರು ಹೆಚ್ಚಿದ್ದಾರೆ ಮತ್ತು ಸಂಘ ಪರಿವಾರದ ಭದ್ರ ನೆಲೆ ಹಾಗೂ ಸಂಘಟನೆ ಇಲ್ಲಿ ಇದೆ. ಜನರ ಜೀವನೋಪಾಯದ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ರಾಮಮಂದಿರ ಉದ್ಘಾಟನಾ ಕಾರ್ಯಕ್ರಮದ ಭ್ರಾಂತಿಯು ಜನರ ಅತೃಪ್ತಿಯನ್ನು ಶಮನ ಮಾಡಲು ಸಾಧ್ಯವಾಗಿಲ್ಲ. ಸಂವಿಧಾನದ ರಕ್ಷಣೆ ಮಾಡಬೇಕೆಂಬ ಅಂಚಿನಲ್ಲಿರುವ ಜಾತಿಗಳ ಪ್ರೇರೇಪಣೆ ಮತ್ತು ಅವಧೇಶ್ ಕುಮಾರ್ ಅವರು ಅಭ್ಯರ್ಥಿಯಾಗಿರುವುದು ಸೃಷ್ಟಿಸಿದ ಉತ್ಸಾಹ ಹಾಗೂ ಜಾತಿ ಮೈತ್ರಿಗಳು ಜನರನ್ನು ಒಗ್ಗೂಡಿಸುವಲ್ಲಿ ಪ್ರಮುಖವಾದ ಪೂರಕ ಅಂಶಗಳಾಗಿವೆ.

'ನ ಮಥುರಾ ನ ಕಾಶಿ, ಜೀತೇಗಾ ಅವಧೇಶ್ ಪಾಸಿ' ಎಂಬ ಘೋಷಣೆ ಅಯೋಧ್ಯಾದಲ್ಲಿ ಜನಪ್ರಿಯವಾಗಿತ್ತು. ಹಿಂದೂಗಳಲ್ಲಿನ ಅಂಚಿನಲ್ಲಿರುವ ಸಮುದಾಯಗಳ ಒಂದು ಸದೃಢವಾದ ಸಾಮಾಜಿಕ ಒಗ್ಗೂಡುವಿಕೆಯು ಸೃಷ್ಟಿಸುವ ಆತ್ಮವಿಶ್ವಾಸ ಹಾಗೂ ಶಕ್ತಿಯು ಹೇಗೆ ಕೋಮುವಾದಿ ವಿಷಯಗಳನ್ನು ಅಪಹಾಸ್ಯ ಮಾಡುವಷ್ಟು ವಿಶ್ವಾಸವನ್ನು ಅವರಲ್ಲಿ ಮೂಡಿಸುತ್ತದೆ ಹಾಗೂ ಸಂಘ ಪರಿವಾರದ 'ಧಾರ್ಮಿಕ' ಪ್ರಚಾರವನ್ನು ತಿರಸ್ಕರಿಸುತ್ತದೆ ಎನ್ನುವುದಕ್ಕೆ ಇದು ಉದಾಹರಣೆಯಷ್ಟೆ. ಇಲ್ಲಿ, ಇನ್ನೂ ಸ್ವಾರಸ್ಯಕರ ವಿಷಯವೆಂದರೆ 1989 ರ ಸಾರ್ವತ್ರಿಕ ಚುನಾವಣೆಯಲ್ಲಿ ಸಂಘ ಪರಿವಾರವು ರಾಮ ಜನ್ಮಭೂಮಿ ಪ್ರಚಾರವನ್ನು ಉದ್ರಿಕ್ತ ಮಟ್ಟಕ್ಕೆ ಕೊಂಡುಹೋದಾಗಲೂ ಕೂಡ ಫೈಜಾಬಾದ್ ಸ್ಥಾನವನ್ನು ಸಿಪಿಐ ನ ಕಾಂ.ಮಿತ್ರಸೇನ್ ಯಾದವ್ ಗೆದ್ದಿದ್ದರು. ಆಗ ಕೂಡ ಈಗ ಅವಧೇಶ್ ಕುಮಾರ್ ಅವರನ್ನು ವಿಜಯದತ್ತ ಕೊಂಡೊಯ್ದು ಒಗ್ಗೂಡಿದ ಗುಂಪುಗಳೇ ಸಹಾಯ ಮಾಡಿದ್ದವು.

ಪ್ರಧಾನ ಮಂತ್ರಿಗಳ ಕ್ಷೇತ್ರ ವಾರಣಾಸಿಯಲ್ಲಿ ಕೂಡ ಹೀಗೆ ಒಗ್ಗೂಡಿದ ಸಂಘಟಿತ ಪ್ರಯತ್ನಗಳನ್ನು ಮಾಡಿದ್ದರೆ ಮೋದಿಯನ್ನು ಕೂಡ ಸೋಲಿಸಬಹುದಿತ್ತು ಎಂದು ಭಾವಿಸಲಾಗುತ್ತಿದೆ. ಅಲ್ಲಿನ ಕಾಂಗ್ರೆಸ್ ಅಭ್ಯರ್ಥಿ ಅಗತ್ಯ ಆತ್ಮವಿಶ್ವಾಸವನ್ನು ಹಾಗೂ ಶಕ್ತಿಯನ್ನು ಹೊಂದಿದ್ದರೆ ಅದು ಸಾಧ್ಯವಿತ್ತು. ಮೋದಿಯ ಶಕ್ತಿ ಕುಂದುತ್ತಿದೆ ಎಂಬ ಭಾವನೆ ಬಂದಾಗ ಆಕ್ರಮಣಕಾರಿ ಪ್ರಚಾರ ಮಾಡಿದ್ದರೆ ಅದು ಖಂಡಿತವಾಗಿ ಸಾಧ್ಯವಿತ್ತು.

ಬಿಜೆಪಿ ಸರ್ಕಾರವು ಮಹಿಳಾ ಮತದಾರರನ್ನು ಗುರಿಯಾಗಿಟ್ಟುಕೊಂಡು ಕೆಲಸ ಮಾಡುತ್ತಿತ್ತು. ಮಹಿಳಾ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಿದ್ದರು. ಆ ನಿಟ್ಟಿನಲ್ಲಿ ಅಖಿಲ ಬಾರತ ಪ್ರಸಾಸತ್ತಾತ್ಮಕ ಮಹಿಳಾ ಸಂಘಟನೆ (ಎ.ಐ.ಡಿ.ಡಬ್ಲ್ಯು.ಎ)ಯು ಹಲವಾರು ಜಿಲ್ಲೆಗಳಲ್ಲಿ ವ್ಯಾಪಕ ಪ್ರಚಾರ ಕೈಗೊಂಡಿತ್ತು. ಬಡ ಹಾಗೂ ಕೆಳ ಮಧ್ಯಮ ವರ್ಗದ ಮಹಿಳೆಯರು ಬೆಲೆ ಏರಿಕೆ ಹಾಗೂ ಮಕ್ಕಳ ನಿರುದ್ಯೋಗದ ಬಗ್ಗೆ ಆಕ್ರೋಶಗೊಂಡಿದ್ದರು. ಸ್ಪರ್ಧಾ ಪರೀಕ್ಷೆಗಳಲ್ಲಿ ಪ್ರಶ್ನೆಪತ್ರಿಕೆಗಳ ಸೋರಿಕೆಯು ಕೂಡ ಅವರಲ್ಲಿ ಅತೃಪ್ತಿ ಮೂಡಿಸಿತ್ತು. ಬಿಜೆಪಿ ಸರ್ಕಾರದ ಬಗ್ಗೆ ಬೇಸರಗೊಂಡಿದ್ದರು. ತಮಗೆ ಉಚಿತ ಅಕ್ಕಿ ನೀಡುವುದಕ್ಕಿಂತ ಮಕ್ಕಳಿಗೆ ಉದ್ಯೋಗ ಒದಗಿಸಿದ್ದರೆ ಹೆಚ್ಚು ಪ್ರಯೋಜನಕ್ಕೆ ಬರುತ್ತಿತ್ತು ಎನ್ನುತ್ತಿದ್ದರು. ಆದರೂ ಮೇಲ್ಜಾತಿಯ ಮಹಿಳೆಯರು ಸಂಘಪರಿವಾರದ ಕೋಮುವಾದಿ ಪ್ರಚಾರದಿಂದ ಪ್ರಭಾವಿತರಾಗಿದ್ದರು. ಒಂದು ಆಸಕ್ತಿದಾಯಕ ಸಂಗತಿಯೆಂದರೆ, ಕೆಲವು ಹಳ್ಳಿಗಳಲ್ಲಿ ಜನವಾದಿ ಮಹಿಳೆಯರು ಸಮಾಜವಾದಿ ಪಕ್ಷದ ಪರ ದಲಿತರು ಹಾಗೂ ಒಬಿಸಿಯವರ ನಡುವೆ ಪ್ರಚಾರಕ್ಕೆ ಹೋದಾಗ ಕೆಲವು ಬಡ ಮೇಲ್ಜಾತಿ ಮಹಿಳೆಯರು ಕೂಡ ಸಮಾಜವಾದಿ ಪಕ್ಷಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದರು.

ಕಾಂಗ್ರೆಸ್ ಕೂಟದ ಭಾಗವಾಗಿ 17 ಸೀಟುಗಳಲ್ಲಿ ಸ್ಪರ್ಧಿಸಿ 6 ನ್ನು ಗೆದ್ದಿತ್ತು. ಇದು ಮಹತ್ತರ ಸಾಧನೆಯೇನಲ್ಲ. ಕಾಂಗ್ರೆಸ್ ಸಂಘಟನೆ ದುರ್ಬಲವಾಗಿದೆ ಮತ್ತು ಹಲವು ಪ್ರದೇಶಗಳಲ್ಲಿ ಇಲ್ಲವೇ ಇಲ್ಲ. ಆದರೆ ರಾಯ್ ಬರೇಲಿ ಮತ್ತು ಅಮೇಥಿ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಸ್ಪರ್ಧಿಸಿದ್ದು, ಜಂಟಿ ಪ್ರಚಾರದಲ್ಲಿ ರಾಹುಲ್ ಗಾಂಧಿಯ ಭಾಗವಹಿಸುವಿಕೆ ಪಕ್ಷವನ್ನು ಬಲಪಡಿಸಿತು ಮತ್ತು ಮತದಾರರ ಉತ್ಸಾಹಕ್ಕೆ ಕಾರಣವಾಯಿತು. ●

14 ಗಂಟೆಗಳ ಕೆಲಸದ ದಿನ: ಐಟಿ ಉದ್ಯೋಗಿಗಳಿಂದ ವ್ಯಾಪಕ ಆಕ್ರೋಶ:

ಬೆಂಗಳೂರಿನಾದ್ಯಂತ ನಡೆಯುತ್ತಿವೆ ಗೇಟ್ ಸಭೆಗಳು ಮತ್ತು ಬೀದಿ ಪ್ರಚಾರಗಳು

ಮಾಹಿತಿ ತಂತ್ರಜ್ಞಾನ (ಐಟಿ) ಉದ್ಯಮಗಳಲ್ಲಿ ದಿನದ ಕೆಲಸದ ಅವಧಿಯನ್ನು 14 ಗಂಟೆಗೆ ಹೆಚ್ಚಿಸುವ ಮಸೂದೆ ತರಲು ಕರ್ನಾಟಕ ರಾಜ್ಯ ಸರ್ಕಾರ ಮುಂದಾಗಿದೆ. ಸರ್ಕಾರದ ಈ ನಡೆ ಐಟಿ ಉದ್ಯೋಗಿಗಳನ್ನು ಕೆರಳಿಸಿದೆ. ಇದು ಈ ಯುಗದಲ್ಲಿ ಕಾರ್ಮಿಕ ವರ್ಗದ ಮೇಲೆ ಇದುವರೆಗಿನ ಅತಿದೊಡ್ಡ ದಾಳಿ ಎಂದಿರುವ ಕರ್ನಾಟಕ ರಾಜ್ಯ ಐಟಿ/ಐಟಿಇಎಸ್ ನೌಕರರ ಸಂಘ (ಕೆಐಟಿಯು) ಇಂತಹ ಕ್ರಮವನ್ನು ತೀವ್ರವಾಗಿ ಖಂಡಿಸಿದೆ. ದಿನದಲ್ಲಿ 14 ಗಂಟೆಗಳ ಕೆಲಸ ಉದ್ಯೋಗಿಗಳ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಮಾತ್ರವಲ್ಲ, ಈ ವಲಯದಲ್ಲಿನ ಈಗಿನ ಬಹಳಷ್ಟು ಉದ್ಯೋಗಿಗಳು ಕೆಲಸ ಕಳೆದುಕೊಳ್ಳಬೇಕಾಗುತ್ತದೆ ಎಂದು ನೌಕರರ ಸಂಘ ಆರೋಪಿಸಿದೆ. ಸರ್ಕಾರದ ಈ ಕ್ರಮದ ವಿರುದ್ಧ ಐಟಿ ವಲಯದ ಉದ್ಯೋಗಿಗಳು ಐಕ್ಯ ಹೋರಾಟಕ್ಕೆ ಸಿದ್ಧರಾಗಿದ್ದಾರೆ. ಕೆಐಟಿಯು ಬ್ಯಾನರ್ ಅಡಿಯಲ್ಲಿ ಬೆಂಗಳೂರಿನಾದ್ಯಂತ ಗೇಟ್ ಸಭೆಗಳು ಮತ್ತು ಬೀದಿ ಪ್ರಚಾರಗಳು ನಡೆಯುತ್ತಿವೆ.



ಮಾಹಿತಿ ತಂತ್ರಜ್ಞಾನ (ಐಟಿ) ಉದ್ಯಮಗಳಲ್ಲಿ ದಿನದ ಕೆಲಸದ ಅವಧಿಯನ್ನು 14 ಗಂಟೆಗೆ ಹೆಚ್ಚಿಸಲು ಕರ್ನಾಟಕ ರಾಜ್ಯ ಸರ್ಕಾರ ಮುಂದಾಗಿದೆ. ಇದುವರೆಗೂ ಅಸ್ತಿತ್ವದಲ್ಲಿರುವ ಕಾಯಿದೆಯು ಓವರ್ ಟೈಮ್ ಸೇರಿದಂತೆ ದಿನಕ್ಕೆ ಗರಿಷ್ಠ 10 ಗಂಟೆಗಳ ಕೆಲಸವನ್ನು ಮಾತ್ರ ಅನುಮತಿಸುತ್ತದೆ. ಆದರೆ, ಈ ಅವಧಿಯನ್ನು 14 ಗಂಟೆಗಳಿಗೆ ಹೆಚ್ಚಿಸಲು ರಾಜ್ಯ ಸರ್ಕಾರ ಕಾಯಿದೆಗೆ ತಿದ್ದುಪಡಿ ತರುವ ಪ್ರಯತ್ನ ಮಾಡುತ್ತಿದೆ. ಪ್ರಸ್ತಾವಿತ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ತಿದ್ದುಪಡಿ) ಮಸೂದೆ, 2024 ರ ಮೂಲಕ, 14 ಗಂಟೆಗಳ ಕೆಲಸದ ದಿನವನ್ನು ತರಲು ಕರ್ನಾಟಕ ರಾಜ್ಯ ಸರ್ಕಾರ ಪ್ರಯತ್ನಿಸುತ್ತದೆ. ಇದು ಈ ಯುಗದಲ್ಲಿ ಕಾರ್ಮಿಕ ವರ್ಗದ ಮೇಲೆ ಇದುವರೆಗಿನ ಅತಿದೊಡ್ಡ ದಾಳಿ ಎಂದಿರುವ ಕರ್ನಾಟಕ ರಾಜ್ಯ ಐಟಿ/ಐಟಿಇಎಸ್ ನೌಕರರ ಸಂಘ (ಕೆಐಟಿಯು) ಇಂತಹ ಕ್ರಮವನ್ನು ತೀವ್ರವಾಗಿ ಖಂಡಿಸಿದೆ.

ಜುಲೈ 20 ರಂದು ಕಾರ್ಮಿಕ ಇಲಾಖೆಯು ಉದ್ಯಮದ ವಿವಿಧ ಪಾಲುದಾರರೊಂದಿಗೆ ಕರೆದ ಸಭೆಯಲ್ಲಿ 14 ಗಂಟೆಗಳ ಕೆಲಸದ ದಿನಕ್ಕೆ ಅನುಕೂಲವಾಗುವಂತೆ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸ್ಥಾಪನೆ ಕಾಯ್ದೆಗೆ ತಿದ್ದುಪಡಿ ಮಾಡುವ ಪ್ರಸ್ತಾಪವನ್ನು ಮಂಡಿಸಲಾಗಿದೆ. ಕಾರ್ಮಿಕ ಸಚಿವ ಶ್ರೀ ಸಂತೋಷ್ ಎಸ್. ಲಾಡ್, ಕಾರ್ಮಿಕ ಇಲಾಖೆ ಮತ್ತು ಐಟಿ–ಬಿಟಿ ಸಚಿವಾಲಯದ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಐಟಿ/ಐಟಿಇಎಸ್ ವಲಯದ ಉದ್ಯೋಗಿಗಳನ್ನು ಪ್ರತಿನಿಧಿಸಿ, ಕರ್ನಾಟಕ ರಾಜ್ಯ ಐಟಿ/ಐಟಿಇಎಸ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಸುಹಾಸ್ ಅಡಿಗ, ಅಧ್ಯಕ್ಷ ವಿಜೆಕೆ ಮತ್ತು ಕಾರ್ಯದರ್ಶಿ ಸೂರಜ್ ನಿಡಿಯಂಗ ಸಭೆಯಲ್ಲಿ ಭಾಗವಹಿಸಿದ್ದರು. KITU ಪ್ರತಿನಿಧಿಗಳು ಪ್ರಸ್ತಾವಿತ ತಿದ್ದುಪಡಿಗೆ ಬಲವಾದ ವಿರೋಧ ವ್ಯಕ್ತಪಡಿಸುತ್ತ 'ಇದು ಯಾವುದೇ ಕಾರ್ಮಿಕರ ವೈಯಕ್ತಿಕ ಜೀವನವನ್ನು ಹೊಂದುವ ಮೂಲಭೂತ ಹಕ್ಕಿನ ಮೇಲೆ ಆಕ್ರಮಣವನ್ನು ಉಂಟುಮಾಡುತ್ತದೆ' ಎಂದರು. ಈ ಸಂದರ್ಭದಲ್ಲಿ ಮಾತನಾಡಿದ ಕಾರ್ಮಿಕ ಸಚಿವರು ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳುವ ಮೊದಲು ಇನ್ನೊಂದು ಸುತ್ತಿನ ಚರ್ಚೆ ನಡೆಸುವುದಾಗಿ ಒಪ್ಪಿಕೊಂಡರು.

ಉದ್ಯಮಿಗಳ ಒತ್ತಡಕ್ಕೆ ಮಣಿದ ಸರ್ಕಾರ

ಐಟಿ/ಐಟಿಇಎಸ್/ಬಿಪಿಒ ವಲಯದಲ್ಲಿ ಕೆಲಸದ ಸಮಯವನ್ನು ದಿನದ 14 ಗಂಟೆಗಳಿಗೆ ಹೆಚ್ಚಿಸುವ ಕರ್ನಾಟಕ ಸರ್ಕಾರದ ಕ್ರಮದ ವಿರುದ್ಧ ಇಡೀ ಕಾರ್ಮಿಕ ವರ್ಗ ಪ್ರತಿರೋಧಕ್ಕೆ ಬರಬೇಕೆಂದು ಕರ್ನಾಟಕ ರಾಜ್ಯ ಐಟಿ/ಐಟಿಇಎಸ್ ನೌಕರರ ಸಂಘ (ಕೆಐಟಿಯು) ಕರೆ ನೀಡಿದೆ.

ಮಸೂದೆ ಕುರಿತು ಮಾತನಾಡಿದ ಕರ್ನಾಟಕ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು, "ಮಾಹಿತಿ ತಂತ್ರಜ್ಞಾನ ವಲಯದ ಉದ್ಯೋಗಿಗಳ ಕೆಲಸದ ಸಮಯವನ್ನು ವಿಸ್ತರಿಸುವ ಪ್ರಸ್ತಾವನೆಯು ಐಟಿ ಕಂಪನಿಗಳ ಮುಖ್ಯಸ್ಥರಿಂದ ಬಂದಿದೆಯೇ ಹೊರತು ಸರ್ಕಾರದಿಂದಲ್ಲ. ಉದ್ಯಮವು ಸರ್ಕಾರದ ಮೇಲೆ ಒತ್ತಡ ಹೇರುತ್ತಿದೆ ಮತ್ತು ಅದರ ಬಗ್ಗೆ ಚರ್ಚೆ ನಡೆಸಲು ವೇದಿಕೆಯನ್ನು ಸುಗಮಗೊಳಿಸಿದೆ" ಎಂದು ಹೇಳುತ್ತಾರೆ. ಐಟಿ ಕಂಪನಿಗಳ ಒತ್ತಡಕ್ಕೆ ಸರ್ಕಾರ ಮಣಿಯುತ್ತಿದೆ ಎಂಬುದನ್ನು ಸಚಿವರ ಈ ಹೇಳಿಕೆ ಸ್ಪಷ್ಟಪಡಿಸುತ್ತದೆ. ಉದ್ಯೋಗಿಗಳ ಆರೋಗ್ಯದ ಬಗ್ಗೆಯಾಗಲೀ ಅಥವಾ ಈ ನಿಯಮ ಜಾರಿಯಾದರೆ ಬಹಳಷ್ಟು ಉದ್ಯೋಗಿಗಳು ತಮ್ಮ ಉದ್ಯೋಗ ಕಳೆದುಕೊಂಡು ನಿರುದ್ಯೋಗಿಗಳಾಗುತ್ತಾರೆ ಎಂಬ ಕಾಳಜಿಯಾಗಲೀ ಕಾಂಗ್ರೆಸ್ ಸರ್ಕಾರಕ್ಕಿಲ್ಲ, ಬದಲಿಗೆ ಉದ್ಯಮಿಗಳ ಲಾಭದ ದುರಾಸೆಯ ಪರವಾಗಿ ಸರ್ಕಾರವೂ ನಿಂತಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ವಾರದಲ್ಲಿ 70 ಗಂಟೆ ಕೆಲಸ?

ವಾರದ 70 ಗಂಟೆಗಳ ಅಗತ್ಯತೆಯ ಕುರಿತು ಇನ್ಫೋಸಿಸ್ ಸಂಸ್ಥಾಪಕ ಎನ್‌ಆರ್ ನಾರಾಯಣ ಮೂರ್ತಿ ಅವರು ಕಳೆದ ವರ್ಷ ಹೇಳಿಕೆ ನೀಡಿದ್ದರು. ಇತ್ತೀಚೆಗಷ್ಟೇ ಓಲಾ ಸಿಇಒ ಭವಿಶ್ ಅಗರ್ವಾಲ್ ಅವರು 'ಮುಂದುವರಿದ ಆರ್ಥಿಕತೆಗಳೊಂದಿಗೆ ಸ್ಪರ್ಧಿಸಲು ಯುವಕರು ವಾರಕ್ಕೆ 70 ಗಂಟೆಗಳ ಕಾಲ ಕೆಲಸ ಮಾಡಬೇಕು' ಎಂದು ಸಲಹೆ ನೀಡಿದ್ದಾರೆ. ಇದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಟೀಕೆಗೆ ಗುರಿಯಾಗಿತ್ತು. ಇನ್ಫೋಸಿಸ್ ನಾರಾಯಣ ಮೂರ್ತಿ ಮತ್ತು ಓಲಾ ಭವಿಶ್ ಅಗರ್ವಾಲ್ ಅವರನ್ನು ಹೊರತುಪಡಿಸಿ, ಪ್ರಪಂಚದಾದ್ಯಂತದ ವ್ಯಾಪಾರ ಮತ್ತು ಕೈಗಾರಿಕೋದ್ಯಮಿಗಳು ಹೆಚ್ಚಿನ ಕೆಲಸದ ಸಮಯಕ್ಕಾಗಿ ಬೆಂಬಲಿಸುತ್ತಿದ್ದಾರೆ. ಚೆನ್ನಾಗಿ ತಿನ್ನಿ, ಬಲಿಷ್ಟವಾಗಿರಿ. ಅಲ್ಲದೆ, ದಿನಕ್ಕೆ 18 ಗಂಟೆ ಕೆಲಸ ಮಾಡಿ' ಎಂದು ಬಾಂಬೆ ಶೇವಿಂಗ್ ಕಂಪನಿಯ ಸಿಇಒ ಶಾಂತನು ದೇಶಪಾಂಡೆ ಈ ಹಿಂದೆ ಲಿಂಕ್ ಡಿನ್ ನಲ್ಲಿ ಪೋಸ್ಟ್ ಮಾಡಿದ್ದು ಚರ್ಚೆಯ ವಿಷಯವಾಗಿತ್ತು. ಅಲಿಬಾಬಾ ಸಂಸ್ಥಾಪಕ ಮತ್ತು ಚೀನಾದ ಪ್ರಸಿದ್ಧ ಉದ್ಯಮಿ ಜಾಕ್ ಮಾ ಅವರು 996 ಎಂಬ ನಿಯಮವನ್ನು ಪ್ರಸ್ತಾಪಿಸಿದರು. ಅದರ ಪ್ರಕಾರ... ನೌಕರರು ವಾರದ ಬೆಳಗ್ಗೆ 9 ರಿಂದ ರಾತ್ರಿ 9 ರವರೆಗೆ 6 ದಿನ ಕೆಲಸ ಮಾಡಬೇಕು. ಟ್ವಿಟರ್ ಅನ್ನು ಖರೀದಿಸುವ ಸಮಯದಲ್ಲಿ, ಎಲೋನ್ ಮಸ್ಕ್ ಅವರು ಕಂಪನಿ ಉಳಿಯಲು ವಾರಕ್ಕೆ 100 ಗಂಟೆಗಳ ಕಾಲ ಕೆಲಸ ಮಾಡುವಂತೆ ಉದ್ಯೋಗಿಗಳಿಗೆ ಇಮೇಲ್ ಮಾಡಿದ್ದರು ಎಂಬುದರ ಕುರಿತು ಚರ್ಚೆ ನಡೆದಿತ್ತು.

ಉದ್ಯಮಿಗಳ ಈ ಬಯಕೆಯನ್ನು ಈಡೇರಿಸಲು, ದಿನದಲ್ಲಿ 14 ಗಂಟೆ ಕೆಲಸದ ಅವಧಿ ತರುವ ಮೂಲಕ, ಐಟಿ ಉದ್ಯಮದಲ್ಲಿನ ವಾರದ ಐದು ದಿನಗಳ ಕೆಲಸದ ಅವಧಿಯನ್ನು 70 ಗಂಟೆಗಳಿಗೆ ಹೆಚ್ಚಿಸಲು ರಾಜ್ಯ ಸರ್ಕಾರ ಮುಂದಾಗಿದೆ ಎಂಬ ಟೀಕೆ ಉದ್ಯೋಗಿಗಳಿಂದ ವ್ಯಕ್ತವಾಗಿದೆ.

ಉದ್ಯೋಗ ಕಳೆದುಕೊಳ್ಳುತ್ತಾರೆ

"ದಿನದಲ್ಲಿ 14 ಗಂಟೆ ಅವಧಿಯ ಕೆಲಸದ ನಿಯಮ ಜಾರಿಗೆ ಬಂದರೆ, ಪ್ರಸ್ತುತ ಮೂರು–ಶಿಫ್ಟ್ ವ್ಯವಸ್ಥೆಗೆ ಬದಲಾಗಿ ಕಂಪನಿಗಳು ಎರಡು–ಶಿಫ್ಟ್ ವ್ಯವಸ್ಥೆಗೆ ಹೋಗಲು ಇದು ಅವಕಾಶ ನೀಡುತ್ತದೆ. ಇದರಿಂದ ಮೂರನೇ ಒಂದು ಭಾಗದಷ್ಟು ಉದ್ಯೋಗಿಗಳು ತಮ್ಮ ಉದ್ಯೋಗದಿಂದ ಹೊರಹಾಕಲ್ಪಡುತ್ತಾರೆ" ಎಂದು ಕೆಐಟಿಯು ಹೇಳಿದೆ.

ಸುದೀರ್ಘ ಕೆಲಸದ ಸಮಯದಿಂದ ಆರೋಗ್ಯ ಸಮಸ್ಯೆಗಳು

ದಿನದಲ್ಲಿ 14 ಗಂಟೆ ಕೆಲಸ ಎಂಬ ವಾದದಲ್ಲಿ ಅಭಿವೃದ್ಧಿ ಮತ್ತು ವ್ಯಾಪಾರದ ಲಾಭ ಮಾತ್ರ ಕಂಡುಬರುತ್ತಿದ್ದು, ಕಾರ್ಮಿಕರು ಮತ್ತು ನೌಕರರ ಆರೋಗ್ಯದ ಮೇಲೆ ಬೀರುವ ಪರಿಣಾಮವನ್ನು ಗಣನೆಗೆ ತೆಗೆದುಕೊಂಡಿಲ್ಲ ಎನ್ನುತ್ತಾರೆ ಆರೋಗ್ಯ ತಜ್ಞರು. 70 ಗಂಟೆಗಳ ಕೆಲಸವು ಅನೇಕ ಗಂಭೀರ ಕಾಯಿಲೆಗಳಿಗೆ ಕಾರಣವಾಗಬಹುದು ಮತ್ತು ಅಕಾಲಿಕ ಮರಣದ ಅಪಾಯವನ್ನು ಹೆಚ್ಚಿಸುತ್ತದೆ ಎಂದು ನರವಿಜ್ಞಾನಿಗಳು ಎಚ್ಚರಿಸಿದ್ದಾರೆ. ಹೈದರಾಬಾದಿನ ಅಪೋಲೋ ಆಸ್ಪತ್ರೆಗಳ ಹಿರಿಯ ನರವಿಜ್ಞಾನಿ ಡಾ. ಸುಧೀರ್ ಕುಮಾರ್ ಅವರು ದೀರ್ಘಾವಧಿಯ ಕೆಲಸದ ಅವಧಿಗಳ ವಿರುದ್ಧ ಎಚ್ಚರಿಕೆ ನೀಡಿದ್ದಾರೆ. ಡಾ. ಕುಮಾರ್ ಅವರು, ದೀರ್ಘ ಕೆಲಸದ ಅವಧಿ ವಾರದಲ್ಲಿ 55 ಗಂಟೆಗಳನ್ನು ಮೀರಿದರೆ, ಪಾರ್ಶ್ವವಾಯು, ರಕ್ತಕೊರತೆಯ ಹೃದ್ರೋಗ ಮತ್ತು ಅಕಾಲಿಕ ಮರಣದ ಅಪಾಯಗಳನ್ನು ಹೆಚ್ಚಿಸುವ ಅಧ್ಯಯನಗಳನ್ನು ಹೈಲೈಟ್ ಮಾಡಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆ (WHO)ಯ ಅಂಕಿಅಂಶಗಳ ಪ್ರಕಾರ, ವಾರಕ್ಕೆ 55 ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡುವುದರಿಂದ ಪ್ರತಿ ವರ್ಷ ಜಗತ್ತಿನಲ್ಲಿ 8,00,000 ಜನರು ಸಾವನ್ನಪ್ಪುತ್ತಾರೆ. ಅವರಲ್ಲಿ ಮುಕ್ಕಾಲು ಪಾಲು ಮಂದಿ ಮಧ್ಯವಯಸ್ಕ ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರು.

ಗಂಭೀರ ಆರೋಗ್ಯ ಸಮಸ್ಯೆಗಳು

ವಾರದಲ್ಲಿ 55 ಅಥವಾ ಅದಕ್ಕಿಂತ ಹೆಚ್ಚು ಗಂಟೆಗಳ ಕಾಲ ಕೆಲಸ ಮಾಡುವುದರಿಂದ ಹೃದಯಾಘಾತದ ಅಪಾಯವು ಶೇಕಡಾ 35 ರಷ್ಟು ಹೆಚ್ಚಾಗುತ್ತದೆ ಎಂದು ಆರೋಗ್ಯ ತಜ್ಞರು ಎಚ್ಚರಿಸಿದ್ದಾರೆ.

ಪುಟ 7 ಕ್ಕೆ



ಬೃಹತ್ ಇಮೇಲ್ ಅಭಿಯಾನ

ಕರ್ನಾಟಕದ ಕಾರ್ಮಿಕ ಸಚಿವರಾದ ಶ್ರೀ ಸಂತೋಷ್ ಎಸ್.ಲಾಡ್ ಅವರು ಮಾಧ್ಯಮವನ್ನು ಉದ್ದೇಶಿಸಿ ಮಾತನಾಡುತ್ತಾ, ಐಟಿ ವಲಯದ ಉದ್ಯೋಗಿಗಳ ದಿನದ ಕೆಲಸದ ಸಮಯವನ್ನು 14 ಗಂಟೆಗಳಿಗೆ ವಿಸ್ತರಿಸುವ ಪ್ರಸ್ತಾಪದ ಕುರಿತು ಮಧ್ಯಸ್ಥಗಾರರು ಮತ್ತು ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಕೇಳಿದ್ದಾರೆ. ಇದಕ್ಕೆ ಪ್ರತಿಕ್ರಿಯೆಯಾಗಿ, ಕರ್ನಾಟಕ ರಾಜ್ಯ ಐಟಿ/ಐಟಿಇಎಸ್ ನೌಕರರ ಸಂಘ (ಕೆಐಟಿಯು) ಈ ಪ್ರಸ್ತಾವನೆಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಲು ಇಮೇಲ್ ಅಭಿಯಾನವನ್ನು ಪ್ರಾರಂಭಿಸಿದೆ. ಎಲ್ಲಾ IT/ITES/BPO ನೌಕರರು, ಹಾಗೆಯೇ ಅವರ ಕುಟುಂಬದ ಸದಸ್ಯರು, ಸಂಬಂಧಿಕರು ಮತ್ತು ವಿಸ್ತೃತ ಕೆಲಸದ ಸಮಯದಿಂದ ಬಾಧಿತರಾಗಿರುವ ಸ್ನೇಹಿತರನ್ನು ಈ ಅಭಿಯಾನದಲ್ಲಿ ಭಾಗವಹಿಸುವಂತೆ ಅದು ಮನವಿ ಮಾಡಿದೆ. ಅದರ ಮನವಿ ಹೀಗಿದೆ.


ನಾವು ನಮ್ಮ ಧ್ವನಿಯನ್ನು ಕೇಳಬೇಕು

ಈ ಕೆಳಗಿನ ಸ್ವೀಕೃತದಾರರಿಗೆ ಇಮೇಲ್ ಕಳುಹಿಸಿ: ಮುಖ್ಯಮಂತ್ರಿ (cm.kar@nic.in), ಕಾರ್ಮಿಕ ಸಚಿವರು (ministerforlabour75@gmail.com), ಮತ್ತು KITU (noto14hrworkingday@gmail.com).

ಪ್ರಸ್ತಾವಿತ ತಿದ್ದುಪಡಿಯ ವಿರುದ್ಧ ನಿಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು 'ಕೆಲಸದ ಸಮಯದ ಹೆಚ್ಚಳವನ್ನು ನಾನು ವಿರೋಧಿಸುತ್ತೇನೆ' ಎಂಬ ವಿಷಯದ ಸಾಲನ್ನು ಬಳಸಿ.

ಮೇಲ್ ಅನ್ನು ಸುಲಭವಾಗಿ ಕಳುಹಿಸಲು ಕೆಳಗಿನ ಲಿಂಕ್ ಬಳಸಿ

https://tinyurl.com/14hrWorkDay







ಮಹಾರಾಷ್ಟ್ರ: ಮಹಾಯುತಿ ಸರಕಾರದ ಪೈಶಾಚಿಕ 'ಜನ ಸುರಕ್ಷಾ ಮಸೂದೆ'

ನೆರೆಯ ಮಹಾರಾಷ್ಟ್ರದ ವಿಧಾನ ಸಭೆಯಲ್ಲಿ ಜನರ ಸುರಕ್ಷತೆಗೆ ಅತ್ಯಂತ ಮಾರಕವಾದ ಪೈಶಾಚಿಕ ಮಸೂದೆಯೊಂದು ಮಂಡನೆಯಾಗಿದೆ. ಬಿಜೆಪಿ–ಶಿವಸೇನೆ(ಶಿಂಧೆ ಬಣ), ಎನ್.ಸಿ.ಪಿ.(ಅಜಿತ್ ಪವಾರ್ ಬಣ)ಗಳ ನೇತೃತ್ವದ 'ಮಹಾಯುತಿ' ಸರಕಾರವು ಈ ಸರ್ವಾಧಿಕಾರಿ ಧೋರಣೆಯ ಕರಾಳ ಮಸೂದೆಯನ್ನು ಮಂಡಿಸಿದೆ. ವಿಚಿತ್ರ ಮತ್ತು ಪರಿಸ್ಥಿತಿಯ ವ್ಯಂಗ್ಯ ಎಂದರೆ ಈ ಮಸೂದೆಯ ಹೆಸರು 'ಜನಸುರಕ್ಷಾ ಮಸೂದೆ–2024' ಎಂದಿರುವುದಾಗಿದೆ.

ಇತ್ತೀಚಿನ ಲೋಕಸಭಾ ಚುನಾವಣೆಯಲ್ಲಿ ಮಹಾರಾಷ್ಟ್ರದಲ್ಲಿ ಈ 'ಮಹಾಯುತಿ' ಕೂಟವು ತೀವ್ರ ಹಿನ್ನಡೆಯನ್ನು ಅನುಭವಿಸಿದೆ. ಇದಲ್ಲದೇ ಮಹಾರಾಷ್ಟ್ರದ ವಿಧಾನಸಭೆಗೆ ಚುನಾವಣೆ ತೀರಾ ಹತ್ತಿರವಾಗಿದೆ. ತೀವ್ರವಾದ ಸೋಲಿನಿಂದ ಬೆಚ್ಚಿಬಿದ್ದಿರುವ ಏಕನಾಥ ಶಿಂಧೆ ನೇತೃತ್ವದ ರಾಜ್ಯ ಸರಕಾರ ವಿರೋಧ ಪಕ್ಷಗಳನ್ನು ಹಣಿಯಲು, ಜನಚಳುವಳಿಗಳನ್ನು ಹತ್ತಿಕ್ಕಲು ಈ ಕರಾಳ ಮಸೂದೆಯನ್ನು ಮಂಡಿಸಿ ಕಾಯ್ದೆಯಾಗಿ ತರಲು ಹೊರಟಿದೆ.

ಚುನಾಯಿತ ಶಾಸಕರು ಮಸೂದೆಯ ಕುರಿತು ಪ್ರಜಾಸತ್ತಾತ್ಮಕವಾಗಿ ಚರ್ಚಿಸುವುದು ಸರಕಾರಕ್ಕೆ ಬೇಕಿಲ್ಲ. ಹಾಗಾಗಿ ಸರಕಾರ ಮಸೂದೆಯನ್ನು ವಿಧಾನಸಭಾ ಅಧಿವೇಶನದ ಕೊನೆಯ ಹಂತದಲ್ಲಿ ಮಂಡಿಸಿದೆ. ಈ ಮಸೂದೆಯನ್ನು 'ನಗರ ನಕ್ಸಲರು' ಎನ್ನಲಾಗುವವರು ಒಡ್ಡಿರುವ ಬೆದರಿಕೆಯನ್ನು ಎದುರಿಸಲು ತರಲಾಗುತ್ತಿದೆ ಎಂದು ಸರಕಾರ ಹೇಳಿಕೊಂಡಿದೆ. ರಾಜ್ಯದ ಸುರಕ್ಷತೆಗೆ ನಿಜವಾಗಿಯೂ ಬೆದರಿಕೆ ಎಂಬುದೇನಾದರೂ ಇದ್ದಿದ್ದಲ್ಲಿ ಸರಕಾರವು ಆ ಕುರಿತು ವಿಧಾನಸಭೆಯಲ್ಲಿ ಮುಕ್ತವಾದ ಚರ್ಚೆಗೆ ಸಿದ್ಧವಾಗಬೇಕಿತ್ತು. ಈ ರೀತಿಯಲ್ಲಿ ಕುತಂತ್ರಗಾರಿಕೆಯಿಂದ ಮಸೂದೆ ಮಂಡಿಸುವ ಅವಶ್ಯಕತೆ ಇರಲಿಲ್ಲ. ಶಿವಸೇನೆಯವರು ಮುಖ್ಯಮಂತ್ರಿಯಾಗಿದ್ದರೂ, ಬಿಜೆಪಿ ಪಕ್ಷದ ನಿಯಂತ್ರಣದಲ್ಲಿ ನಡೆಯುತ್ತಿರುವ ಮಹಾರಾಷ್ಟ್ರ ಸರಕಾರವು ತನ್ನ ಜನವಿರೋಧಿ ನೀತಿಗಳು ಮತ್ತು ದುರಾಡಳಿತದಿಂದಾಗಿ ಜನರಿಂದ ದೂರವಾಗಿದೆ. ಇಲ್ಲಿ ಪ್ರತಿಯೊಂದೂ ಕೊಳೆತು ನಾರುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಜನರಿಗೆ ಯಾವುದಾದರೂ ಒಂದು 'ಗುಮ್ಮ'ನನ್ನು ತೋರಿಸಿ ಜನರ ಗಮನವನ್ನು ಬೇರೆ ಕಡೆಗೆ ಸೆಳೆಯಬೇಕಾಗಿದೆ.

ಜನಚಳುವಳಿಗಳನ್ನು ಬಗ್ಗು ಬಡಿಯಲು ಹೊಸ ಬಡಿಗೆಯನ್ನು ಹುಡುಕುತ್ತಿರುವ ಮಹಾರಾಷ್ಟ್ರದ ಬಿಜೆಪಿ 'ನೇತೃತ್ವ'ದ 'ಮಹಾಯುತಿ' ಸರಕಾರವು ಜನರಿಗೆ 'ನಗರ ನಕ್ಸಲ'ರ ಗುಮ್ಮನನ್ನು ತೋರಿಸಿ, ಜನಸುರಕ್ಷಾ ಮಸೂದೆ–2024 ಎಂಬ ಮಸೂದೆಯನ್ನು ಕುತಂತ್ರದಿಂದ ವಿಧಾನಸಭೆಯಲ್ಲಿ ಮಂಡಿಸಿದೆ. ಜನಚಳುವಳಿಗಳು ಈ ದುಷ್ಟ ಪ್ರಯತ್ನವನ್ನು ಸೋಲಿಸಬೇಕಿದೆ.

ರಾಜ್ಯದ ಸುರಕ್ಷತೆಗೆ ಏನಾದರೂ ಆತಂಕವಿದಲ್ಲಿ, ಯಾವುದೇ ರಾಜಕೀಯ ಸಿದ್ಧಾಂತ ಹಿಂಸೆಗೆ ಕಾರಣವಾಗುವುದಾದಲ್ಲಿ ಅದನ್ನು ಎದುರಿಸಲು ಈಗಿರುವ ಕಾನೂನುಗಳೇ ಸಾಕಾಗಿವೆ. ಆದರೆ ಜನಚಳುವಳಿಗಳನ್ನು ಬಗ್ಗು ಬಡಿಯಲು ಸರಕಾರಕ್ಕೆ ಹೊಸತೊಂದು ಬಡಿಗೆ ಬೇಕಾಗಿದೆ. ಹೀಗಾಗಿ ಜನರನ್ನು ಹೀಗೆ ದಾರಿ ತಪ್ಪಿಸಲು ಪ್ರಯತ್ನಿಸಲಾಗುತ್ತಿದೆ.

ಚಿಂತಕರು–ಹೋರಾಟಗಾರರನ್ನು ಕೊಂದವರು ಯಾರು?

ಈ ಸಂದರ್ಭದಲ್ಲಿ ನಾವು ಕೆಲವು ವಿಚಾರಗಳನ್ನು ನೆನಪಿಸಿಕೊಳ್ಳಬೇಕು. ಖ್ಯಾತ ವಿಚಾರವಾದಿ ಡಾ. ನರೇಂದ್ರ ದಾಬೋಲ್ಕರ್ ಅವರನ್ನು ಕೊಂದವರು ಯಾರು? ಬರಹಗಾರ, ಹೋರಾಟಗಾರ ಕಾಂ. ಗೋವಿಂದ ಪನ್ಸಾರೆಯವರಿಗೆ ಗುಂಡು ಹೊಡೆದವರು ಯಾರು? ಕರ್ನಾಟಕದವರಾದ ಘನ ವಿದ್ವಾಂಸ, ಸಾಹಿತಿ ಡಾ.ಎಂ.ಎಂ. ಕಲ್ಬುರ್ಗಿಯವರು ಮತ್ತು ಪತ್ರಕರ್ತೆ ಗೌರಿ ಲಂಕೇಶರನ್ನು ಗುಂಡಿಕ್ಕಿ ಕ್ರೂರವಾಗಿ ಕೊಂದವರು ಯಾರು? ಈ ಎಲ್ಲ ಕೊಲೆಗಳನ್ನು ನಡೆಸಿದವರು ಬಲಪಂಥೀಯ 'ಸನಾತನ ಸಂಸ್ಥೆ'ಗೆ ಸೇರಿದವರು ಎಂಬುದು ನ್ಯಾಯಾಲಯದ ಕಲಾಪಗಳಲ್ಲಿ ಕಂಡು ಬಂದಿರುವುದು ಈಗಾಗಲೇ ಎಲ್ಲರಿಗೂ ಗೊತ್ತಿದೆ. ವಿಚಿತ್ರವೆಂದರೆ ಮಹಾರಾಷ್ಟ್ರ ಸರಕಾರವು ಈ ಬಲಪಂಥೀಯ 'ಭಯೋತ್ಪಾದಕ'ರನ್ನು ಬಿಟ್ಟು ಈ ಮಸೂದೆಯ ಮುಸುಕಿನಲ್ಲಿ ತದ್ವಿರುದ್ಧ ದಿಕ್ಕಿನತ್ತ ಗುರಿ ಇಡುತ್ತಿದೆ.

ಇತ್ತೀಚಿನ ಲೋಕಸಭಾ ಚುನಾವಣೆಗಳಲ್ಲಿ ಜನರು ಮೋದಿ–ಶಾ–ಯೋಗಿ ಎಂಬ ತ್ರಿಮೂರ್ತಿಗಳ ಕ್ರೌರ್ಯ–ಸರ್ವಾಧಿಕಾರಿ ಧೋರಣೆಯ ವಿರುದ್ಧ ಸರಿಯಾಗಿಯೇ ಕೆನ್ನೆಗೆ ಬಾರಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಫಡ್ನವಿಸ್–ಶಿಂಧೆ–ಅಜಿತ್ ಪವಾರ್ ಅವರ ತ್ರಿಮೂರ್ತಿ ಕೂಟಕ್ಕೂ ಅದೇ ಶಿಕ್ಷೆ ಕಾದಿದೆ ಎಂಬುದು ಖಚಿತವಾಗಿದೆ. ಹಿಂದೆ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದಾಗ ಇದೇ ಫಡ್ನವಿಸ್ ಕಾನೂನು ಬಾಹಿರ ಚಟುವಟಿಕೆ ತಡೆ ಕಾಯ್ದೆ(ಯುಎಪಿಎ) ಕಾಯ್ದೆಯನ್ನು ದುರುಪಯೋಗ ಮಾಡಿಕೊಂಡು ಭೀಮಾಕೊರೆಂಗಾವ್ ಪ್ರಕರಣದಲ್ಲಿ ಅಮಾಯಕ ವ್ಯಕ್ತಿಗಳ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹಾಕಿ ಮೋದಿಯವರ ಕೈಗೊಂಬೆಯಂತೆ ಕೆಲಸ ಮಾಡಿದ್ದನ್ನು ಜನರು ಮರೆತಿಲ್ಲ. ಈ ಪ್ರಕರಣದಲ್ಲಿ 'ಯುಎಪಿಎ' ಕಾಯ್ದೆಯಡಿ ಹಲವಾರು ಗೌರವಾನ್ವಿತ ಮಾನವ ಹಕ್ಕು ಹೋರಾಟಗಾರರು, ಚಿಂತಕರು ಐದು ವರ್ಷಗಳಿಂದ, ಕೆಲವರು ಮೂರು ವರ್ಷಗಳಿಂದ ಯಾವುದೇ ವಿಚಾರಣೆ ಇಲ್ಲದೇ ಜೈಲುವಾಸವನ್ನು ಅನುಭವಿಸುತ್ತಿದ್ದಾರೆ. ಅವರಲ್ಲಿ ಕೆಲವರಿಗೆ ಜಾಮೀನು ದೊರೆತಿದೆಯಾದರೂ ಅನಗತ್ಯ ವಿಳಂಬದಿಂದ ಅವರೂ ಸಾಕಷ್ಟು ತೊಂದರೆ ಅನುಭವಿಸಿದ್ದಾರೆ.

ಕೆಲವರು ಈಗಲೂ ರಾಜ್ಯದ ಜೈಲುಗಳಲ್ಲಿ ಬಂಧಿಗಳಾಗಿದ್ದಾರೆ. ದುರದೃಷ್ಟವಶಾತ್ 84 ವಯಸ್ಸಿನ ಸ್ಟಾನ್ ಸ್ವಾಮಿಯವರು ಯಾವುದೇ ವಿಚಾರಣೆಯೇ ಇಲ್ಲದೇ ಜೈಲಿನಲ್ಲಿಯೇ ಕೊನೆಯುಸಿರು ಎಳೆಯವಂತಾಯಿತು. ಈ ಎಲ್ಲ ಪ್ರಕರಣಗಳ ನಂತರವೂ ಬಿಜೆಪಿ ಮತ್ತು ಆರೆಸ್ಸೆಸ್‌ಗಳಿಗೆ ತೃಪ್ತಿಯಾಗಿಲ್ಲವೆಂದು ಕಾಣುತ್ತಿದೆ. ಅನೈತಿಕತೆ, ↗

ಅಪಾಯವೇನು? ಏನಿದೆ ಮಸೂದೆಯಲ್ಲಿ?

'ಕಾನೂನು ಬಾಹಿರ ಚಟುವಟಿಕೆ ತಡೆ ಕಾಯ್ದೆ(ಯು.ಎ.ಪಿ.ಎ.) ಎಂಬ ಕಾಯ್ದೆಯು ದೇಶದಲ್ಲಿ ಈಗಾಗಲೇ ಅಸ್ತಿತ್ವದಲ್ಲಿದ್ದು, ಅದು ಹೇಗೆ ದುರುಪಯೋಗವಾಗುತ್ತಿದೆ ಎಂಬುದು ಜಗಜ್ಜಾಹೀರಾಗಿರುವ ವಿಷಯ. ಇದಲ್ಲದೇ ಮಹಾರಾಷ್ಟ್ರದಲ್ಲಿ ಇಂತದ್ದೇ ಸ್ವರೂಪದ 'ಮಹಾರಾಷ್ಟ್ರ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ'(ಮೋಕಾ) ಎಂಬುದೊಂದು ಕಾಯ್ದೆ ಸಹ ಇದೆ. ಈ ಎರಡು ಕಾಯ್ದೆಗಳಲ್ಲದೇ ಅದೇ ಉದ್ದೇಶಕ್ಕೆ ಮತ್ತೊಂದು ಕಾಯ್ದೆಯನ್ನು ತರುವ ಕಾರಣವೇನು ಎಂಬ ಗಂಭೀರ ಪ್ರಶ್ನೆ ಇಲ್ಲಿ ಏಳುತ್ತದೆ.

ಇತ್ತೀಚಿನ ಲೋಕಸಭಾ ಚುನಾವಣೆಯ ಫಲಿತಾಂಶದ ಕುರಿತು ಮಾತನಾಡುವಾಗ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಸಿಂಧೆಯವರು "ನಕ್ಸಲರು ಈಗ ಬರೀ ಕಾಡುಗಳಲ್ಲಿ ಮಾತ್ರ ಇಲ್ಲ. ನಗರಗಳಲ್ಲಿಯೂ ಇದ್ದಾರೆ. ಎನ್.ಜಿ.ಓ.ಗಳಲ್ಲಿಯೂ ಸೇರಿ ಕೊಂಡಿದ್ದಾರೆ." ಎಂದು ಹೇಳಿದ್ದರು. "ನಗರ ಪ್ರದೇಶದಲ್ಲಿರುವ ನಕ್ಸಲ್ ಪರ ಸಹಾನುಭೂತಿ ಹೊಂದಿರುವವರನ್ನು ನಿಗ್ರಹಿಸುವುದು" ಕಾಯ್ದೆಯ ಉದ್ದೇಶ ಎಂದೂ, ಈಗಿರುವ ಕಾಯ್ದೆಗಳು ನಗರ ನಕ್ಸಲರನ್ನು ಸದೆಬಡಿಯಲು ಸಮರ್ಪಕವಾಗಿಲ್ಲ ಎಂದೂ ಸಹ ಸರಕಾರ ಹೇಳಿಕೊಂಡಿದೆ. ಈ ಎರಡೂ ಹೇಳಿಕೆಗಳನ್ನು ಜೋಡಿಸಿಕೊಂಡು ನೋಡಿದಾಗ ಯಾರಿಗೆ ಆದರೂ ಗೊತ್ತಾಗುವುದೇನೆಂದರೆ, ಚುನಾವಣೆಯಲ್ಲಿ ಬಿಜೆಪಿ–ಶಿವಸೇನೆ ಮೈತ್ರಿಕೂಟದ ಸೋಲಿಗೆ ಕಾರಣರಾದವರ ಮೇಲೆ ಸೇಡಿನ ಕ್ರಮವಹಿಸಲು ಸರಕಾರ ಹವಣಿಸುತ್ತಿದೆ. ಮಸೂದೆ ಎಷ್ಟು ಕ್ರೂರ ಸರ್ವಾಧಿಕಾರಿ ಎಂದು ಈ ಮುಂದಿನ ವಿವರಣೆಗಳನ್ನು ಓದಿದರೆ ತಿಳಿಯುತ್ತದೆ.

ಆಳುವ ಕೈಗಳಿಗೆ ಕರಾಳ ಅಧಿಕಾರ

'ವ್ಯಕ್ತಿಗಳು' ಮತ್ತು 'ಸಂಘ ಸಂಸ್ಥೆ'ಗಳ ಚಟುವಟಿಕೆಗಳನ್ನು 'ಕ್ರಿಮಿನಲ್ ಚಟುವಟಿಕೆ'ಗಳ ಪರಿಧಿಗೆ ತರುವ ಸಂಪೂರ್ಣ ಅಧಿಕಾರವನ್ನು ಈ ಮಸೂದೆ ಸರಕಾರಕ್ಕೆ ನೀಡುತ್ತದೆ. 'ಕಾನೂನು ಬಾಹಿರ ಚಟುವಟಿಕೆ'ಗಳಲ್ಲಿ ತೊಡಗಿರುವ ಮತ್ತು ಅವುಗಳನ್ನು ಬೆಂಬಲಿಸುವ, ಸಹಾಯ ಮಾಡುವ, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಂತಹ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ವ್ಯಕ್ತಿ/ಸಂಘ ಸಂಸ್ಥೆ, ಸಂಘಟನೆಗಳನ್ನು 'ಕಾನೂನು ಬಾಹಿರ' ಎಂದು ಮಸೂದೆಯಲ್ಲಿ ವಿವರಿಸಲಾಗಿದೆ. ಇಂತಹ ವ್ಯಕ್ತಿಗಳಿಗೆ 3 ರಿಂದ 7 ವರ್ಷ ಜೈಲು ಶಿಕ್ಷೆ ಹಾಗೂ 3 ರಿಂದ 5 ಲಕ್ಷದವರೆಗೆ ದಂಡ ವಿಧಿಸಲು ಈ ಮಸೂದೆಯು ಅವಕಾಶ ನೀಡುತ್ತದೆ.

ಇಲ್ಲಿ 'ಕಾನೂನು ಬಾಹಿರ' ಎಂಬುದರ ವಿವರಣೆಯನ್ನು ಅಸ್ಪಷ್ಟವಾಗಿ ಇರಿಸಲಾಗಿದೆ– ಹೀಗಾಗಿ ಇದು ದುರುಪಯೋಗಕ್ಕೆ ಬಹುದೊಡ್ಡ ಅವಕಾಶವನ್ನು ನೀಡುತ್ತದೆ. ಇನ್ನೂ ಅಪಾಯಕರ ವಿಷಯವೆಂದರೆ, ಮಸೂದೆಯ ಸೆಕ್ಷನ್ 9(1) ರ ಪ್ರಕಾರ ವಿಚಾರಣೆಗೂ ಮುನ್ನವೇ ಆರೋಪಿಯನ್ನು ಪೋಲೀಸರು ಅವರ ಮನೆಯಿಂದ ವಶಕ್ಕೆ ಪಡೆಯಬಹುದಾಗಿದೆ.

ಮಸೂದೆಯ ಸೆಕ್ಷನ್ 10(1)ರ ಪ್ರಕಾರ ಆರೋಪಿಗಳ ಬ್ಯಾಂಕ್ ಖಾತೆ ಸ್ಥಗಿತ ಮಾಡಬಹುದು. ಸೆಕ್ಷನ್ 8(2)ರ ಪ್ರಕಾರ ಆರೋಪಿಗಳಿಗೆ ಮಾತ್ರವಲ್ಲ, ಅರೋಪಿಯ ಜೊತೆ 'ಗುರುತಿಸಿ'ಕೊಂಡವರಿಗೂ ಬಂಧನ, ವಿಚಾರಣೆ, ಶಿಕ್ಷೆ ಇದೆ. ಮತ್ತು ಈ ಮಸೂದೆಯ ಪ್ರಕಾರ ಯಾವುದೇ ಅಪರಾಧವೂ ಜಾಮೀನು ರಹಿತ. ಈ ಮಸೂದೆಯು ಕಾಯ್ದೆಯಾದರೆ ಸಂತ್ರಸ್ತರು, ಹೈಕೋರ್ಟ್ ಅಥವಾ ಸುಪ್ರಿಂ ಕೋರ್ಟ್‌ನಲ್ಲಿ ಮಾತ್ರವೇ ಮನವಿ ಮಾಡಬಹುದು. ಜಿಲ್ಲಾ ನ್ಯಾಯಾಲಯ ಮತ್ತು ಅದಕ್ಕಿಂತ ಕೆಳ ನ್ಯಾಯಾಲಯಗಳಲ್ಲಿ ಮನವಿ ಮಾಡುವಂತಿಲ್ಲ.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳನ್ನು ಒಳಗೊಂಡ 3 ಜನರ ಸಲಹಾ ಮಂಡಳಿಯು ಪ್ರಕರಣಗಳನ್ನು ನಿರ್ವಹಿಸುತ್ತದೆ ಎಂದು ಮಸೂದೆಯು ಹೇಳುತ್ತದೆ. ಆದರೂ ಸಹ ಈ ಸಲಹಾ ಮಂಡಳಿಯು ಸರಕಾರದಿಂದ ನೇಮಕ ಆಗುವುದರಿಂದ ಕಾಯ್ದೆ ದುರುಪಯೋಗವಾಗುವ ಎಲ್ಲ ಸಾಧ್ಯತೆಗಳೂ ದಟ್ಟವಾಗಿವೆ. ಎಡಪಂಥೀಯರನ್ನು ಬಿಡಿ, ಆಪ್ ಪಕ್ಷದ ಮುಖಂಡ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲರಂತಹವರನ್ನೂ ಸ್ವತಃ ದೇಶದ ಪ್ರಧಾನಿ ನರೇಂದ್ರ ಮೋದಿ, ಗೃಹಮಂತ್ರಿ ಅಮಿತ್ ಶಾರಂತವರು 'ನಗರ ನಕ್ಸಲ್' ಎಂದು ಕರೆದಿರುವುದಿದೆ. ಬಿಜೆಪಿ ಪಕ್ಷವನ್ನು ಟೀಕಿಸುವ, ಆರೆಸ್ಸೆಸ್–ಬಿಜೆಪಿಗಳನ್ನು ವಿರೋಧಿಸುವ ಪಕ್ಷಗಳು, ಜನಚಳುವಳಿಯ ರೈತರು, ವಿದ್ಯಾರ್ಥಿಗಳು ಎಲ್ಲರೂ ದೇಶದ್ರೋಹಿಗಳಾಗಿ ಕಾಣುತ್ತಿರುವ ಇಂತಹ ಸನ್ನಿವೇಶದಲ್ಲಿ ಇಂತಹ ಒಂದು ಕರಾಳ ಮಸೂದೆ, ಕಾಯ್ದೆಯಾಗುವುದು ಪ್ರಜಾಪ್ರಭುತ್ವದ ಭೀಕರ ಹತ್ಯೆಯಾಗುತ್ತದೆ.

(ಮಾಹಿತಿ ಮೂಲ: 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆ ಮತ್ತು 'ಪ್ರಜಾವಾಣಿ' ಪತ್ರಿಕೆಗಳ ಲೇಖನಗಳು)

ಬಜೆಟ್ 2024: ಕಾರ್ಪೊರೇಟ್–ಪರ ವಂಚನೆಯ ಉದ್ಯೋಗ ಯೋಜನೆಗಳು

ಪ್ರಕಾಶ್ ಕಾರತ್

ಭಾರತೀಯ ಆರ್ಥಿಕತೆಯು ನಿರ್ಣಾಯಕ ಕವಲು ದಾರಿಯಲ್ಲಿದೆ. ಜಿಡಿಪಿ ಬೆಳವಣಿಗೆಯು ಯಾವುದೇ ರೀತಿಯಲ್ಲಿ ಉದ್ಯೋಗ ಸೃಷ್ಟಿಯ ಸಾಮರ್ಥ್ಯಕ್ಕೆ ಪೂರಕವಾಗಿಲ್ಲ. ಸೃಷ್ಟಿಯಾದ ಉದ್ಯೋಗಗಳಲ್ಲೂ, ಶೇಕಡ 57.3ರಷ್ಟು ಸ್ವಯಂ ಉದ್ಯೋಗವಾಗಿದೆ. ಶೇಕಡ 18.3 ವೇತನ ನೀಡದ ಮನೆ ಕೆಲಸಗಾರರು ಮತ್ತು ಶೇಕಡ 45ಕ್ಕಿಂತ ಹೆಚ್ಚಿನವರು ಕೃಷಿಯಲ್ಲಿ ಉದ್ಯೋಗಿಗಳಾಗಿರುವವರು. 2020 ಮಾರ್ಚ್‌ನಲ್ಲಿ ಆರಂಭಿಸಿದ ಉತ್ಪಾದನೆ ಸಂಪರ್ಕಿತ ಉತ್ತೇಜನ (ಪ್ರೊಡಕ್ಷನ್ ಲಿಂಕ್ಡ್ ಇನ್ಸೆಂಟಿವ್–ಪಿಎಲ್‌ಐ) ಯೋಜನೆಯು ಉತ್ಪಾದನಾ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿಸಲು ತೀವ್ರ ವಿಫಲವಾಗಿದೆ ಮತ್ತು ಹಿಂದಿನ ವರ್ಷಕ್ಕೆ ಹೋಲಿಸಿದರೆ (ಇಯರ್–ಆನ್–ಇಯರ್) 2022–23ರಲ್ಲಿ ಭಾರತದ ಉತ್ಪಾದನಾ ಉತ್ಪಾದಕತೆಯು ಶೇಕಡ 2.38ರಷ್ಟು ಕುಸಿದಿದೆ. ಆದರೆ ಮೋದಿ ಸರಕಾರ ಕೊಡಮಾಡಿದ ಉತ್ತೇಜಕಗಳು (ಇನ್ಸೆಂಟಿವ್) ಮತ್ತು ಇತರ ಭಾರಿ ಕೊಡುಗೆಗಳಿಂದ ಭಾರತದ ಲಿಸ್ಟೆಡ್ (ಷೇರು ಮಾರುಕಟ್ಟೆಯಲ್ಲಿ ನೊಂದಾವಣೆಯಾದ) ಕಂಪನಿಗಳು 2023–24ರಲ್ಲಿ ಶೇಕಡ 10.1ರಷ್ಟು ಅಪಾರ ಪ್ರಮಾಣದ ಲಾಭವನ್ನು ಗೋಚಿಕೊಂಡಿವೆ. ಇದು 2007–08ರ ನಂತರ ಅತ್ಯಧಿಕ ಲಾಭವಾಗಿದೆ. ಹೆಚ್ಚುತ್ತಿರುವ ಕಾರ್ಮಿಕರ ಬೇಡಿಕೆಯನ್ನು ಪೂರೈಸಲು ಕೃಷಿಯೇತರ ವಲಯದಲ್ಲಿ ವಾರ್ಷಿಕ ಸರಾಸರಿ ಸುಮಾರು 78.5 ಲಕ್ಷದಷ್ಟು ಉದ್ಯೋಗವನ್ನು ಸೃಷ್ಟಿಸುವುದು ಭಾರತೀಯ ಆರ್ಥಿಕತೆಗೆ ಅಗತ್ಯ ಎಂದು ಈಗ ಆರ್ಥಿಕ ಸಮೀಕ್ಷೆ ಹಳಹಳಿಸಿದೆ.

ಈ ತೀವ್ರವಾದ ಉದ್ಯೋಗ ಬಿಕ್ಕಟ್ಟು ಮತ್ತು ಲೋಕಸಭೆ ಚುನಾವಣೆ ಪ್ರಚಾರದಲ್ಲಿ ಈ ವಿಷಯ ಬಿಸಿ ಚರ್ಚೆಯನ್ನು ಹುಟ್ಟು ಹಾಕಿದ್ದನ್ನು ಗಮನಿಸಿದರೆ, ಮೂರನೇ ಮೋದಿ ಸರಕಾರದ ಮೊದಲ ಕೇಂದ್ರ ಬಜೆಟ್ ಉದ್ಯೋಗ ಸೃಷ್ಟಿಗೆ ವಿಶೇಷ ಗಮನ ನೀಡಲಿದೆ ಮತ್ತು ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿದೆ ಎಂದು ಎಲ್ಲರೂ ಭಾವಿಸಿದ್ದರು. ಆದರೆ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್ ಔಪಚಾರಿಕ ವಲಯದಲ್ಲಿ ಉದ್ಯೋಗ ಸೃಷ್ಟಿಸುವ ಪೊಳ್ಳು ಹಾಗೂ ವಂಚನೆಯ ಕ್ರಮಗಳನ್ನು ಪ್ರಕಟಿಸಿದ್ದಾರೆ. ಅದೇ ಹೊತ್ತಿಗೆ ಅವರು ಕಾರ್ಪೊರೇಟ್‌ಗಳಿಗೆ ಸಾರ್ವಜನಿಕ ಹಣವನ್ನು ಉದಾರವಾಗಿ ಧಾರೆಯೆರೆದು ಕೊಟ್ಟಿದ್ದಾರೆ.



ಹಣಕಾಸು ಮಂತ್ರಿಯವರು ಹಲವು ಉದ್ಯೋಗ ಸಂಪರ್ಕಿತ ಉತ್ತೇಜನ (ಇಎಲ್‌ಐ) ಯೋಜನೆಗಳನ್ನು ಪ್ರಕಟಿಸಿದ್ದು ಕಾರ್ಪೊರೇಟ್ ಪಂಡಿತರ ವಲಯದಲ್ಲಿ ಅದು ಭಾರಿ ಹೈಪ್ ಮೂಡಿಸಿದೆ. ಸ್ಕೀಮ್ 'ಎ' ಎಲ್ಲ ಉದ್ಯೋಗದಾತರಿಗೆ (ಅಂದರೆ ಮಾಲಿಕರು) ಹಾಗೂ ಸ್ಕೀಮ್ ಬಿ ಮತ್ತು ಸಿ ನಿರ್ದಿಷ್ಟ ವಿಭಾಗಗಳಿಗೆ ಅನ್ವಯವಾಗುತ್ತದೆ.

ಸ್ಕೀಮ್ ಎ ಪ್ರಕಾರ, ಉದ್ಯೋಗದಾತರೊಬ್ಬರು ಯಾವುದೇ ಹೊಸ ಉದ್ಯೋಗಿಯನ್ನು ನೇಮಿಸಿಕೊಂಡರೆ ಅಥವಾ ಇಪಿಎಫ್‌ಒದಲ್ಲಿನ ಅನ್‌ಲಿಸ್ಟೆಡ್ ಕಾರ್ಮಿಕರನ್ನು ಪಟ್ಟಿ ಮಾಡಿದರೆ, ಅಂಥ ಸಂದರ್ಭದಲ್ಲಿ ಸರಕಾರವು ಕಾರ್ಮಿಕರ ಒಂದು ತಿಂಗಳ ಸಂಬಳವನ್ನು ಗರಿಷ್ಠ 15,000 ರೂಪಾಯಿ ಮಿತಿಗೆ ಒಳಪಟ್ಟು ಮೂರು ಕಂತುಗಳಲ್ಲಿ ಪಾವತಿಸುತ್ತದೆ. ಉದ್ಯೋಗದಾತರು ಪಾವತಿಸಬೇಕಾದ ವಾರ್ಷಿಕ ಕೂಲಿಯ 12ನೇ ಒಂದು ಭಾಗವನ್ನು ಸರಕಾರವೇ ನೇರವಾಗಿ ಸಬ್ಸಿಡಿ ರೂಪದಲ್ಲಿ ಕೊಡುತ್ತದೆ ಎನ್ನುವುದು ಇದರ ಅರ್ಥವಾಗಿದೆ. ಕನಿಷ್ಠ 50 ಹೊಸ ಇಪಿಎಫ್‌ಒಯೇತರ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವ ಉತ್ಪಾದನಾ ವಲಯದ ಮಾಲಿಕರು ಸ್ಕೀಮ್ ಬಿ ಗೆ ಅರ್ಹರಾಗುತ್ತಾರೆ. ಈ ಯೋಜನೆಯಡಿ, ಉದ್ಯೋಗಿಗಳು ಮತ್ತು ಉದ್ಯೋಗದಾತ ಇಬ್ಬರದ್ದೂ ಇಪಿಎಫ್‌ಒ ಪಾಲನ್ನು ಸರಕಾರವೇ ಭರಿಸಲಿದೆ. ಅಂದರೆ ವೇತನದ ಶೇಕಡ 24ನ್ನು ಜನರ ಹಣದಿಂದ ನೇರವಾಗಿ ನೀಡಲಾಗುತ್ತದೆ. ಸ್ಕೀಮ್ ಸಿ ಅನ್ವಯ, ಯಾವುದೇ ಕಂಪನಿಯು 2–5 ಹೊಸ ಕೆಲಸಗಾರರನ್ನುನೇಮಿಸಿಕೊಂಡರೆ ಉದ್ಯೋಗದಾತರ ಪ್ರತಿ ತಿಂಗಳ ಇಪಿಎಫ್‌ಒ ಪಾಲಾದ ಗರಿಷ್ಠ 3,000 ರೂಪಾಯಿವರೆಗಿನ ಹಣವನ್ನು ಸರಕಾರವೇ ನೀಡಲಿದೆ. ಅಂದರೆ, ಉದ್ಯೋಗಿಗಳ ವೇತನದ ಒಟ್ಟು ಶೇಕಡ 32.33ರಷ್ಟು ಸಬ್ಸಿಡಿಯನ್ನು ಸರಕಾರವು ಸಾರ್ವಜನಿಕ ಖಜಾನೆಯಿಂದ ಕೊಡುತ್ತದೆ ಎಂದಾಯಿತು.

ಅತ್ಯಂತ ಅಪಾಯಕಾರಿ

ಈ ಯೋಜನೆಯ ಲಾಭ ಪಡೆಯಬೇಕಾದರೆ ಕಂಪನಿಗಳು ಪ್ರತಿ ವರ್ಷ ಹೊಸ ನೌಕರರನ್ನು ನೇಮಿಸಿಕೊಳ್ಳಬೇಕು ಎನ್ನುವುದು ಅತ್ಯಂತ ಅಪಾಯಕಾರಿ ಅಂಶವಾಗಿದೆ. ಅಂದರೆ, ಮೊದಲ ವರ್ಷ ನೇಮಿಸಿಕೊಂಡ ನೌಕರರು ಫಿಕ್ಸೆಡ್–ಅವಧಿಗೆ ನೇಮಕಗೊಂಡವರಲ್ಲದೆ ಬೇರೇನೂ ಅಲ್ಲ ಎಂದಾಗುತ್ತದೆ ಮತ್ತು ಒಂದು ವರ್ಷ ಪೂರ್ಣಗೊಂಡ ಮೇಲೆ ಅವರನ್ನು ಹೊರಹಾಕಲಾಗುತ್ತದೆ. ಈ ಯೋಜನೆಗಳು, ಸರಕಾರಿ ಸಬ್ಸಿಡಿ ಪಡೆಯುವ ಉದ್ದೇಶದಿಂದ ರಿಟ್ರೆಂಚ್‌ಮೆಂಟ್ ಪ್ರಕ್ರಿಯೆಯನ್ನು ತೀವ್ರಗೊಳಿಸಲಿದೆ.

ಇಂಟರ್ನ್‌ಶಿಪ್ ನೀತಿಯು ಇನ್ನೊಂದು ದೊಡ್ಡ ಹೊಡೆತವಾಗಿದೆ. ಹೆಚ್ಚು ಲಾಭ ಮಾಡುವ ಉನ್ನತ 500 ಕಂಪನಿಗಳಿಗೆ ತಮ್ಮ ಇಡೀ ಉತ್ಪಾದನೆಯನ್ನು ಇಂಟರ್ನಿಗಳು/ ಅಪ್ರೆಂಟೈಸ್‌ಗಳಿಂದ ಮಾಡಿಸಿಕೊಳ್ಳಲು ಅವಕಾಶ ಕೊಡುವ ಅಪರಾಧವನ್ನು ಈ ನೀತಿ ಮಾಡಿದೆ. ಮಾಸಿಕ 500 ರೂಪಾಯಿ ಸ್ಟೈಪೆಂಡ್ ಹಾಗೂ ಏಕ–ಬಾರಿಯ 6,000 ರೂಪಾಯಿ ನೆರವನ್ನು ಸರಕಾರವೇ ಭರಿಸಲಿದೆ. ತರಬೇತಿಯ ಉಳಿದ ವೆಚ್ಚವನ್ನು ಕಂಪನಿಯ ಸಿಎಸ್‌ಆರ್ ನಿಧಿಗಳಿಂದ ಭರಿಸಿಕೊಳ್ಳಬಹುದಾಗಿದೆ. ಈ ಕುಖ್ಯಾತ ಯೋಜನೆಯ ಮೂಲಕ ಕಾರ್ಪೊರೇಟ್–ಪರ ಸರಕಾರವು ಉದ್ಯೋಗ ಸಂಬಂಧವನ್ನು ಆಟೋಮೇಶನ್ ಮತ್ತು ತಂತ್ರಜ್ಞಾನದ ಜ್ಞಾನವನ್ನು ಹೊಂದಿರುವ ಹಾಗೂ ತ್ವರಿತವಾಗಿ ಕಲಿಯುವ ಕೌಶಲವಿರುವ ತಾಜಾ ಇಂಟರ್ನ್ ಬ್ಯಾಚ್‌ಗಳು ಉತ್ಪಾದನೆ ಪ್ರಕ್ರಿಯೆಯ ಇಡೀ ಹೊಣೆಯನ್ನು ಹೊರುವಂಥ ದುರ್ಬಲ ದಿಕ್ಕಿನಲ್ಲಿ ಕೊಂಡೊಯ್ಯುತ್ತದೆ. ನಿರುದ್ಯೋಗಿಗಳು ಮತ್ತು ವೃತ್ತಿ ಶಿಕ್ಷಣ ಪಡೆದ ಯುವಜನರ ಬೃಹತ್ ಮೀಸಲು ಪಡೆಯ ಯುವಜನರು ಪ್ರತಿ ವರ್ಷ ಹಳೆಯ ಬ್ಯಾಚ್‌ನವರು ಉತ್ಪಾದನಾ ಪ್ರಕ್ರಿಯೆಯಿಂದ ಹೊರಗೆ ಬರುವುದನ್ನು ಫ್ಯಾಕ್ಟರಿ ಗೇಟ್‌ಗಳಲ್ಲಿ ನಿಂತು ಕಾಯುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ರವೆಯಷ್ಟೂ ಪರಿಹಾರವಿಲ್ಲ

ಸಾರ್ವಜನಿಕ ಖಜಾನೆಯ ಹಣವನ್ನು ಖಾಸಗಿಯವರ ಜೇಬಿಗೆ ತುಂಬಿಸುವ ಈ ಯೋಜನೆಯು ಖಂಡಿತಕ್ಕೂ ನಿರುದ್ಯೋಗ ಸಮಸ್ಯೆಯನ್ನು ರವೆಯಷ್ಟಾದರೂ ಪರಿಹರಿಸುವುದಿಲ್ಲ. ಉತ್ಪಾದನೆ ಆಧಾರಿತ ಲಾಭವನ್ನು ಹೆಚ್ಚಿಸುವ ಮಾರ್ಗವೆಂದರೆ ಅದರಲ್ಲಿ ವೇತನ ನೀಡದ ಕಾರ್ಮಿಕರ ಭಾಗವನ್ನು ಹೆಚ್ಚಿಸುವುದು ಎಂದಾಗಿದೆ. ಮತ್ತು ಇಎಲ್‌ಐ ಹಾಗೂ ಇಂಟರ್ನ್‌ಶಿಪ್ ಸ್ಕೀಮ್‌ಗಳು ಉಚಿತ ಕಾರ್ಮಿಕರನ್ನು ಕಾರ್ಪೊರೇಟ್‌ಗಳ ಕೃಪಾಕಟಾಕ್ಷಕ್ಕೆ ಬಿಡುವ ಮೋದಿ ಸರಕಾರದ ಉದ್ದೇಶಪೂರ್ವಕ ಪ್ರಯತ್ನವಾಗಿದೆ. ಆದರೆ ಜನರ ಕುಸಿಯುತ್ತಿರುವ ಖರೀದಿ ಶಕ್ತಿಯಿಂದಾಗಿ ಒಟ್ಟು ಬೇಡಿಕೆಯಲ್ಲಿ ಸತತ ಇಳಿಕೆಯ ಪರಿಣಾಮವಾಗಿ ಒಟ್ಟು ಮಾರಾಟ ಹಾಗೂ ಉತ್ಪಾದನೆ ಸಂಪರ್ಕಿತ ಲಾಭದಲ್ಲಿ ಕಡಿಮೆಯಾಗುತ್ತಿದೆ. ಇದು ಉತ್ಪಾದನೆ ಕ್ಷೇತ್ರದಲ್ಲಿ ಖಾಸಗಿ ಹೂಡಿಕೆ ಪ್ರಮಾಣದ ಮೇಲೆ ದುಷ್ಪರಿಣಾಮ ಬೀರುತ್ತದೆ. ಕಾರ್ಪೊರೇಟ್ ಆದಾಯದ ಬೆಳವಣಿಗೆಯನ್ನು ಸತತವಾಗಿ ಸಟ್ಟಾಬಾಜಿ ಮಾರುಕಟ್ಟೆಯತ್ತ ಹರಿಸಲಾಗುತ್ತದೆ. ಸರಕಾರವು ಕಾರ್ಪೊರೇಟ್‌ಗಳಿಗೆ ಸಬ್ಸಿಡಿ ನೀಡಬಹುದು. ಆದರೆ ಈ ಯೋಜನೆಗಳಿಂದಾಗಿ ಆರ್ಥಿಕತೆಯ ಸ್ಥಿತಿ ಮತ್ತು ಜನರ ಪರಿಸ್ಥಿತಿ ಇನ್ನಷ್ಟು ಹದಗೆಡಲಿದೆ.

ಅನು: ವಿಶ್ವ

ಈ ಯೋಜನೆಯ ಲಾಭ ಪಡೆಯಬೇಕಾದರೆ ಕಂಪನಿಗಳು ಪ್ರತಿ ವರ್ಷ ಹೊಸ ನೌಕರರನ್ನು ನೇಮಿಸಿಕೊಳ್ಳಬೇಕು ಎನ್ನುವುದು ಅತ್ಯಂತ ಅಪಾಯಕಾರಿ ಅಂಶವಾಗಿದೆ. ಅಂದರೆ, ಮೊದಲ ವರ್ಷ ನೇಮಿಸಿಕೊಂಡ ನೌಕರರು ಫಿಕ್ಸೆಡ್–ಅವಧಿಗೆ ನೇಮಕಗೊಂಡವರಲ್ಲದೆ ಬೇರೇನೂ ಅಲ್ಲ ಎಂದಾಗುತ್ತದೆ ಮತ್ತು ಒಂದು ವರ್ಷ ಪೂರ್ಣಗೊಂಡ ಮೇಲೆ ಅವರನ್ನು ಹೊರಹಾಕಲಾಗುತ್ತದೆ. ಈ ಯೋಜನೆಗಳು, ಸರಕಾರಿ ಸಬ್ಸಿಡಿ ಪಡೆಯುವ ಉದ್ದೇಶದಿಂದ ರಿಟ್ರೆಂಚ್‌ಮೆಂಟ್ ಪ್ರಕ್ರಿಯೆಯನ್ನು ತೀವ್ರಗೊಳಿಸಲಿದೆ.

➘ ಭ್ರಷ್ಟತನ, ಭಂಡತನಗಳೇ ಮೈವೆತ್ತಂತಿರುವ ಪ್ರಸ್ತುತ ರಾಜ್ಯ ಸರಕಾರ ತನ್ನ ಕೊನೆಯ ದಿನಗಳನ್ನು ಎಣಿಸುತ್ತಿರುವುದು ಖಚಿತವಾಗಿದೆ. ಇ.ಡಿ., ಸಿ.ಬಿ.ಐ., ಐ.ಟಿ. ಮುಂತಾದ ಸಂಸ್ಥೆಗಳ ನಗ್ನ ದುರುಪಯೋಗ ಮಾಡಿದ ರಾಜ್ಯ ಸರಕಾರಕ್ಕೆ ಜನತೆ ಸರಿಯಾದ ಪಾಠ ಕಲಿಸಿದ್ದಾರೆ. ಮಹಾರಾಷ್ಟ್ರದ ವರ್ಚಸ್ಸಿಗೆ ಕಪ್ಪು ಮಸಿ ಬಳಿದ 'ಮಹಾಯುತಿ' ದುಷ್ಟ ಕೂಟಕ್ಕೆ ಮತ್ತಷ್ಟು ಭೀಕರವಾದ ಹೊಡೆತವನ್ನು ಕೊಡಲು ರಾಜ್ಯದ ಜನತೆ ಕಾದಿದ್ದಾರೆ. ಇಂತಹ ವಾತಾವರಣದಲ್ಲಿ ಅಕ್ಷರಶಃ ಬೆದರಿರುವ ಮಹಾಯುತಿ ಸರಕಾರವು ಸರ್ವಾಧಿಕಾರದ ಮೊರೆ ಹೋಗುತ್ತಿದೆ. ಸಿಪಿಐ(ಎಂ) ಮಹಾರಾಷ್ಟ್ರ ರಾಜ್ಯ ಸಮಿತಿಯು ಈ 'ಜನಸುರಕ್ಷಾ ಮಸೂದೆ' ಎಂಬ ಹೆಸರಿನ ಈ ಕ್ರೂರ ಮಸೂದೆಯನ್ನು ತೀವ್ರವಾಗಿ ವಿರೋಧಿಸಿದೆ. ಮಸೂದೆಯನ್ನು ಕಾಯ್ದೆಯಾಗಿ ಅಂಗೀಕರಿಸುವ ಪ್ರಯತ್ನವನ್ನು ತೀವ್ರವಾಗಿ ಪ್ರತಿರೋಧಿಸಲಿದೆ. ಹಾಗೆಯೇ ಮಹಾರಾಷ್ಟ್ರದ ಜನತೆ 'ಮಹಾಯುತಿ' ಸರಕಾರದ ಈ ದುಷ್ಟ ಕ್ರಮವನ್ನು ತೀವ್ರವಾಗಿ ಪ್ರತಿಭಟಿಸಬೇಕೆಂದು ಕರೆ ನೀಡಿದೆ. ವಿಶೇಷವಾಗಿ ಮಹಾ ವಿಕಾಸ ಅಘಾಡಿ(ಎಂ.ವಿ.ಎ.) ಕೂಟದ ಎನ್.ಸಿ.ಪಿ.(ಶರದ್ ಪವಾರ್), ಕಾಂಗ್ರೆಸ್, ಶಿವಸೇನೆ(ಉದ್ಧವ ಠಾಕ್ರೆ) ಪಕ್ಷಗಳು ಈ ಮಸೂದೆಗೆ ಪ್ರತಿರೋಧ ಒಡ್ಡಬೇಕೆಂದು ಕರೆ ನೀಡಿದೆ. ಈ ಸಂಬಂಧ ಎಂ.ವಿ.ಎ. ಪ್ರಚಾರಾಂದೋಲನವನ್ನು ಕೈಗೊಂಡಲ್ಲಿ ಜನತೆ ಉತ್ತಮ ಸ್ಪಂದನೆ ನೀಡಲಿದ್ದಾರೆ ಎಂದೂ ಸಹ ಸಿಪಿಐ(ಎಂ) ವಿಶ್ವಾಸ ವ್ಯಕ್ತಪಡಿಸಿದೆ.

---

14 ಗಂಟೆಗಳ ಕೆಲಸದ ದಿನ: ಐಟಿ ಉದ್ಯೋಗಿಗಳಿಂದ ವ್ಯಾಪಕ ಆಕ್ರೋಶ..... ಪುಟ 5 ರಿಂದ

35–40 ಗಂಟೆಗಳ ಕಾಲ ಕೆಲಸ ಮಾಡುವವರಿಗೆ ಹೋಲಿಸಿದರೆ, ಹೃದ್ರೋಗದಿಂದ ಸಾವಿನ ಅಪಾಯವು ಶೇಕಡಾ 17 ರಷ್ಟು ಹೆಚ್ಚಾಗಿದೆ. ದೀರ್ಘಾವಧಿಯ ಕೆಲಸದ ಸಮಯವು ಸ್ಥೂಲಕಾಯತೆ, ಪ್ರಿಡಯಾಬಿಟಿಸ್ ಮತ್ತು ಟೈಪ್ 2 ಮಧುಮೇಹದ ಅಪಾಯವನ್ನು ಹೆಚ್ಚಿಸುತ್ತದೆ ಎಂದೂ ಹೇಳಲಾಗುತ್ತದೆ. ವಾರಕ್ಕೆ 69 ಅಥವಾ ಅದಕ್ಕಿಂತ ಹೆಚ್ಚು ಗಂಟೆಗಳ ಕಾಲ ಕೆಲಸ ಮಾಡುವವರು ವಾರಕ್ಕೆ 40 ಗಂಟೆಗಳ ಕಾಲ ಕೆಲಸ ಮಾಡುವವರಿಗಿಂತ ಹೆಚ್ಚು ತೀವ್ರವಾದ ಖಿನ್ನತೆಯ ಲಕ್ಷಣಗಳನ್ನು ಹೊಂದಿರುವುದು ಕಂಡುಬಂದಿದೆ. ಅದೂ ಅಲ್ಲದೆ ಐಟಿ, ಟೇಬಲ್ ವರ್ಕ್ ನಂತಹ ಕೆಲಸ ಮಾಡುವವರು ಹತ್ತು ಗಂಟೆಗೂ ಹೆಚ್ಚು ಕಾಲ ಕುಳಿತುಕೊಂಡರೆ ಮೆದುಳಿಗೆ ರಕ್ತಸಂಚಾರ ಕಡಿಮೆಯಾಗುವುದು, ಏಕಾಗ್ರತೆ ಕಡಿಮೆಯಾಗುವುದು, ಕೆಲಸಗಳತ್ತ ಗಮನ ಹರಿಸಲಾಗದಿರುವುದು, ಆತಂಕ ಮತ್ತು ಹೆಚ್ಚಿದ ಒತ್ತಡದ ಮಟ್ಟಗಳು, ಖಿನ್ನತೆಗೆ ಒಳಗಾಗುವುದು ಕಂಡು ಬಂದಿದೆ. ಇದೆಲ್ಲದರ ನಡುವೆಯೂ ವ್ಯಾಪಾರ, ಕೈಗಾರಿಕೋದ್ಯಮಿಗಳು ಕೆಲಸದ ಸಮಯವನ್ನು ಹೆಚ್ಚಿಸಬೇಕು ಎಂದು ಹೇಳುತ್ತಿದ್ದಾರೆ. ಇದು ತೀವ್ರ ಖಂಡನೀಯವಾಗಿದೆ.

ಕರ್ನಾಟಕ ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (ಕೆಸಿಸಿಐ) ವರದಿಯ ಪ್ರಕಾರ, ಐಟಿ ವಲಯದ ಶೇಕಡಾ 45 ರಷ್ಟು ಉದ್ಯೋಗಿಗಳು ಖಿನ್ನತೆಯಂತಹ ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಮತ್ತು ಶೇಕಡಾ 55 ರಷ್ಟು ದೈಹಿಕ ಆರೋಗ್ಯದ ಪರಿಣಾಮಗಳೊಂದಿಗೆ ಹೋರಾಡುತ್ತಿದ್ದಾರೆ. ವರ್ಲ್ಡ್ ಹೆಲ್ತ್ ಆರ್ಗನೈಸೇಶನ್ (WHO) ಮತ್ತು ಇಂಟರ್ನ್ಯಾಷನಲ್ ಲೇಬರ್ ಆರ್ಗನೈಸೇಶನ್ (ILO) ಯ ಅಧ್ಯಯನದ ಪ್ರಕಾರ, ಹೆಚ್ಚಿದ ಕೆಲಸದ ಸಮಯವು ಪಾರ್ಶ್ವವಾಯು ಮತ್ತು ರಕ್ತಕೊರತೆಯ ಹೃದಯಾಘಾತದಿಂದ ಸಾಯುವ ಅಪಾಯದ ಶೇಕಡಾ 35 ರಷ್ಟು ಹೆಚ್ಚಿನ ಅಪಾಯಕ್ಕೆ ಕಾರಣವಾಗಬಹುದು.



ಈ ಬಜೆಟ್‌ಗೆ ಆಧಾರವಾಗಿರುವ ಕಾರ್ಯತಂತ್ರ ಹಿಂದಿನ ವರ್ಷಗಳ ಬಜೆಟ್‌ನಂತೆಯೇ ಇದೆ–ಅಂದರೆ: ಹೆಚ್ಚುವರಿ ಹಣಕಾಸು ಸಂಪನ್ಮೂಲಗಳನ್ನು ಸಜ್ಜುಗೊಳಿಸುವ ಪ್ರಯತ್ನವಿಲ್ಲ; ತೆರಿಗೇತರ ಆದಾಯದಲ್ಲಿನ ಬೆಳವಣಿಗೆಯನ್ನು ಬಳಸುವ, ಬಂಡವಾಳ ವೆಚ್ಚವನ್ನು ಹೆಚ್ಚಿಸುವ ಪ್ರಯತ್ನವಿಲ್ಲ; ಕಲ್ಯಾಣ ವೆಚ್ಚ ಕೆಲವು ಬಾಬ್ತುಗಳಲ್ಲಿ ಹೆಚ್ಚಿದರೆ, ಇನ್ನು ಕೆಲವು ಬಾಬ್ತುಗಳಲ್ಲಿ ಕಡಿತ ಮಾಡುವುದು; ಮತ್ತು ಏನೇ ದೊಡ್ಡ ಸಮಸ್ಯೆಗಳಿದ್ದರೂ ದೊಡ್ಡ ಬಂಡವಳಿಗರಿಗೆ ಬಜೆಟ್ ವರ್ಗಾವಣೆ ಒದಗಿಸುವುದು! ಈ ವರ್ಗಾವಣೆ ಸ್ಕೀಮಿನ ಹಿಂದಿರುವ ಸೈದ್ಧಾಂತಿಕ ಚಿಂತನೆ ನೂರು ವರ್ಷಗಳ ಹಿಂದಿನ ಕಳಂಕಿತ ಪ್ರತಿಪಾದನೆ. ಮೋದಿ ಸರ್ಕಾರದ ಸಮಸ್ತ ಆರ್ಥಿಕ ಚಿಂತನೆಯೇ ಐಎಂಎಫ್ ಮತ್ತು ವಿಶ್ವ ಬ್ಯಾಂಕ್ ಪಸರಿಸುವ ಬೂರ್ಜ್ವಾ ಅರ್ಥಶಾಸ್ತ್ರದ ಇಂತಹ ಟೊಳ್ಳು ಪ್ರತಿಪಾದನೆಗಳನ್ನು ಆಧರಿಸಿದೆ. ನಮ್ಮ ದೇಶದ ಜನರು ಎದುರಿಸುತ್ತಿರುವ ಅಗಾಧ ಸಮಸ್ಯೆಗಳ ಬಗ್ಗೆ ಅರಿವಿನ ಸಂಪೂರ್ಣ ಕೊರತೆ ಈ ಬಜೆಟ್‌ನಲ್ಲಿ ಎದ್ದು ಕಾಣುವ ಸಂಗತಿ. ಪ್ರಾನ್ಸಿನಲ್ಲಿ 1789ರ ಕ್ರಾಂತಿಯಲ್ಲಿ ಕಿತ್ತೆಸೆಯಲ್ಪಟ್ಟ ಬೋರ್ಬೋನ್ ದೊರೆಗಳ ಬಗ್ಗೆ “ಅವರು ಏನನ್ನೂ ಕಲಿಯುವುದಿಲ್ಲ ಮತ್ತು ಅವರು ಏನನ್ನೂ ಮರೆಯುವುದಿಲ್ಲ” ಎಂದು ಹೇಳಲಾಗುತ್ತದೆ. ಇದು ಎನ್‌ಡಿಎ ಸರಕಾರದ ವಿಷಯದಲ್ಲೂ ಸತ್ಯ. ಅದು ಪ್ರಸ್ತುತಪಡಿಸಿರುವ ಬಜೆಟ್ ಅರ್ಥವ್ಯವಸ್ಥೆಯಲ್ಲಿ ತುರ್ತಾಗಿ ಗಮನ ಹರಿಸಬೇಕಾದುದೇನೂ ಸಂಭವಿಸಿಯೇ ಇಲ್ಲ ಎಂಬಂತೆ ನಟಿಸುತ್ತದೆ; ಇದು ಮೊಂಡುತನದ ಅಮೋಘ ಪ್ರದರ್ಶನ.

ಬಜೆಟ್ 2024-25: ದಿಗಿಲುಗೊಳಿಸುವ ಮೊಂಡುತನ

ಅಗಾಧ ಸಮಸ್ಯೆಗಳನ್ನು ನಿರ್ಲಕ್ಷಿಸಿದ ಬಜೆಟ್

ಪ್ರೊ.ಪ್ರಭಾತ್ ಪಟ್ನಾಯಕ್

ದೇಶದಲ್ಲಿ ಬೃಹತ್ ಪ್ರಮಾಣದ ನಿರುದ್ಯೋಗವಿದೆ, ಅದು ವಿಶೇಷವಾಗಿ ಯುವಜನರನ್ನು ಬಾಧಿಸುತ್ತಿದೆ ಮತ್ತು ಆಹಾರ ಬೆಲೆಗಳಲ್ಲಿ ಒಂದು ದೊಡ್ಡ ಮತ್ತು ನಿರಂತರ ಹಣದುಬ್ಬರ ಇದೆ; ತೀವ್ರ, ಅಭೂತಪೂರ್ವ ಗ್ರಾಮೀಣ ಯಾತನೆಯಿದೆ; ಕಿರು ಉತ್ಪಾದನಾ ವಲಯದಲ್ಲಿ ಬಿಕ್ಕಟ್ಟು ಇದೆ; ಆದಾಯ ಮತ್ತು ಸಂಪತ್ತಿನ ಅಸಮಾನತೆಯು ಎಂತಹ ಮಟ್ಟವನ್ನು ತಲುಪಿದೆಯೆಂದರೆ ಇಡೀ ಜಗತ್ತು ಅದರ ಬಗ್ಗೆ ಮಾತನಾಡುತ್ತಿದೆ. ಈ ಎಲ್ಲದರ ಮಧ್ಯೆ ಮಂಡಿಸಿದ ಬಜೆಟ್ ಇವುಗಳನ್ನು ನಿಭಾಯಿಸಲು ಸ್ವಲ್ಪ ತುರ್ತು ತೋರಿಸುತ್ತಿತ್ತು, ಸ್ವಲ್ಪ ಧೈರ್ಯ ತೋರಿಸುತ್ತಿತ್ತು ಎಂದು ಯಾರಾದರೂ ಯೋಚಿಸಬಹುದು. ಆದರೆ ಇಲ್ಲ, ಎನ್.ಡಿ.ಎ. ಸರ್ಕಾರ ಜುಲೈ 23 ರಂದು ಸಂಸತ್ತಿನಲ್ಲಿ ಮಂಡಿಸಿದ 2024–25 ಬಜೆಟ್ ಹಾಗೆ ಯೋಚಿಸಿದಂತಿಲ್ಲ. ಒಟ್ಟಾರೆ ಬೇಡಿಕೆಯನ್ನು ಮತ್ತು ಅದರಿಂದಾಗಿ ಉದ್ಯೋಗವನ್ನು ಉತ್ತೇಜಿಸುವ ಪ್ರಭುತ್ವ ವೆಚ್ಚದಲ್ಲಾಗಲೀ ಅಥವಾ ನಿರ್ದಿಷ್ಟ ಉದ್ಯೋಗ ಸೃಷ್ಟಿಯ ಯೋಜನೆಗಳಿಗೆ ಮಾಡುವ ವೆಚ್ಚದಲ್ಲಾಗಲೀ, ಅಥವಾ ಕಲ್ಯಾಣ ಕಾರ್ಯಕ್ರಮಗಳದ ವೆಚ್ಚದಲ್ಲಾಗಲೀ, ಅಥವಾ ಶಿಕ್ಷಣ ಮತ್ತು ಆರೋಗ್ಯಪಾಲನೆಯ ವೆಚ್ಚದಲ್ಲಾಗಲೀ ಜಿಡಿಪಿಯ ಅನುಪಾತದಲ್ಲಿ ಯಾವುದೇ ಹೆಚ್ಚಳ ತೋರಿಸಿಲ್ಲ, ಬದಲಾಗಿ ಒಟ್ಟಾರೆಯಾಗಿ ಕಡಿತವನ್ನೇ ಮಾಡಲಾಗಿದೆ. ಹಣಕಾಸಿನ ಸಂಪನ್ಮೂಲಗಳ ಕೊರತೆಯಿಂದಾಗಿ ಹೀಗಾಗಿದೆ ಎಂದು ದೂರುವಂತೆಯೂ ಇಲ್ಲ; ಏಕೆಂದರೆ ಯಾವುದೇ ಹಣಕಾಸಿನ ವಿತ್ತೀಯ ಪ್ರಯತ್ನವೇ ಇದರಲ್ಲಿ ಮಾಯವಾಗಿದೆ.

ಈ ಬಜೆಟ್‌ಗೆ ಆಧಾರವಾಗಿರುವ ಕಾರ್ಯತಂತ್ರ ಹಿಂದಿನ ವರ್ಷಗಳ ಬಜೆಟ್‌ನಂತೆಯೇ ಇದೆ– ಅಂದರೆ: ಹೆಚ್ಚುವರಿ ಹಣಕಾಸು ಸಂಪನ್ಮೂಲಗಳನ್ನು ಸಜ್ಜುಗೊಳಿಸುವ ಪ್ರಯತ್ನವಿಲ್ಲ; ತೆರಿಗೇತರ ಆದಾಯದಲ್ಲಿನ ಬೆಳವಣಿಗೆಯನ್ನು ಬಳಸುವ (ಅದರಲ್ಲಿ ಹೆಚ್ಚಿನ ಪಾಲು ರಿಝರ್ವ್ ಬ್ಯಾಂಕ್ ಆಫ್ ಇಂಡಿಯಾದ ಲಾಭವನ್ನು ಒಳಗೊಂಡಿದೆ), ಸ್ವಲ್ಪ ಮಟ್ಟಿಗೆ, ಮೂಲಸೌಕರ್ಯಕ್ಕೂ ಸೇರಿದಂತೆ ಬಂಡವಾಳ ವೆಚ್ಚವನ್ನು ಹೆಚ್ಚಿಸುವ ಪ್ರಯತ್ನವಿಲ್ಲ; ಕಲ್ಯಾಣ ವೆಚ್ಚ ಕೆಲವು ಬಾಬ್ತುಗಳಲ್ಲಿ ಹೆಚ್ಚಿದರೆ, ಇನ್ನು ಕೆಲವು ಬಾಬ್ತುಗಳಲ್ಲಿ ಕಡಿತ ಮಾಡುವುದು; ಮತ್ತು ಏನೇ ದೊಡ್ಡ ಸಮಸ್ಯೆಗಳಿದ್ದರೂ ದೊಡ್ಡ ಬಂಡವಳಿಗರಿಗೆ ಬಜೆಟ್ ವರ್ಗಾವಣೆಗಳನ್ನು ಒದಗಿಸುವುದು!

ವಿತ್ತೀಯ ಪ್ರಯತ್ನ ಸಂಪೂರ್ಣವಾಗಿ ಸೊನ್ನೆ

ಇವನ್ನೆಲ್ಲ ಒಂದೊಂದಾಗಿ ನೋಡೋಣ. ರಾಜ್ಯಗಳಿಗೆ ವರ್ಗಾವಣೆ ಸೇರಿದಂತೆ ಕೇಂದ್ರ ಸರ್ಕಾರದ ಒಟ್ಟು ವೆಚ್ಚವನ್ನು 2023–24 (ಪರಿಷ್ಕೃತ ಬಜೆಟ್) ಮತ್ತು 2024–25 (ಬಜೆಟ್ ಅಂದಾಜು) ನಡುವೆ 7.35% ದಷ್ಟು ಹೆಚ್ಚಿಸಲು ಯೋಜಿಸಲಾಗಿದೆ. ಇದರರ್ಥ, ಅರ್ಥವ್ಯವಸ್ಥೆಯಲ್ಲಿ ಉದ್ಯೋಗವನ್ನು ಉತ್ತೇಜಿಸಲು ಮಾಡಬೇಕಾದುದಕ್ಕೆ ತದ್ವಿರುದ್ಧವಾಗಿ ಜಿಡಿಪಿಯಲ್ಲಿ ಕೇಂದ್ರ ಸರ್ಕಾರದ ವೆಚ್ಚದ ಅನುಪಾತ ಇಳಿಯುತ್ತದೆ. ಈ ಮಾರ್ಗಭ್ರಷ್ಟತೆ ಯಾವುದೇ ಹಣಕಾಸಿನ ಬಿಗಿತದಿಂದಾಗಿ ಅಲ್ಲ; ವಾಸ್ತವವಾಗಿ ಜಿಡಿಪಿಯಲ್ಲಿ ತೆರಿಗೆ ಆದಾಯಗಳ ಅನುಪಾತ ಹೆಚ್ಚಿದೆ. 2021–22ರಲ್ಲಿ ಇದು 11.5% ಇತ್ತು, 2023–24ರಲ್ಲಿ 11.7%ಕ್ಕೆ ಏರಿದೆ, 2024–25ರಲ್ಲಿ 11.8%ಕ್ಕೆ ಏರುವುದಾಗಿ ನಿರೀಕ್ಷಿಸಲಾಗಿದೆ (ಈ ಆದಾಯಗಳು ಈಗ ಬಹುಪಾಲು ಕೇಂದ್ರ ಸರಕಾರದ ವಿವೇಚನೆಗೇ ಒಳಪಟ್ಟಿವೆ). ಅಂದರೆ ಸರಕಾರದ ಕಡೆಯಿಂದ ವಿತ್ತೀಯ ಪ್ರಯತ್ನ ಸಂಪೂರ್ಣವಾಗಿ ಸೊನ್ನೆ. ಇದು ಹಿಂದಿನ ಅನುಭವಗಳ ಮುಂದುವರಿಕೆಯೇ. ಒಟ್ಟು ತೆರಿಗೆಯೇತರ ಆದಾಯ 2023–24 ಮತ್ತು 2024–25ನಡುವೆ ಶೇ.36 ರಷ್ಟು ಇರುತ್ತದೆ ಎಂದು ಹೇಳಲಾಗಿದೆ. ಇದರಲ್ಲಿ ಅತಿ ದೊಡ್ಡ ಬಾಬತ್ತಾದ “ಲಾಭಾಂಶಗಳು ಮತ್ತು ಲಾಭಗಳು” 70%ದಷ್ಟು ಹೆಚ್ಚುವುದಾಗಿ ಬಜೆಟ್ ಅಂದಾಜು ಮಾಡಿದೆ. ಇದರಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ರಿಝರ್ವ್ ಬ್ಯಾಂಕಿನ ಲಾಭಗಳು ಸೇರಿರುತ್ತವೆ.

ಕೇಂದ್ರ ಸರ್ಕಾರದ ಒಟ್ಟು ವೆಚ್ಚ 7.35% ಮಾತ್ರ ಹೆಚ್ಚಾಗುವುದಾದರೆ, ಅದರ ಬಂಡವಾಳ ವೆಚ್ಚ, ಬಂಡವಾಳ ಯೋಜನೆಗಳಿಗಾಗಿ ರಾಜ್ಯಗಳಿಗೆ ವರ್ಗಾಯಿಸುವವುದನ್ನು ಹೊರತುಪಡಿಸಿ, ಶೇ.17ರಷ್ಟು ಹೆಚ್ಚಲಿದೆ. ಇದು ಕಳೆದ ಕೆಲವು ವರ್ಷಗಳಲ್ಲಿ ಕಂಡು ಬಂದಿರುವ ಪ್ರವೃತ್ತಿಯ ಮುಂದುವರಿಕೆಯಾಗಿದೆ. ಇದೊಂದು ಸಕಾರಾತ್ಮಕ ಬೆಳವಣಿಗೆ ಎಂದು ಭಾವಿಸಲಾಗಿದೆ. ಆದರೆ ಈ ಹೂಡಿಕೆಯ ಬಹುಪಾಲು ದುಡಿಯುವ ಜನರ ಜೀವನದ ಮೇಲೆ ಅಷ್ಟೇನೂ ಪರಿಣಾಮ ಬೀರದ ಯೋಜನೆಗಳಲ್ಲಿ ಇದೆ; ಅಷ್ಟೇ ಅಲ್ಲ, ಅವುಗಳ ಗುಣಕ ಪರಿಣಾಮಗಳು ದೊಡ್ಡ ಪ್ರಮಾಣದಲ್ಲಿ ವಿದೇಶಗಳಿಗೆ ಸೋರಿಕೆಯಾಗುತ್ತವೆ, ಆದ್ದರಿಂದ ಅವು ದೇಶದೊಳಗೆ ಅಷ್ಟೇನೂ ಹೆಚ್ಚು ಉದ್ಯೋಗ ಸೃಷ್ಟಿಸುವುದಿಲ್ಲ. ಮತ್ತೊಂದೆಡೆ ಇತರ ಬಾಬ್ತುಗಳ ಮೇಲೆ ವೆಚ್ಚಗಳನ್ನು ಕಡಿತಮಾಡುವುದರಿಂದಾಗಿ, ದೇಶದೊಳಗೆ ಇದರ ಗುಣಕ ಪರಿಣಾಮವೆಂದರೆ, ಉದ್ಯೋಗದ ಮೇಲೆ ನಕಾರಾತ್ಮಕ ಪ್ರಭಾವ.

ಹಣಕಾಸು ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಉಲ್ಲೇಖಿಸಿದರಾದರೂ, ಅದಕ್ಕೆ ಆಕೆಯ ಪರಿಹಾರ ತಿಳುವಳಿಕೆಯ ಸಂಪೂರ್ಣ ಕೊರತೆಯನ್ನು ತೋರಿಸುತ್ತದೆ. ಅವರು ಮೂರು ಸ್ಕೀಮುಗಳನ್ನು ಪ್ರಕಟಿಸಿದರು. ಇವುಗಳು ಹೊಸ ಉದ್ಯೋಗದ ಸೃಷ್ಟಿಯನ್ನು ಉತ್ತೇಜಿಸಲೆಂದು ಉದ್ಯೋಗಿಗಳಿಗೆ ಮತ್ತು ಉದ್ಯೋಗದಾತರಿಗೆ ವರ್ಗಾವಣೆಗಳನ್ನು ಒಳಗೊಂಡಿರುತ್ತವೆ. ಈ ಯೋಜನೆಗಳು ಔಪಚಾರಿಕ ವಲಯಕ್ಕಾಗಿ; ಮತ್ತು ಉದ್ಯೋಗಿಗಳಿಗೆ ವರ್ಗಾವಣೆಯನ್ನು ಮಾಡಿದಾಗಲೂ, ಅದರ ಪ್ರಯೋಜನವು ಸಂಪೂರ್ಣವಾಗಿ ಉದ್ಯೋಗದಾತರಿಗೆ ಸೋರಿಕೆಯಾಗುವ ಸಾಧ್ಯತೆಯಿದೆ; ಏಕೆಂದರೆ, ನೌಕರರಿಗೆ ಸಿಕ್ಕಿದ ವರ್ಗಾವಣೆಗಳನ್ನು ಸರಿದೂಗಿಸಲು ಅವರ ಸಂಬಳ ಪಾವತಿಗಳಲ್ಲಿ ಕಡಿತ ಮಾಡುತ್ತಾರೆ. ಇದರ ಜೊತೆಗೆ ಹಣಕಾಸು ಮಂತ್ರಿಗಳು ಕೌಶಲವನ್ನು ಒದಗಿಸುವ ಒಂದು ಕಾರ್ಯಕ್ರಮವನ್ನು ಪ್ರಕಟಿಸಿದರು, ಇದು ಉದ್ಯೋಗಕ್ಕೆ ನೆರವಾಗುತ್ತದೆ ಎಂದು ಅವರು ಹೇಳಿಕೊಂಡರು.

ವರ್ಗಾವಣೆ ಸ್ಕೀಮಿನ ಹಿಂದಿರುವ ಸೈದ್ಧಾಂತಿಕ ಚಿಂತನೆಯೆಂದರೆ, ಉದ್ಯೋಗದಾತರು ನೀಡುವ ಸಂಬಳ ಕಡಿಮೆಯಾದರೆ, ಆಗ ಹೆಚ್ಚಿನ ಉದ್ಯೋಗಾವಕಾಶಗಳು ಬರುತ್ತವೆ ಎಂಬುದು. ಇದು ಬೂರ್ಜ್ವಾ ಅರ್ಥಶಾಸ್ತ್ರದ ಅಚ್ಚುಮೆಚ್ಚಿನ ವಿಷಯ, ಆದರೆ ಅದನ್ನು ನಂಬಲು ಯಾವುದೇ ಕಾರಣಗಳಿಲ್ಲ. ಉದ್ಯೋಗದಾತರು ವರ್ಗಾವಣೆಗಳನ್ನು ನೇರವಾಗಿ ತಮ್ಮ ಜೇಬಿಗೆ ಇಳಿಸುತ್ತಾರೆ, ಉದ್ಯೋಗಾವಕಾಶ ಮೊದಲಿನಂತೆಯೇ ಇರುತ್ತದೆ. ಕೌಶಲ ಯೋಜನೆಯೂ ಕೂಡ ಅದೇ ರೀತಿಯಲ್ಲಿ ಬೂರ್ಜ್ವಾ ಅರ್ಥಶಾಸ್ತ್ರದ ಒಂದು ಟೊಂಗೆ. ಇದರ ಪ್ರಕಾರ ಉದ್ಯೋಗ ಮತ್ತು ಕೌಶಲದ ನಡುವೆ ಹೊಂದಾಣಿಕೆಯಿಲ್ಲದಿರುವುದರ ಪರಿಣಾಮವೇ ನಿರುದ್ಯೋಗ; ಒಟ್ಟು ಬೇಡಿಕೆಯಲ್ಲಿ ಎಂದೂ ಕೊರತೆಯಾಗುವುದಿಲ್ಲ ಎಂದು ಅದು ಪ್ರತಿಪಾದಿಸುತ್ತದೆ. ನಿರುದ್ಯೋಗಳಿಗೆ ಸಾಲುವಷ್ಟು ಉದ್ಯೋಗಗಳಿವೆ, ಒಂದೇ ಸಮಸ್ಯೆಯೆಂದರೆ ಆ ಉದ್ಯೋಗಳಿಗೆ ಬೇಕಾಗುವ ಕೌಶಲವನ್ನು ಆ ನಿರುದ್ಯೋಗಿಗಳು ಹೊಂದಿರುವುದಿಲ್ಲ!

100 ವರ್ಷಗಳ ಹಿಂದಿನ ಹಳಸಲು ಪ್ರತಿಪಾದನೆ

ಈ ಎರಡೂ ತೆರನ ಸ್ಕೀಮುಗಳ ಹಿಂದಿರುವ ಮೂಲ ಯೋಚನೆಗಳೇ ತಪ್ಪು; "ಪೂರೈಕೆ ತನ್ನದೇ ಬೇಡಿಕೆಯನ್ನು ನಿರ್ಮಿಸುತ್ತದೆ”, ಅಂದರೆ ಬೇಡಿಕೆಯ ಕೊರತೆಯೆಂಬುದೇನೂ ಇಲ್ಲ ಎನ್ನುವ ಸೇ ನಿಯಮದ ಮೇಲೆ ಅವು ನಿಂತಿವೆ.

ಮಾರ್ಕ್ಸ್ ಈ ನಿಲುವಿನ ಮೇಲೆ ದಾಳಿ ಮಾಡಿದ್ದರು. ಎಪ್ಪತ್ತೈದು ವರ್ಷಗಳ ನಂತರ ಕೀನ್ಸ್ ಅದರ ಪುನರಾವರ್ತನೆ ಮಾಡಿದರು. ಕೀನ್ಸ್‌ಗಿಂತ ಮೊದಲು ಈ ನಿಲುವು ಎಷ್ಟು ಬಲವಾಗಿತ್ತೆಂದರೆ, ಎಫ್ ಡಿ ರೂಸ್‌ವೆಲ್ಟ್ ರವರ ಮೊದಲು ಅಮೆರಿಕಾದ ಅಧ್ಯಕ್ಷರಾಗಿದ್ದ ಹರ್ಬರ್ಟ್ ಹೂವರ್ ‘ಮಹಾಕುಸಿತ’ದ ನಡುವೆ ಉದ್ಯೋಗಗಳನ್ನು ಹೆಚ್ಚಿಸಲು ಸಂಬಳಗಳನ್ನು ಕಡಿತ ಮಾಡಲು ಪ್ರಯತ್ನಿಸಿದರು. ಆದರೆ ಸಹಜವಾಗಿಯೇ ಅದರಿಂದೇನೂ ಪ್ರಯೋಜನವಾಗಲಿಲ್ಲ. ಮೋದಿ ಸರ್ಕಾರದ ಬೌದ್ಧಿಕ ದಾಸ್ತಾನಿನಲ್ಲಿ ಒಂದು ಶತಮಾನದ ಹಿಂದಿನ ಇಂತಹ ಕಳಂಕಿತ ವಿಚಾರಗಳ ಆಚೆಗೆ ಬೇರೇನೂ ಇಲ್ಲ; ಅದು ನಿರುದ್ಯೋಗವನ್ನು ನಿವಾರಿಸಲು ಏನನ್ನೂ ಮಾಡಿಲ್ಲ.

ಅರ್ಥವ್ಯವಸ್ಥೆಗೆ ಉತ್ತೇಜನೆ ನೀಡಲು ಬಂಡವಳಿಗರಿಗೆ ಹಣ ವರ್ಗಾವಣೆ ಮಾಡುವುದು ನಿರರ್ಥಕ ಎಂಬುದು ‘ಆರ್ಥಿಕ ಸರ್ವೇಕ್ಷಣೆ’ಯಂತಹ ಅಧಿಕೃತ ಹೇಳಿಕೆಗಳಲ್ಲಿ ಬಹಳ ಅಪರೂಪವಾಗಿ ಕಾಣಿಸಿಕೊಳ್ಳುತ್ತದೆ. ಆದರೆ ಎಂದಿಗೂ ಅದು ಇಂತಹ ವರ್ಗಾವಣೆಗಳನ್ನು ನೀಡಿದರೂ ಬಂಡವಾಳಶಾಹಿಗಳು ಏಕೆ ಹೂಡಿಕೆ ಮಾಡುವುದಿಲ್ಲ ಎಂದು ಪುಟ 10 ಕ್ಕೆ

ನಿರುದ್ಯೋಗವೆಂಬ ಆನೆ ಮತ್ತು ಬಜೆಟ್



ವ್ಯಂಗ್ಯಚಿತ್ರ ಕೃಪೆ: ಸಂದೀಪ ಅಧ್ವರ್ಯು, ಟೈಂಸ್ ಆಫ್ ಇಂಡಿಯ



ಕೇಂದ್ರದ ಈ ಬಜೆಟ್ ನಲ್ಲಿ ಕೃಷಿ ಉತ್ಪಾದಕತೆ ಹಾಗೂ ರೈತರ ಕಲ್ಯಾಣವನ್ನು ಕಡೆಗಣಿಸಲಾಗಿದೆ. ಮತ್ತಷ್ಟು ಕೇಂದ್ರೀಕರಣ ಹಾಗೂ ರಾಜ್ಯಗಳ ಒಕ್ಕೂಟ ಹಕ್ಕುಗಳ ಮೇಲೆ ಮತ್ತಷ್ಟು ಆಕ್ರಮಣ ಮಾಡಿದೆ. ಕೃಷಿ ಕಾರ್ಪೋರೇಟೀಕರಣದ ಕಡೆಗೆ ಕೃಷಿ ರಂಗವನ್ನು ಒಯ್ಯುವ ಸ್ಪಷ್ಟ ಲಕ್ಷಣಗಳನ್ನು ತೋರ್ಪಡಿಸಿದೆ. ಕೃಷಿ ಸಂಬಂದಿತ ವಲಯಗಳಿಗೆ ತೀವ್ರವಾಗಿ ಅನುದಾನ ಕಡಿತದ ಮೂಲಕ ಕೃಷಿ ರಂಗವನ್ನು ಮತ್ತಷ್ಟು ದಿವಾಳಿ ಕಡೆಗೆ ನೂಕುವ ನಿರುದ್ಯೋಗ, ವಲಸೆ, ಹಸಿವನ್ನು ಹೆಚ್ಚಿಸುವ ಬಜೆಟ್ ನಿಂದ ರೈತಾಪಿ ಹಾಗೂ ಗ್ರಾಮೀಣ ಸಮುದಾಯಕ್ಕೆ ತೀವ್ರ ನಿರಾಶೆಯನ್ನು ಉಂಟು ಮಾಡಿದೆ.

ಅನ್ನದಾತರುಗಳಿಗೆ ವಿಶ್ವಾಸದ್ರೋಹ, ಕಾರ್ಪೋರೇಟ್ ಬಂಟರಿಗೆ ಬಕ್ಷೀಸು

ಟಿ. ಯಶವಂತ

ರೈತಾಪಿ ಕೃಷಿಯನ್ನು ನಾಶ ಮಾಡಿ, ಬಲಿಷ್ಠ ಕಾರ್ಪೋರೇಟ್ ಸಂಸ್ಥೆಗಳ ಮರ್ಜಿಗೆ ಕೃಷಿ ರಂಗವನ್ನು ಒಳಪಡಿಸುವ ಸ್ಪಷ್ಟ ಉದ್ದೇಶದ ರೈತ ವಿರೋಧಿ ಬಜೆಟ್ ಎಂದಿರುವ ಕರ್ನಾಟಕ ಪ್ರಾಂತ ರೈತ ಸಂಘವು, ಬಿಜೆಪಿ ನೇತೃತ್ವದ ಎನ್‌ಡಿಎ ಕೇಂದ್ರ ಸರ್ಕಾರ ರೈತರಿಗೆ ದ್ರೋಹ ಬಗೆದಿದೆ ಎಂದಿದೆ.

ಸತತ ಮೂರನೇ ಅವಧಿಗೆ ಅಧಿಕಾರಕ್ಕೆ ಬಂದಿರುವ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ, ಹಿನ್ನಡೆ ಉಂಟಾದ ಯಾವುದೇ ಮುಜುಗರ ತೋರದೇ, ಹಿಂದಿನ ಎರಡು ಅವಧಿಯ ಸರ್ಕಾರಗಳಂತೆ ನವ ಉದಾರೀಕರಣ ಧೋರಣೆ ಹಾಗೂ ಆಕ್ರಮಣಕಾರಿ ಫ್ಯಾಸಿಸ್ಟ್ ಗುಣಲಕ್ಷಣಗಳನ್ನು ಮುಂದುವರೆಸುತ್ತಿದೆ. ಇತ್ತೀಚೆಗೆ ಮೂರನೇ ಅವಧಿಯ ಮೊದಲ ಬಜೆಟ್ ಅನ್ನು ಮಂಡಿಸಿದೆ.

ರೈತಾಪಿ ಕೃಷಿಯನ್ನು ನಾಶ ಮಾಡಿ, ಬಲಿಷ್ಠ ಕಾರ್ಪೋರೇಟ್ ಸಂಸ್ಥೆಗಳ ಮರ್ಜಿಗೆ ಕೃಷಿ ರಂಗವನ್ನು ಒಳಪಡಿಸುವ ಸ್ಪಷ್ಟ ಉದ್ದೇಶದ ರೈತ ವಿರೋಧಿ ಬಜೆಟ್ ಮಂಡಿಸುವ ಮೂಲಕ ಬಿಜೆಪಿ ನೇತೃತ್ವದ ಎನ್.ಡಿ.ಎ. ಕೇಂದ್ರ ಸರ್ಕಾರ ರೈತರಿಗೆ ದ್ರೋಹ ಬಗೆದಿದೆ.

ಕೃಷಿ ಉತ್ಪಾದಕತೆ ಹಾಗೂ ರೈತರ ಕಲ್ಯಾಣವನ್ನು ಕಡೆಗಣಿಸಿರುವ ಈ ಬಜೆಟ್, ಮತ್ತಷ್ಟು ಕೇಂದ್ರೀಕರಣ ಹಾಗೂ ರಾಜ್ಯಗಳ ಒಕ್ಕೂಟ ಹಕ್ಕುಗಳ ಮೇಲೆ ಮತ್ತಷ್ಟು ಆಕ್ರಮಣ ಮಾಡಿದೆ ಮತ್ತು ಕೃಷಿ ಕಾರ್ಪೋರೇಟೀಕರಣದ ಕಡೆಗೆ ಕೃಷಿ ರಂಗವನ್ನು ಒಯ್ಯುವ ಸ್ಪಷ್ಟ ಲಕ್ಷಣಗಳನ್ನು ತೋರ್ಪಡಿಸಿದೆ. ಕೃಷಿ ಸಂಬಂದಿತ ವಲಯಗಳಿಗೆ ತೀವ್ರವಾಗಿ ಅನುದಾನ ಕಡಿತದ ಮೂಲಕ ಕೃಷಿ ರಂಗವನ್ನು ಮತ್ತಷ್ಟು ದಿವಾಳಿ ಕಡೆಗೆ ನೂಕುವ ನಿರುದ್ಯೋಗ, ವಲಸೆ, ಹಸಿವನ್ನು ಹೆಚ್ಚಿಸುವ ಬಜೆಟ್ ನಿಂದ ರೈತಾಪಿ ಹಾಗೂ ಗ್ರಾಮೀಣ ಸಮುದಾಯಕ್ಕೆ ತೀವ್ರ ನಿರಾಶೆಯನ್ನು ಉಂಟು ಮಾಡಿದೆ.

ರೈತಾಪಿ ಕೃಷಿಯನ್ನು ನಾಶ ಮಾಡಿ, ಬಲಿಷ್ಠ ಕಾರ್ಪೋರೇಟ್ ಸಂಸ್ಥೆಗಳ ಮರ್ಜಿಗೆ ಕೃಷಿ ರಂಗವನ್ನು ಒಳಪಡಿಸುವ ಸ್ಪಷ್ಟ ಉದ್ದೇಶದ ರೈತ ವಿರೋಧಿ ಬಜೆಟ್ ಮಂಡಿಸುವ ಮೂಲಕ ಬಿಜೆಪಿ ನೇತೃತ್ವದ ಎನ್.ಡಿ.ಎ. ಕೇಂದ್ರ ಸರ್ಕಾರ ರೈತರಿಗೆ ದ್ರೋಹ ಬಗೆದಿದೆ.

ಕೃಷಿ ಉತ್ಪಾದಕತೆ ಹಾಗೂ ರೈತರ ಕಲ್ಯಾಣವನ್ನು ಕಡೆಗಣಿಸಿರುವ ಈ ಬಜೆಟ್, ಮತ್ತಷ್ಟು ಕೇಂದ್ರೀಕರಣ ಹಾಗೂ ರಾಜ್ಯಗಳ ಒಕ್ಕೂಟ ಹಕ್ಕುಗಳ ಮೇಲೆ ಮತ್ತಷ್ಟು ಆಕ್ರಮಣ ಮಾಡಿದೆ ಮತ್ತು ಕೃಷಿ ಕಾರ್ಪೋರೇಟೀಕರಣದ ಕಡೆಗೆ ಕೃಷಿ ರಂಗವನ್ನು ಒಯ್ಯುವ ಸ್ಪಷ್ಟ ಲಕ್ಷಣಗಳನ್ನು ತೋರ್ಪಡಿಸಿದೆ. ಕೃಷಿ ಸಂಬಂದಿತ ವಲಯಗಳಿಗೆ ತೀವ್ರವಾಗಿ ಅನುದಾನ ಕಡಿತದ ಮೂಲಕ ಕೃಷಿ ರಂಗವನ್ನು ಮತ್ತಷ್ಟು ದಿವಾಳಿ ಕಡೆಗೆ ನೂಕುವ ನಿರುದ್ಯೋಗ, ವಲಸೆ, ಹಸಿವನ್ನು ಹೆಚ್ಚಿಸುವ ಬಜೆಟ್ ನಿಂದ ರೈತಾಪಿ ಹಾಗೂ ಗ್ರಾಮೀಣ ಸಮುದಾಯಕ್ಕೆ ತೀವ್ರ ನಿರಾಶೆಯನ್ನು ಉಂಟು ಮಾಡಿದೆ.

2019 ರಲ್ಲಿ ಶೇ.5.44ರಷ್ಟಿದ್ದ ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳ ಅನುದಾನವನ್ನು ಶೇ.3.15 ರಷ್ಟಕ್ಕೆ ಕಡಿತಗೊಳಿಸಿದೆ. 2022–23 ಕ್ಕೆ ಹೋಲಿಸಿದರೆ ಶೇ.21.3 ರಷ್ಟು ಕಡಿತಗೊಂಡಿದೆ. ರೈತಾಪಿ ಸಮುದಾಯದ ಬಹುಮುಖ್ಯ ಹಕ್ಕೋತ್ತಾಯವಾದ ಸಮಗ್ರ ಕೃಷಿ ವೆಚ್ಚಕ್ಕೆ ಶೇ. 50ರಷ್ಟು ಲಾಭಾಂಶ ಒಳಗೊಂಡ ಕನಿಷ್ಟ ಬೆಂಬಲ ಬೆಲೆ ನಿಗದಿಗೆ ಯಾವುದೇ ಕ್ರಮವನ್ನು ಒಳಗೊಂಡಿಲ್ಲ. ಗ್ರಾಮೀಣ ಉದ್ಯೋಗದ ಬೇಡಿಕೆ ತೀವ್ರವಾಗಿ ಹೆಚ್ಚುತ್ತಿದ್ದರೂ, ಹಳೆಯ ಕೂಲಿ ಪಾವತಿ ಬೆಟ್ಟದಷ್ಟು ಉಳಿದಿದ್ದರೂ, ನರೇಗಾ ಯೋಜನೆಗೆ ಅನುದಾನ ಹೆಚ್ಚಳ ಮಾಡಿಲ್ಲ. ಅದೇ ರೀತಿ ಪಿಎಂ ಕಿಸಾನ್, ಪಿಎಂ ಫಸಲ್ ಭೀಮಾ ಯೋಜನೆಗಳ ಅನುದಾನದಲ್ಲೂ ಹೆಚ್ಚಳ ಮಾಡಿಲ್ಲ. ಕೃಷಿಗೆ ಪ್ರಥಮ ಅಧ್ಯತೆ ನೀಡಲಾಗಿದೆ ಎಂಬ ಹಣಕಾಸು ಸಚಿವರ ಹೇಳಿಕೆ ಮೋಸಗೊಳಿಸುವಂತಹದ್ದು. ವಾಸ್ತವವಾಗಿ ರೈತರ, ಕಾರ್ಮಿಕರ, ಬಡವರ ಕಲ್ಯಾಣಕ್ಕೆ ಯಾವುದೇ ಅಧ್ಯತೆಯನ್ನು ಈ ಬಜೆಟ್ ಒದಗಿಸಿಲ್ಲ.

ನರೇಗಾಕ್ಕೆ ಹಣ ಹೆಚ್ಚಳವಿಲ್ಲ

ಈಗ ಒದಗಿಸಿರುವ ನರೇಗಾ ಅನುದಾನದಲ್ಲಿ ಈಗಾಗಲೇ ಈ ಹಣಕಾಸು ವರ್ಷದಲ್ಲಿ 42,000 ಕೋಟಿ ರೂ.ಗಳಷ್ಟು ವ್ಯಯವಾಗಿದ್ದು, ಇನ್ನುಳಿದ ಎಂಟು ತಿಂಗಳಿಗೆ ಕೇವಲ 44 ಸಾವಿರ ಕೋಟಿ ಮಾತ್ರ ಉಳಿದಿದೆ. ನರೇಗಾಕ್ಕೆ ಹಣ ಹೆಚ್ಚಳ ಮಾಡದೇ ಇರುವುದು ಗ್ರಾಮೀಣ ಬಡವರ ಸಂಕಟಗಳನ್ನು ಹೆಚ್ಚಿಸಲಿದೆ. ಗ್ರಾಮಾಂತರ ಪ್ರದೇಶಗಳ ಸಂಕಟ, ನಿರುದ್ಯೋಗ, ವಲಸೆಯಂತಹ ವಿಷಯಗಳಿಗೆ ಬಿಜೆಪಿ ನೇತೃತ್ವದ ಸರ್ಕಾರ ಎಷ್ಟು ಅಸೂಕ್ಷ್ಮವಾಗಿದೆ ಎಂಬುದನ್ನು ಇದು ತೋರಿಸುತ್ತದೆ.

ರಸಗೊಬ್ಬರದ ಅನುದಾನದಲ್ಲಿ ಶೇ. 34.7 ರಷ್ಟು ಕಡಿತ

ಬೇಸಾಯ ವಲಯಕ್ಕೆ ಶೇ. 24.7 ರಷ್ಟು ಹಾಗೂ ರಸಗೊಬ್ಬರದ ಅನುದಾನದಲ್ಲಿ ಶೇ. 34.7 ರಷ್ಟು ದೊಡ್ಡ ಪ್ರಮಾಣದಲ್ಲಿ ಅನುದಾನ ಕಡಿತ ಮಾಡಲಾಗಿದೆ. 2022–23 ಕ್ಕೆ ಹೋಲಿಸಿದರೆ 87,238 ಕೋಟಿ ರೂ.ನಷ್ಟು ಇಳಿಕೆಯಾಗಿದೆ. ಇದು ಅತ್ಯಂತ ಅಪಾಯಕಾರಿ ಹಾಗೂ ಕೃಷಿ ಉತ್ಪಾದಕತೆಯ ಮೇಲೆ ಗಂಭೀರ ದುಷ್ಪರಿಣಾಮಗಳನ್ನು ಉಂಟು ಮಾಡಲಿದೆ. ತೀವ್ರವಾಗಿ ಹೆಚ್ಚಳವಾಗಿರುವ ಬೇಸಾಯದ ವೆಚ್ಚವನ್ನು ಕಡಿಮೆ ಮಾಡಬೇಕು ಎಂಬ ರೈತರ ಆಗ್ರಹಗಳನ್ನು ಈ ಸರ್ಕಾರ ಕಿವಿಗೆ ಹಾಕಿಕೊಂಡಿಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಸಹಕಾರ ವಲಯಕ್ಕೆ ಶೇ. 30.5 ರಷ್ಟು ಅನುದಾನ ಕಡಿತ

ಹಣಕಾಸು ಸಚಿವರು ಪ್ರಕಟಿಸಿರುವ ರಾಷ್ಟ್ರೀಯ ಸಹಕಾರ ನೀತಿಯು ರಾಜ್ಯಗಳ ಹಕ್ಕುಗಳ ಮೇಲಿನ ತೀವ್ರ ಆಕ್ರಮಣವಾಗಿದೆ. ಎಲ್ಲಾ ಸಹಕಾರಿ ಸಂಸ್ಥೆಗಳನ್ನು ಕೇಂದ್ರ ಸರ್ಕಾರ ತನ್ನ ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವ ಈ ನೀತಿಯು ಸಂವಿಧಾನದ ಮೂಲಭೂತ ಆಧಾರ ಸ್ಥಂಭವಾದ ಒಕ್ಕೂಟ ತತ್ವದ ಗಂಭೀರ ಉಲ್ಲಂಘನೆಯಾಗಿದೆ. 2022–23 ಕ್ಕೆ ಹೋಲಿಸಿದರೆ ಸಹಕಾರ ವಲಯಕ್ಕೆ ಶೇಕಡಾ 30.5 ರಷ್ಟು ಅನುದಾನವನ್ನು ಕಡಿತ ಮಾಡಿದೆ. ಸಹಕಾರಿ ಸಂಸ್ಥೆಗಳ ಮೂಲಕ ದಾಸ್ತಾನು ಸಾಮಾರ್ಥ್ಯವನ್ನು ಹೆಚ್ಚಿಸಲು ಗೋಡೌನ್ ಗಳನ್ನು ನಿರ್ಮಿಸುವ ಬಗ್ಗೆ ಉದ್ದುದ್ದ ಮಾತಾನಾಡುತ್ತಲೇ ಈ ಬಗೆಗಿನ ಅನುದಾನದಲ್ಲಿ ಶೇಕಡಾ 24.2 ರಷ್ಟು ಕಡಿತಗೊಳಿಸಲಾಗಿದೆ. ಸಹಕಾರಿ ವಲಯವನ್ನು ನಿಯಂತ್ರಣಕ್ಕೆ ಒಳಪಡಿಸಿ ಷೇರುದಾರರ ಹಕ್ಕುಗಳಿಗೆ ಯಾವುದೇ ಮನ್ನಣೆ ನೀಡದಂತೆ ಸಹಕಾರಿ ವಲಯದಲ್ಲಿ ಕೇಂದ್ರ ಸರ್ಕಾರದ ಹಸ್ತಕ್ಷೇಪ ಅನಾಹುತಕಾರಿಯಾಗಿದ್ದು ಈ ಕೂಡಲೇ ಕೇಂದ್ರ ಸಹಕಾರಿ ಮಂತ್ರಾಲಯವನ್ನು ರದ್ದುಪಡಿಸಬೇಕು ಎಂದು ಬಲವಾದ ಜನಾಂದೋಲನ ರೂಪಿಸಬೇಕಿದೆ.



ಕಾರ್ಪೋರೇಟ್ ಒಪ್ಪಂದ ಕೃಷಿಯನ್ನು ತರುವ ಪ್ರಯತ್ನ

ಬೇಯರ್, ಅಮೇಜಾನ್ ಮುಂತಾದ ಅತಿದೊಡ್ಡ ದೈತ್ಯ ಕೃಷಿ ಕಾರ್ಪೋರೇಟ್ ಸಂಸ್ಥೆಗಳು, ಕೃಷಿ ರಂಗವನ್ನು ಕೈವಶ ಮಾಡಿಕೊಳ್ಳುವ ಅವಕಾಶ ನೀಡುವಂತಹ ಹಲವು ಅಂಶಗಳನ್ನು ಈ ಬಜೆಟ್ ನಲ್ಲಿ ಹೇಳಲಾಗಿದೆ. ಖಾಸಗಿ ವಲಯಕ್ಕೂ ಕೃಷಿ ಸಂಶೋಧನಾ ಕ್ಷೇತ್ರದಲ್ಲಿ ಅನುದಾನ ಒದಗಿಸುವುದಾಗಿ ಹೇಳಿರುವುದು ಕ್ರಮೇಣ ಇಂತಹ ಖಾಸಗಿ ಕಂಪನಿಗಳೇ ಕೃಷಿ ಸಂಶೋಧನೆಯ ದಿಕ್ಕನ್ನು ನಿರ್ಧರಿಸುವಂತಾಗುತ್ತದೆ. ಅಲ್ಲದೇ 6 ಕೋಟಿ ರೈತರ ಮತ್ತು ಅವರ ಭೂಮಿಗಳ ಎಲ್ಲಾ ವಿವರಗಳನ್ನು ಡಿಜಿಟಲ್ ನಲ್ಲಿ ದಾಖಲಿಕರಣ ಮಾಡುವುದು ತುಂಬಾ ತೊಂದರೆಗಳನ್ನು ಉಂಟು ಮಾಡಲಿದೆ. ಆಧಾರ್ ಮುಂತಾದ ಡಿಜಿಟಲ್ ವ್ಯವಸ್ಥೆಯಲ್ಲಿ ಈಗಾಗಲೇ ಇಂತಹ ಕೇಂದ್ರೀಕೃತ ಡಿಜಿಟಲ್ ದಾಖಲೀಕರಣಗಳು ಹೇಗೆ ಖಾಸಗಿತನವನ್ನು ಉಲ್ಲಂಘಿಸುತ್ತಿವೆ ಮತ್ತು ಹಲವು ರೀತಿಯ ಆರ್ಥಿಕ ವಂಚನೆ ಅಪರಾಧಗಳಿಗೆ ಅವಕಾಶ ಸೃಷ್ಟಿಸಿವೆ ಎಂಬುದು ಪದೇ ಪದೇ ಸಾಬೀತಾಗುತ್ತಿರುವಾಗ, ಕಾರ್ಪೋರೇಟ್ ಗಳಿಗೆ ಹಾಗೂ ಇನ್ನಿತರ ಭೂ ಗಳ್ಳ ದಲ್ಲಾಳಿಗಳಿಗೆ ಭೂ ಕಬಳಿಕೆಗೆ ಅವಕಾಶದ ಬಾಗಿಲನ್ನು ತೆರೆದಿಟ್ಟಂತೆ ಆಗಿದೆ.

ಒಂದೆಡೆ ರೈತರಿಗೆ, ಕಾರ್ಮಿಕರಿಗೆ ಶೂನ್ಯ ಆದ್ಯತೆ–ಇನ್ನೊಂದೆಡೆ ಕೃಷಿಯ ತ್ವರಿತ ಕಾರ್ಪೋರೇಟೀಕರಣ ಮತ್ತು ಕೇಂದ್ರೀಕರಣ–ರೈತ ಸಂಘ ಖಂಡನೆ

400 ಜಿಲ್ಲೆಗಳಲ್ಲಿ ಇದೇ ಡಿಜಿಟಲ್ ದಾಖಲೀಕರಣ ವ್ಯವಸ್ಥೆ ಯನ್ನು ಬಳಸಿ ಖಾರೀಪ್ ಬೆಳೆಯ ಡಿಜಿಟಲ್ ಸಮೀಕ್ಷೆ ನಡೆಸುವ ಪ್ರಸ್ತಾಪವು ಕೂಡ ಗಂಭೀರವಾದ ಕಳವಳವನ್ನು ಉಂಟು ಮಾಡಿದೆ. ಡಿಜಿಟಲ್ ಹಾಗೂ ರಿಮೋಟ್ ಆಧಾರಿತ ತಂತ್ರಜ್ಞಾನದ ಮೂಲಕ ಬೆಳೆ ಸಮೀಕ್ಷೆ ನಡೆಸುವುದು ರೈತರಿಗೆ ಅನಾನುಕೂಲಗಳನ್ನು ಉಂಟು ಮಾಡುತ್ತದೆ. ಬೆಳೆ ವಿಮಾ ಕಂಪನಿಗಳ ಹಿತಾಸಕ್ತಿಗಾಗಿ ಇಂತಹ ದಾಖಲಾತಿಗಳನ್ನು ಆಗಾಗ್ಗೆ ತಿರುಚುವ ಅಪಾಯವನ್ನು ತಳ್ಳಿ ಹಾಕಲು ಸಾಧ್ಯವಿಲ್ಲ. ಈ ಡಿಜಿಟಲ್ ಬೆಳೆ ಸಮೀಕ್ಷೆಯನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳುವ ಮೊದಲು, ಬೆಳೆ ಪ್ರದೇಶ ಹಾಗೂ ಇಳುವರಿಯು ನಿಖರವಾಗಿ ದಾಖಲಾಗುವುದೇ ಎಂಬುದರ ಬಗ್ಗೆ ಶ್ವೇತಪತ್ರವನ್ನು ಹೊರಡಿಸಬೇಕು ಎಂದು ಒತ್ತಾಯಿಸಬೇಕಿದೆ.

ಈ ಬಜೆಟ್ ನಲ್ಲಿ ದ್ವಿದಳ ಧಾನ್ಯ ಹಾಗೂ ಎಣ್ಣೆ ಬೀಜಗಳಲ್ಲಿ ಆತ್ಮನಿರ್ಭರತೆಯ ಮಾತುಗಳನ್ನು ಹೇಳಲಾಗಿದೆ. ಬೆಳೆಗಳಿಗೆ ಪರಿಣಾಮಕಾರಿ ಲಾಭದಾಯಕ ಬೆಂಬಲ ಬೆಲೆ ಖರೀದಿ ವ್ಯವಸ್ಥೆ ಮಾತ್ರವೇ ರೈತರಲ್ಲಿ ಆತ್ಮ ಸ್ಥೈರ್ಯವನ್ನು ಉಂಟು ಮಾಡುತ್ತದೆ. ಇಂತಹ ಪ್ರಯತ್ನಗಳಿಲ್ಲದೇ ಅಷಾಡುಭೂತಿತನದ ಮಾತುಗಳು, ಉದ್ದುದ್ದದ ಭರವಸೆಗಳು ಕೇವಲ ಟೊಳ್ಳು ಮತ್ತು ಬೂಟಾಟಿಕೆಯಾಗುತ್ತದೆ. ತರಕಾರಿ ಉತ್ಪಾದನೆ ಹಾಗೂ ಪೂರೈಕೆ ಸರಪಳಿಯಲ್ಲಿ ದೊಡ್ಡ ಪ್ರಮಾಣದ ಕ್ಷೇತ್ರಗಳನ್ನು ಉತ್ತೇಜಿಸುವ ಪ್ರಸ್ತಾಪವು, ಹಿಂಬಾಗಿಲಿನಿಂದ ಕಾರ್ಪೋರೇಟ್ ಒಪ್ಪಂದ ಕೃಷಿಯನ್ನು ತರುವ ಪ್ರಯತ್ನವಾಗಿದೆ. ಕಾರ್ಪೋರೇಟ್ ಕಂಪನಿಗಳ ಪ್ರವೇಶಕ್ಕೆ ಅವಕಾಶವಾಗದಂತಹ ಸ್ಪಷ್ಟ ಹಾಗೂ ವಿವರವಾದ ಧೋರಣೆಗಳನ್ನು, ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸದ ಹೊರತು ರೈತರಿಗೆ ತೊಂದರೆಯೇ ಆಗಲಿದೆ. ಜೊತೆಗೆ ಮತ್ತೆ ಒಂದು ಕೋಟಿ ರೈತರನ್ನು ಶೂನ್ಯ ಖರ್ಚಿನ ನೈಸರ್ಗಿಕ ಕೃಷಿಗೆ ಒಳಪಡಿಸುವ ಮಾತುಗಳನ್ನು ಮತ್ತೊಮ್ಮೆ ಹೇಳಲಾಗಿದೆ. ಈ ಹಿಂದಿನ ಇಂತಹದ್ದೇ ಮಾತುಗಳು ಮತ್ತು ಕ್ರಮಗಳು ಯಾವ ಪರಿಣಾಮವನ್ನು ಉಂಟು ಮಾಡಿವೆ ಎಂಬ ಯಾವ ನಿರ್ದಿಷ್ಟ ಅಧ್ಯಯನದ ಒತ್ತಾಸೆ ಇಲ್ಲದ ಇಂತಹ ಕ್ರಮಗಳು ದೇಶವನ್ನು ಬಹಳ ದೊಡ್ಡ ಆಹಾರದ ಬಿಕ್ಕಟ್ಟಿಗೆ ನೂಕಬಹುದು. ಈ ಬಗ್ಗೆ ಯಾವುದೇ ಮುನ್ನೆಚ್ಚರಿಕೆ ಕ್ರಮಗಳನ್ನು ಈ ಬಜೆಟ್ ಒಳಗೊಂಡಿಲ್ಲ.

ಕೃಷಿ ಬೆಳವಣಿಗೆ ದರ ಕುಸಿದಿದೆ

2022–23 ರಲ್ಲಿ ಕೃಷಿ ರಂಗದ ಬೆಳವಣಿಗೆ ದರ ಶೇಕಡಾ 4.7 ರಷ್ಟು ಇತ್ತು. 2023–24 ರಲ್ಲಿ ಶೇಕಡಾ 1.4 ರಷ್ಟು ಮಾತ್ರ ಇದೆ ಎಂಬುದು ಬಜೆಟ್ ಪೂರ್ವ ಆರ್ಥಿಕ ಸಮೀಕ್ಷೆಯಲ್ಲಿ ಬಹಿರಂಗಗೊಂಡಿರುವ ವಾಸ್ತವ. ಬರಗಾಲದ ಕಾರಣ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಇಳಿಕೆಯಾಗಿ ಕೃಷಿ ಬೆಳವಣಿಗೆ ದರ ಕುಸಿದಿದೆ ಎಂದು ಸರ್ಕಾರ ಹೇಳಿಕೊಂಡಿದೆ. ಕೃಷಿ ಉತ್ಪಾದನಾ ವೆಚ್ಚ ಇಳಿಕೆ ಮಾಡದೇ ಇರುವುದು, ಕಡಿಮೆ ಬಡ್ಡಿದರದ ಸುಲಭ ಸಾಲ ಒದಗಿಸದೇ ಇರುವುದು, ಪರಿಣಾಮಕಾರಿ ಬೆಳೆ ವಿಮೆ ಒದಗಿಸದೇ ಇರುವುದು, ನೀರಾವರಿ ವಿಸ್ತರಣೆ ಮಾಡದೇ ಇರುವುದು, ಸಮರ್ಪಕ ವಿದ್ಯುತ್ ಚ್ಛಕ್ತಿ ಪೂರೈಸದೇ ಇರುವುದು, ರಸಗೊಬ್ಬರ, ಬೀಜಗಳನ್ನು ಸಕಾಲಕ್ಕೆ ಒದಗಿಸದೇ ಇರುವುದು ಇವೆಲ್ಲಕ್ಕೂ ಮಿಗಿಲಾಗಿ ಸಮಗ್ರ ಉತ್ಪಾದನಾ ವೆಚ್ಚಕ್ಕೆ ಅನುಗುಣವಾಗಿ ಶೇಕಡಾ ಐವತ್ತು ರಷ್ಟು ಲಾಭಾಂಶ ಸೇರಿಸಿ ಬೆಂಬಲ ಬೆಲೆ ನೀಡದೇ ಇರುವುದು ಕೃಷಿ ರಂಗದ ಬೆಳವಣಿಗೆ ದರ ಕುಸಿತಕ್ಕೆ ಕಾರಣವಾಗಿರುವುದನ್ನು ಮರೆ ಮಾಚಿ ತನ್ನ ವೈಪಲ್ಯಗಳನ್ನು ಮುಚ್ಚಿಕೊಂಡು ಎಲ್ ನಿನೋ ನೈಸರ್ಗಿಕ ವಿಕೋಪ ಒಂದನ್ನೇ ಹೊಣೆ ಮಾಡಿದೆ. ಸ್ಪಷ್ಟವಾಗಿ ಈ ಬಜೆಟ್ ಈ ಎಲ್ಲಾ ಅಂಶಗಳ ಕುರಿತು ದಿವ್ಯ ನಿರ್ಲಕ್ಷ್ಯ ತೋರಿದೆ. ಈ ಬಜೆಟ್ ನ ಒಟ್ಟು ಗುರಿಯು ರಪ್ತು ಕೇಂದ್ರೀತವಾಗಿದ್ದು, ಕೃಷಿಯನ್ನು ಇಡಿಯಾಗಿ ಕಾರ್ಪೋರೇಟ್ ಗಳಿಗೆ ಹಸ್ತಾಂತರಿಸುವ ದುರುದ್ದೇಶವನ್ನು ಹೊಂದಿದೆ. ಈ ದುರುದ್ದೇಶವನ್ನು ವಿಫಲಗೊಳಿಸುವ ಸವಾಲು ರೈತ ಚಳುವಳಿಯ ಮುಂದೆ ಇದೆ.

ಅತಿ ಹೆಚ್ಚು ಬೆಂಬಲದ ಅಗತ್ಯವಿರುವವರಿಗೆ ಬೆಂಬಲವನ್ನು ಸದ್ದಿಲ್ಲದೆ ಕುಗ್ಗಿಸುವ ಕಡಿತಗಳು

ಪ್ರಮುಖ ಸರ್ಕಾರಿ ಯೋಜನೆಗಳು ವೆಚ್ಚದಲ್ಲಿ ಗಮನಾರ್ಹವಾದ ಕಡಿತವನ್ನು ಕಂಡಿದ್ದು, ಸದ್ದಿಲ್ಲದೆ ಮಾಡಿರುವ ಈ ಕಡಿತಗಳು ಸಾಮಾಜಿಕ ಬೆಂಬಲದ ಸ್ವರೂಪವನ್ನೇ ಬದಲಿಸಿವೆ. ಈ ಕಾರ್ಯಕ್ರಮಗಳ ಮೇಲೆ ಹೆಚ್ಚು ಅವಲಂಬಿತವಾಗಿರುವ ಸಮಾಜದ ಕೆಳಸ್ತರದವರು, ನೆರವಿನಲ್ಲಿ ಇಂತಹ ಕಡಿತವನ್ನು ನಿಭಾಯಿಸಲು ಹೆಣಗಾಡುತ್ತಿದ್ದಾರೆ. ಪ್ರಮುಖ ಯೋಜನೆಗಳಲ್ಲಿನ ಈ ಕೆಳಗಿನ ಕಡಿತಗಳು ಬೆಂಬಲದ ಅತಿ ಹೆಚ್ಚು ಅಗತ್ಯವಿರುವವರಿಗೆ ಬೆಂಬಲವನ್ನು ಕುಗ್ಗಿಸುವ ಗೊಂದಲದ ಪ್ರವೃತ್ತಿಯನ್ನು ಬಹಿರಂಗಪಡಿಸುತ್ತವೆ ಎಂದು ನವದೆಹಲಿಯ ಸೆಂಟರ್ ಫಾರ್ ಫಿನಾನ್ಶಿಯಲ್ ಅಕೌಂಟೆಬಿಲಿಟಿ(ಸಿಎಫ್‌ಬಿ)ಲ್ಲಿ ಡಾಟಾ ಅನಲಿಸ್ಟ್ (ದತ್ತಾಂಶ ವಿಶ್ಲೇಷಕ) ರಾಗಿರುವ ಪ್ರಯಾಗ್ ರಾಜ್. 'ದಿ ವೈರ್'ನಲ್ಲಿ ಅವರ ಲೇಖನ Charts: The Modi Govt Has Reduced Spending For Almost All Major Social Sector Heads (ಜುಲೈ 25)ದಲ್ಲಿನ ಒಂದು ಪಟ್ಟಿ ಇಲ್ಲಿದೆ:

ಮನರೇಗ

ಒಂದೊಮ್ಮೆ ಗ್ರಾಮೀಣ ಉದ್ಯೋಗದ ಆಧಾರಸ್ತಂಭವಾಗಿದ್ದ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಾಗಿನ ವೆಚ್ಚವು 2015–16 ರಲ್ಲಿನ ಒಟ್ಟು ವೆಚ್ಚದ 2.09% ರಿಂದ 2024–25 ರ ಬಜೆಟ್ ಅಂದಾಜುಗಳಲ್ಲಿ ಕೇವಲ 1.78% ಕ್ಕೆ ಇಳಿದಿದೆ.

ಎನ್‌ಎಸ್‌ಎಪಿ (ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮ)

ರಾಷ್ಟ್ರೀಯ ವೃದ್ಧಾಪ್ಯ ಪಿಂಚಣಿ ಯೋಜನೆ, ಇಂದಿರಾಗಾಂಧಿ ರಾಷ್ಟ್ರೀಯ ಅಂಗವಿಕಲರ ಪಿಂಚಣಿ ಯೋಜನೆ, ರಾಷ್ಟ್ರೀಯ ಕುಟುಂಬ ಪ್ರಯೋಜನ ಯೋಜನೆ ಮತ್ತು ಅನ್ನಪೂರ್ಣವನ್ನು ಒಳಗೊಂಡಿರುವ ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮವು 0.48% ರಿಂದ 0.20% ಕ್ಕೆ ನಿಧಿಯ ಕುಸಿತವನ್ನು ಕಂಡಿದೆ.

ಸಮಗ್ರ ಶಿಕ್ಷಾ ಅಭಿಯಾನ

SSA, RMSA ಮತ್ತು ಶಿಕ್ಷಕರ ಶಿಕ್ಷಣವನ್ನು ಏಕೀಕರಿಸಲು 2018 ರಲ್ಲಿ ಪ್ರಾರಂಭಿಸಲಾದ ಈ ಸಮಗ್ರ ಯೋಜನೆಯು 2015–16 ರಲ್ಲಿ ಒಟ್ಟು ಬಜೆಟ್ ಅಂದಾಜಿನ 1.46% ರಿಂದ 2024–25 ರಲ್ಲಿ 0.78% ಕ್ಕೆ ಕಡಿತಗೊಂಡಿದೆ.

ಪಿಎಂ ಪೋಶನ್

ಮಧ್ಯಾಹ್ನದ ಊಟದ ಯೋಜನೆಯನ್ನು ಬದಲಿಸುವ ಕಾರ್ಯಕ್ರಮದ ವೆಚ್ಚದಲ್ಲಿ 0.51% ರಿಂದ 0.26% ಕ್ಕೆ ತೀವ್ರ ಕಡಿತವಾಗಿದೆ.

ಪೋಷಕಾಂಶ ಆಧಾರಿತ ಸಬ್ಸಿಡಿ ಯೋಜನೆ

ರೈತರಿಗೆ ಸಬ್ಸಿಡಿ ರಸಗೊಬ್ಬರಗಳನ್ನು ಒದಗಿಸುವ ಈ ಯೋಜನೆಗೆ ಬಜೆಟ್ ಹಂಚಿಕೆಯು 1.23% ರಿಂದ 0.93% ಕ್ಕೆ ಕಡಿಮೆಯಾಗಿದೆ.

ಯೂರಿಯಾ ಸಬ್ಸಿಡಿ

ರೈತರಿಗೆ ನಿರ್ಣಾಯಕ ಅಂಶವಾಗಿದ್ದು, ವೆಚ್ಚವನ್ನು 2.82% ರಿಂದ 2.47% ಕ್ಕೆ ಇಳಿಸಲಾಗಿದೆ.

ಬೆಳೆ ವಿಮೆ

ರೈತರ ಆತ್ಮಹತ್ಯೆ ದರಗಳು ಹೆಚ್ಚುತ್ತಿರುವಾಗ, ಈ ಬಹುಮುಖ್ಯ ಸುರಕ್ಷತಾ ಕ್ರಮವು 0.17% ರಿಂದ 0.30% ಕ್ಕೆ ತುಸು ಹೆಚ್ಚಳವನ್ನು ಕಂಡಿದೆ.

ಪ್ರಧಾನ ಮಂತ್ರಿ ಸ್ವಾಸ್ಥ್ಯ ಯೋಜನೆ

0.09% ರಿಂದ 0.05% ಕ್ಕೆ ಕಡಿತಗೊಳಿಸಲಾಗಿದೆ.

ಪ್ರಧಾನ ಮಂತ್ರಿ ಉದ್ಯೋಗ ಸೃಷ್ಟಿ ಕಾರ್ಯಕ್ರಮ

ಹೆಚ್ಚುತ್ತಿರುವ ನಿರುದ್ಯೋಗ ದರಗಳ ಹೊರತಾಗಿಯೂ, ಈ ಯೋಜನೆಯ ಬಜೆಟ್ ಅನ್ನು 0.07% ರಿಂದ 0.05% ಕ್ಕೆ ಇಳಿಸಲಾಗಿದೆ. ಅದೇನೇ ಇರಲಿ, ಲಕ್ಷಾಂತರ ಉದ್ಯೋಗ ಸೃಷ್ಟಿಯಾಗಲಿದೆ ಎಂದು ಮೋದಿ ಹೇಳಿಕೊಂಡಿದ್ದಾರೆ.

ಪಿಎಂ ಕಿಸಾನ್

ರೈತ ಕುಟುಂಬಗಳಿಗೆ ಹಣಕಾಸಿನ ನೆರವು ನೀಡಲು 2019 ರಲ್ಲಿ ಪ್ರಾರಂಭಿಸಲಾದ ಈ ಯೋಜನೆಗೆ ಹಂಚಿಕೆಯು 2019–20 ರಲ್ಲಿ ಒಟ್ಟು ಬಜೆಟ್ ವೆಚ್ಚದ 1.8% ರಿಂದ 2024–25 ರಲ್ಲಿ 1.2% ಕ್ಕೆ ಕುಸಿದಿದೆ.

ಅಗಾಧ ಸಮಸ್ಯೆಗಳನ್ನು ನಿರ್ಲಕ್ಷಿಸಿದ ಬಜೆಟ್... ಪುಟ 8 ರಿಂದ

ಕೇಳುವುದಿಲ್ಲ. ಅದಕ್ಕೊಂದು ಆರ್ಥಿಕ ಕಾರಣವಿದ್ದರೂ, ಅದೊಂದು "ನೈತಿಕ ವೈಫಲ್ಯ" ಎಂದೇ ಭಾವಿಸಲಾಗಿದೆ. ಬಂಡವಾಳಶಾಹಿಗಳು ತಮ್ಮ ಬಳಿ ಹೆಚ್ಚು ಲಾಭದ ಹಣವಿದೆ ಎಂಬ ಕಾರಣಕ್ಕೇನೂ ಹೂಡಿಕೆ ಮಾಡುವುದಿಲ್ಲ. ಮಾರುಕಟ್ಟೆ ವಿಸ್ತಾರಗೊಳ್ಳುತ್ತದೆ ಎಂಬ ನಿರೀಕ್ಷೆ ಅವರಿಗೆ ಇದ್ದಾಗ ಮಾತ್ರವೇ ಹೂಡಿಕೆ ಮಾಡುತ್ತಾರೆ. ಮಾರುಕಟ್ಟೆ ಸ್ಥಗಿತಗೊಂಡಿದೆ ಎಂದಿರುವಾಗ, ಉತ್ಪಾದನಾ ಸಾಮರ್ಥ್ಯದ ಯಾವುದೇ ಹೆಚ್ಚಳದ ಉಪಯೋಗವಾಗದೆಯೇ ಉಳಿಯುತ್ತದೆ. ಅಂದರೆ ಆ ಹೆಚ್ಚುವರಿ ಸಾಮರ್ಥ್ಯವನ್ನು ಸೃಷ್ಟಿಸಲು ಮಾಡಿದ ಹೂಡಿಕೆಯ ಮೇಲೆ ಸೊನ್ನೆ ಲಾಭ! ಇಂತಹ ಪರಿಸ್ಥಿತಿಯಲ್ಲಿ ಬಂಡವಾಳಶಾಹಿಗಳು ತಮ್ಮ ಲಾಭಗಳನ್ನು ರಿಯಲ್ ಎಸ್ಟೇಟ್ ಅಥವಾ ಹಣಕಾಸಿನ ಸ್ವತ್ತುಗಳನ್ನು ಖರೀದಿಸಲು ಬಳಸುತ್ತಾರೆ. ಏಕೆಂದರೆ, ಈ ಸ್ವತ್ತುಗಳು ಸಾಮಾನ್ಯವಾಗಿ ಗಳಿಸಿಕೊಡುವ ಪ್ರತಿಫಲ ದರಗಳಲ್ಲದೆ, ಗಮನಾರ್ಹ ಬಂಡವಾಳ ಗಳಿಕೆಯನ್ನೂ ಕೊಡುತ್ತವೆ ಎಂದು ಅವರು ನಿರೀಕ್ಷಿಸುತ್ತಾರೆ. ಆದ್ದರಿಂದ ಮೋದಿ ಸರ್ಕಾರದ ಸಮಸ್ತ ಆರ್ಥಿಕ ಚಿಂತನೆಯೇ ತಪ್ಪು. ಅದು ಐಎಂಎಫ್ ಮತ್ತು ವಿಶ್ವ ಬ್ಯಾಂಕ್ ಪಸರಿಸುವ ಬೂರ್ಜ್ವಾ ಅರ್ಥಶಾಸ್ತ್ರದ ಟೊಳ್ಳು ಪ್ರತಿಪಾದನೆಗಳನ್ನು ಆಧರಿಸಿದೆ.

ಅಕ್ಷಮ್ಯ ಕ್ರಮಗಳು

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಬಜೆಟಿನಲ್ಲಿ ನೀಡಿರುವ ಮೊತ್ತವೇ ಸರಕಾರದ ಆಶಯವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಅದನ್ನು 2023–24ರಲ್ಲಿ ಖರ್ಚಾಧ ರೂ.86,000 ಕೋಟಿಯ ಮಟ್ಟದಲ್ಲೇ ಇಡಲಾಗಿದೆ. ನಿಜ, ಬೇಡಿಕೆ ಹೆಚ್ಚಿದರೆ ಈ ಮೊತ್ತವನ್ನು ಹೆಚ್ಚಿಸಬಹುದು ಎಂದು ಹೇಳಿಕೊಳ್ಳಬಹುದು. ಆದರೆ ಕೂಲಿಹಣವನ್ನು ಸರಿಯಾದ ಸಮಯದಲ್ಲಿ ಕೊಡದಿದ್ದರೆ ಇಂತಹ ಬೇಡಿಕೆಯೇ ಇಳಿಯಬಹುದು. ಬಜೆಟ್ ನೀಡಿಕೆ ಕಡಿಮೆಯಿದ್ದಾಗ ಸಾಮಾನ್ಯವಾಗಿ ಹೀಗೇ ಆಗಿದೆ. ಅಲ್ಲದೆ ಕಳೆದ ವರ್ಷ ಹಲವರನ್ನು, ಉದಾ: ಪಶ್ಚಿಮ ಬಂಗಾಲದಲ್ಲಾದಂತೆ ಈ ಸ್ಕೀಮಿನಿಂದ ಉದ್ದೇಶ ಪೂರ್ವಕವಾಗಿ ಹೊರಗಿಡಲಾಯಿತು. ಇದರಿಂದಾಗಿ ಕಳೆದ ವರ್ಷದ ವೆಚ್ಚ ಬೇಡಿಕೆಗಿಂತ ಕೆಳಗಿತ್ತು. ಇದನ್ನು 2024–25ರಲ್ಲಿ ಪುನರಾವರ್ತಿಸುವ ಪ್ರಯತ್ನ ನಡೆದಿದೆ. ಇದು ಅಕ್ಷಮ್ಯ.

ಪಿಂಚಣಿ ಮತ್ತು ಅಂಗವೈಕಲ್ಯ ಪ್ರಯೋಜನಗಳನ್ನು ಒದಗಿಸುವ ಎನ್‌ಎಸ್‌ಎಪಿಗೆ ಕೂಡ ಬಜೆಟಿನಲ್ಲಿ ನೀಡಿರುವ ಮೊತ್ತದ ವಿಷಯದಲ್ಲೂ ಇದು ನಿಜ. ಪ್ರತಿ ಫಲಾನುಭವಿಗೆ ಕೊಡುವ ಮೊತ್ತವೇ ಹಾಸ್ಯಾಸ್ಪದವೆನಿಸುವಷ್ಟು ಕಡಿಮೆ; ಆದರೂ ಇದಕ್ಕೂ ಬಜೆಟಿನಲ್ಲಿ ನೀಡಿರುವ ಮೊತ್ತ 2023–24ರಲ್ಲಿ ಮಾಡಿದ ವೆಚ್ಚದ ಮಟ್ಟದಲ್ಲೇ ಇಡಲಾಗಿದೆ. ಅದರ ನೈಜಬೆಲೆಯನ್ನು ಪರಿಗಣಿಸಿದರೆ ವಾಸ್ತವವಾಗಿ ಇದು ಕಡಿತವೇ. ಶಿಕ್ಷಣಕ್ಕೆ 2023–24ರ ಬಜೆಟ್ ಅಂದಾಜುಗಳಿಗೆ ಹೋಲಿಸಿದರೆ ಶಿಕ್ಷಣಕ್ಕೆ ನೀಡಿರುವ ಮೊತ್ತ 7.5%ದಷ್ಟು ಹೆಚ್ಚುತ್ತದೆ, ಆರೋಗ್ಯದ ಬಾಬ್ತಿನಲ್ಲಿ ಯಾವುದೇ ಹೆಚ್ಚಳವಿಲ್ಲ. ಅಂದರೆ ಜಿಡಿಪಿಗೆ ಹೋಲಿಸಿದರೆ ಈ ಎರಡೂ ಬಾಬ್ತುಗಳಲ್ಲಿ ಕಡಿತವಾಗುತ್ತದೆ. ಆದರೆ ಕಳೆದ ವರ್ಷ ಈ ಎರಡೂ ವಲಯಗಳಲ್ಲಿ ನಿಜವಾಗಿ ಮಾಡಿದ ವೆಚ್ಚಗಳು ಬಜೆಟ್ ಅಂದಾಜಿಗಿಂತಲೂ ಕಡಿಮೆ. ಇದೊಂದು ಗಂಭೀರವಾದ ವಿಷಯ. ಆದರೆ ಪ್ರಸಕ್ತ ಬಜೆಟಿನಲ್ಲಿ ಕಡಿತಮಾಡಲು ಇದನ್ನೇ ನೆಪ ಮಾಡಿಕೊಳ್ಳುವುದು ಕೂಡ ಅಕ್ಷಮ್ಯ.

ಆಹಾರ ಸಬ್ಸಿಡಿಯನ್ನು 2023–24ರಲ್ಲಿ ಪರಿಷ್ಕೃತ ಅಂದಾಜಿನ ರೂ.2.12ಲಕ್ಷ ಕೋಟಿಯಿಂದ 2024–25ರ ಬಜೆಟಿನಲ್ಲಿ 2.05 ಲಕ್ಷ ಕೋಟಿಗೆ ಇಳಿಸಲಾಗಿದೆ. ಇದರ ಪರಿಣಾಮವೆಂದರೆ, ಸಬ್ಸಿಡಿಯನ್ನು ಭಾಗಶಃ, ರೈತರ ಹೆಗಲಿಗೆ ದಾಟಿಸಲಾಗಿದೆ. ಈಗಾಗಲೇ ಇವರಿಗೆ ಕೊಡುವ ಬೆಂಬಲ ಬೆಲೆಯನ್ನು ವಿಪರೀತ ಕೆಳಮಟ್ಟದಲ್ಲಿ ಇಡಲಾಗಿದೆ. ಇಂತಹ ಜಿಪುಣತನದ ಅರ್ಥವೆಂದರೆ, ಒಂದೆಡೆಯಲ್ಲಿ ಬಿಹಾರ ಮತ್ತು ಆಂಧ್ರಪ್ರದೇಶಕ್ಕೆ ದೊಡ್ಡ ವರ್ಗಾವಣೆಗಳಿಂದ ಪ್ರಯೋಜನವಾಗಬಹುದಾದರೂ, ಅದಕ್ಕಾಗಿ ಉಳಿದ ರಾಜ್ಯಗಳನ್ನು ಅನ್ಯಾಯವಾಗಿ ಹಿಂಡಲಾಗುವುದು.

ನಮ್ಮ ದೇಶದ ಜನರು ಎದುರಿಸುತ್ತಿರುವ ಅಗಾಧ ಸಮಸ್ಯೆಗಳ ಬಗ್ಗೆ ಅರಿವಿನ ಸಂಪೂರ್ಣ ಕೊರತೆ ಈ ಬಜೆಟ್‌ನಲ್ಲಿ ಎದ್ದು ಕಾಣುವ ಸಂಗತಿ. ಫ್ರಾನ್ಸಿನಲ್ಲಿ 1789ರ ಕ್ರಾಂತಿಯಲ್ಲಿ ಕಿತ್ತೆಸೆಯಲ್ಪಟ್ಟ ಬೊರ್ಬೊನ್ ದೊರೆಗಳ ಬಗ್ಗೆ "ಅವರು ಏನನ್ನೂ ಕಲಿಯುವುದಿಲ್ಲ ಮತ್ತು ಅವರು ಏನನ್ನೂ ಮರೆಯುವುದಿಲ್ಲ" ಎಂದು ಹೇಳಲಾಗುತ್ತದೆ. ಇದು ಎನ್‌ಡಿಎ ಸರಕಾರದ ವಿಷಯದಲ್ಲೂ ಸತ್ಯ. ಅದು ಪ್ರಸ್ತುತಪಡಿಸಿರುವ ಬಜೆಟ್ ಅರ್ಥವ್ಯವಸ್ಥೆಯಲ್ಲಿ ತುರ್ತಾಗಿ ಗಮನ ಹರಿಸಬೇಕಾದುದೇನೂ ಸಂಭವಿಸಿಯೇ ಇಲ್ಲ ಎಂಬಂತೆ ನಟಿಸುತ್ತದೆ; ಇದೊಂದು ಮೊಂಡುತನದ ಅಮೋಘ ಪ್ರದರ್ಶನ.

ಅನು: ಕೆ.ವಿ.

ಸದನದ ಕಲಾಪಗಳು: ಹಾದಿ ತಪ್ಪಿಸುವ ತಂತ್ರಗಳೇ ಮೇಲುಗೈ.... ಪುಟ 3 ರಿಂದ

ನಡೆಸುವ ಮೂಲಕ ಸದನದ ಕಲಾಪಗಳನ್ನೇ ಅಸ್ತವ್ಯಸ್ತಗೊಳಿಸಲಾಯಿತು.

ಇಲ್ಲಿ ಚರ್ಚೆ ಬೇಡಿಕೆಗಳಿಗಿಂತ ಮುಖ್ಯವಾಗಿ ತಮ್ಮ ಮೇಲಿರುವ ಭ್ರಷ್ಟಾಚಾರ ಮತ್ತು ಹಗರಣಗಳನ್ನು ವಿಧಾನ ಸಭೆಯಲ್ಲಿ ಹೊರಬರಲಾರದಂತೆ ತಡೆಯುವ, ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಸರ್ಕಾರಕ್ಕೆ ಕಳಂಕ ಲೇಪಿಸುವ ದಿಕ್ಕಿನಲ್ಲಿಯೇ ಬಿಜೆಪಿ ಕಾರ್ಯತಂತ್ರ ಇದ್ದದ್ದು ಎಂದು ಕಾಣುತ್ತದೆ.

ಬಿಜೆಪಿ ಹೀಗೆ ನಡೆದುಕೊಳ್ಳುವುದು ಹೊಸದೇನಲ್ಲ. ಕಳೆದ 2023ರ ಜುಲೈನಲ್ಲಿ ನಡೆದ ವಿಧಾನಸಭಾ ಅಧಿವೇಶನದಲ್ಲೂ ಇಂತಹದೇ ಒಂದು ಸನ್ನಿವೇಶವನ್ನು ಬಿಜೆಪಿ ಸೃಷ್ಟಿಸಿತ್ತು ಎನ್ನುವುದನ್ನು ನೆನಪಿಸಿಕೊಳ್ಳಬೇಕು. ಇಂತಹ ತ್ವೇಷಮಯ ಮತ್ತು ಕಲಾಪಗಳನ್ನು ಅಸ್ತವ್ಯಸ್ತಗೊಳಿಸುವ ಪರಿಪಾಠದ ಹಿಂದೆ ಸದನದ ಒಳಗಡೆಯಲ್ಲಿ ಪ್ರಮುಖ ವಿಷಯಗಳು ಮರೆಮಾಚುವಂತೆ ಹಾಗೂ ತರಬೇಕೆಂದಿರುವ ಮಸೂದೆಗಳ ಬಗ್ಗೆ ಸೂಕ್ತ ಚರ್ಚೆಗಳೇ ನಡೆಯದಂತೆ ಅಂಗೀಕಾರಗೊಳಿಸುವ ಹುನ್ನಾರವು ಇದ್ದೇ ಇರುತ್ತದೆ. ಈಗಲೂ ಕೊನೆಯಲ್ಲಿ ಮಂಡಿಸಲ್ಪಟ್ಟ ಕೆಲವು ಮಸೂದೆಗಳ ಬಗ್ಗೆ, ಆದೇಶಗಳ ಬಗ್ಗೆ ಚರ್ಚೆ ನಡೆಯದೇ ಅಂಗೀಕಾರಗೊಂಡವು. ನೀಟ್ ಪರೀಕ್ಷೆ ಪದ್ಧತಿ, ಕ್ಷೇತ್ರ ವಿಂಗಡಣೆ, ಅರಣ್ಯ ಹಕ್ಕು ಕಾಯ್ದೆಗೆ ಸೂಚಿಸಲಾದ ತಿದ್ದುಪಡಿಗಳು, ಕೇಂದ್ರದ ಬಜೆಟ್ ನಲ್ಲಿ ರಾಜ್ಯಕ್ಕೆ ಆದ ಅನ್ಯಾಯಗಳು ಚರ್ಚೆಗೆ ಬರಲೇ ಇಲ್ಲ. ಪರಿಶಿಷ್ಟರ ಅಭಿವೃದ್ಧಿ ನಿಧಿಯ ದುರ್ಬಳಕೆಯ ಚರ್ಚೆ ಒಂದು ತಾರ್ಕಿಕ ಪರಿಹಾರವನ್ನು ಕಂಡುಕೊಳ್ಳಲಿಲ್ಲ. ತನ್ನ ಆರೋಪವೇ ಅಧಿಕೃತ ಸತ್ಯ ಎನ್ನುವಂತೆ ಸಾರ್ವಜನಿಕವಾಗಿ ಬಿಂಬಿಸಲು ಮೈಸೂರಿಗೆ ಪಾದಯಾತ್ರೆಯನ್ನು ಬಿಜೆಪಿ ಹಮ್ಮಿಕೊಂಡಿದೆ. ಕೇಂದ್ರದ ಮತ್ತು ತನ್ನ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಆಕ್ರಮಣಕಾರಿಯಾಗಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟ ವರ್ತಿಸುತ್ತಿದೆ.

ಹೀಗಿರುವಾಗಲೂ ಕಾಂಗ್ರೆಸ್ ಭ್ರಷ್ಟಾಚಾರ ಮತ್ತು ಹಗರಣಗಳಿಂದ ಮುಕ್ತವಾದ ಪಕ್ಷ ಎಂದೇನೂ ಅಲ್ಲ. ಆದರೆ ಆರೋಪಗಳು ಬಂದಾಗ ಪಾರದರ್ಶಕವಾದ, ಪ್ರಾಮಾಣಿಕ, ವಸ್ತುನಿಷ್ಠ ತನಿಖೆ ನಡೆದು ಸತ್ಯ ಸಂಗತಿಗಳು ಹೊರಬರಬೇಕು. ಆ ಕಾರಣದಿಂದಲೇ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣವಾಗಲಿ, ಮೂಡಾದ ಹಗರಣವೇ ಆಗಿರಲಿ ಸಾರ್ವಜನಿಕರೆದುರು ವಿಶ್ವಾಸಾರ್ಹವಾದ ತನಿಖೆಗಳು ನಡೆಯಬೇಕು. ವಾಲ್ಮೀಕಿ ನಿಗಮದ ಹಗರಣವನ್ನು ರಾಜ್ಯದ ಎಸ್‌ಐಟಿ ಮತ್ತು ಸಿಬಿಐ ಗಳು ತನಿಖೆ ನಡೆಸುತ್ತಿರುವಾಗಲೂ ವಿಶ್ವಾಸಾರ್ಹತೆಯ ದೃಷ್ಟಿಯಿಂದ ನ್ಯಾಯಾಂಗದ ಸೂಪರ್ದಿನದಲ್ಲಿ ಅವುಗಳು ನಡೆಯಬೇಕು ಎನ್ನುವ ಪ್ರಶ್ನೆ ಮಹತ್ವವನ್ನು ಪಡೆದುಕೊಳ್ಳುತ್ತದೆ.

ಆಡಳಿತ ಪಕ್ಷವನ್ನು ಅಲ್ಲಿ ಕಂಡುಬರುವ ಲೋಪ ದೋಷಗಳನ್ನು ಎತ್ತಿ ತೋರಿಸುವಲ್ಲಿ ವಿರೋಧ ಪಕ್ಷಗಳಿಗೆ ಮಹತ್ವದ ಪಾತ್ರವಿದೆ. ಆದರೆ ವಿಷಯ ವಿವಾದಗಳ, ಹಗರಣಗಳ ಸತ್ಯಾಸತ್ಯತೆಯನ್ನು ಹೊರ ತರುವುದಕ್ಕಿಂತ ಹೆಚ್ಚಾಗಿ ಸಂಕುಚಿತ ರಾಜಕೀಯ ಮೈಲುಗಲ್ಲು ಸಾಧನೆಗೆ ಒತ್ತು ನೀಡುವ ಬಿಜೆಪಿ ಜೆಡಿಎಸ್ ನ ಮೈತ್ರಿಕೂಟದ ಪ್ರಯತ್ನಗಳು ರಾಜ್ಯದ ಜನತೆಗೆ ಅನ್ಯಾಯವನ್ನೇ ಬಗೆಯುತ್ತವೆ.

ಗ್ರಾಮೀಣ ನಿರುದ್ಯೋಗ ನಿವಾರಣೆಗೆ ಸಾಲದು ಆದ್ಯತೆ

ನಿತ್ಯಾನಂದಸ್ವಾಮಿ

ಕೊನೆಗೂ ನಿರುದ್ಯೋಗವು ನಮ್ಮ ದೇಶದ ಬಹುದೊಡ್ಡ ಸಮಸ್ಯೆಯಾಗಿದೆ ಎಂದು ಮೋದಿ ಸರ್ಕಾರ ಒಪ್ಪಿಕೊಂಡಂತೆ ಕಾಣುತ್ತದೆ. 2024 –25ರ ಬಜೆಟ್ ನಲ್ಲಿ ಇದು ವ್ಯಕ್ತವಾಗಿದೆ. ಆದರೆ ಆಘಾತಕಾರಿಯಾಗಿ ಬೆಳೆಯುತ್ತಿರುವ ಈ ಸಮಸ್ಯೆಗೆ ಸರ್ಕಾರದ ಪ್ರತಿಕ್ರಿಯೆ ಏನೇನು ಸಾಲದು. ನಿರುದ್ಯೋಗದಂತಹ ಘೋರ ಪರಿಸ್ಥಿತಿಗೆ ಸರ್ಕಾರ ವ್ಯಕ್ತಪಡಿಸಿದ ಪರಿಹಾರ ಸಂಪೂರ್ಣವಾದುದಲ್ಲ. ಪ್ರಧಾನಿ ಮೋದಿಯವರು ಹೇಳಿಕೊಳ್ಳುವಂತೆ, ಇದು ದೇಶದ ಪ್ರಗತಿಗಾಗಿ ಮಂಡಿಸಲಾದ ಬಜೆಟ್ ಅಲ್ಲ. ಮೋದಿ ಸರ್ಕಾರ ಅಧಿಕಾರವನ್ನು ಉಳಿಸಿಕೊಳ್ಳಲು ಮಂಡಿಸಿದ ಬಜೆಟ್ ಅಷ್ಟೇ.

2014ರ ಪೂರ್ವದಿಂದಲೇ ಮೋದಿಯವರು ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ಸೃಷ್ಟಿಸುತ್ತೇವೆ ಎಂದು ಹೇಳುತ್ತಾ ಬಂದಿದ್ದರು. ಯುವ ಮತದಾರರನ್ನು ಆಕರ್ಷಿಸುವುದೇ ಅವರ ಉದ್ದೇಶವಾಗಿತ್ತು. ಆದರೆ ಅಧಿಕಾರಕ್ಕೆ ಬಂದ ಬಳಿಕ ಮೋದಿಯವರು ಯುವ ಮತದಾರರನ್ನು ಮರೆತೇ ಬಿಟ್ಟರು. ಪರಿಣಾಮವಾಗಿ ಬಿಜೆಪಿ ನೇತೃತ್ವದ ಸರಕಾರದ ಅವಧಿಯಲ್ಲಿ ಅತಿ ಹೆಚ್ಚು ನಿರುದ್ಯೋಗದ ಸ್ಥಿತಿ ಉಂಟಾಯಿತು ಎಂಬ ಕಠೋರ ಸತ್ಯವನ್ನು ಸರ್ಕಾರದ ಅಂಕಿ ಅಂಶಗಳೇ ಬಹಿರಂಗಗೊಳಿಸಿದವು.

ಲೋಕಸಭಾ ಚುನಾವಣಾ ಪ್ರಚಾರದಲ್ಲಿ ನಿರುದ್ಯೋಗದ ಪ್ರಶ್ನೆ ಚರ್ಚೆಯ ಒಂದು ಪ್ರಮುಖ ವಿಷಯವಾಗಿತ್ತು. ಆದರೆ ಯುವ ಮತದಾರರನ್ನು ನಿರೀಕ್ಷಿತ ಪ್ರಮಾಣದಲ್ಲಿ ಆಕರ್ಷಿಸಲು ಬಿಜೆಪಿಗೆ ಸಾಧ್ಯವಾಗಲಿಲ್ಲ. ಇದರ ಪರಿಣಾಮವಾಗಿ ಚುನಾವಣೆಯಲ್ಲಿ ಬಿಜೆಪಿಗೆ ಹಿನ್ನಡೆಯಾಯಿತು. ತೀವ್ರ ಮುಖಭಂಗಕ್ಕೆ ಒಳಗಾದ ಬಿಜೆಪಿ, ಕೆಲವು ಉಪಕ್ರಮಗಳನ್ನು ಕೈಗೊಳ್ಳಲು ಮುಂದಾಗಿರುವುದು ಬಜೆಟ್ ನಲ್ಲಿ ಕಂಡುಬರುತ್ತದೆ. ಯುವಜನರ ಶಿಕ್ಷಣ ಹಾಗೂ ಕೌಶಲ್ಯ ಅಭಿವೃದ್ಧಿಗೆ ಆದ್ಯತೆ ನೀಡುವುದಾಗಿ ಪ್ರಕಟಿಸಲಾಗಿದೆ. ಅವರಿಗೆ ತಾತ್ಕಾಲಿಕವಾಗಿ ಶಿಷ್ಯವೇತನ ನೀಡುವ ಭರವಸೆಯನ್ನು ನೀಡಲಾಗಿದೆ. ಆದರೆ, ಇಲ್ಲ ಕಾರ್ಪೋರೇಟ್ ಕಂಪನಿಗಳ ಹಿತ ಕಾಪಾಡುವ ಉದ್ದೇಶ ಹೊಂದಿರುವುದನ್ನು ವ್ಯವಸ್ಥಿತವಾಗಿ ಮರೆಮಾಚಲಾಗಿದೆ.

ಗ್ರಾಮೀಣ ನಿರುದ್ಯೋಗವನ್ನು ಬಜೆಟ್ ನಲ್ಲಿ ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಕೃಷಿ ಕೂಲಿಕಾರರಿಗೆ ವರ್ಷವಿಡಿ ಕೆಲಸ ಒದಗಿಸುವ ಕ್ರಮಗಳಿಗೆ ಆದ್ಯತೆ ನೀಡಲಾಗಿಲ್ಲ. ಗ್ರಾಮೀಣ ನಿರುದ್ಯೋಗ ಬೆಳೆಯುತ್ತಿರುವುದರಿಂದ ಕೃಷಿ ಕೂಲಿಕಾರರು ಮತ್ತು ಇತರ ಗ್ರಾಮೀಣ ಕೆಲಸಗಾರರು ಉದ್ಯೋಗ ಅರಸಿಕೊಂಡು ನಗರ ಪ್ರದೇಶಗಳಿಗೆ ವಲಸೆ ಹೋಗುವುದು ತೀವ್ರಗೊಳ್ಳುತ್ತಿದೆ. ಈ ಪರಿಸ್ಥಿತಿಯಿಂದಾಗಿ ನಗರ ಪ್ರದೇಶಗಳಲ್ಲಿಯೂ ಅಸಂಘಟಿತ ಹಾಗೂ ಅಕುಶಲ ಶ್ರಮಿಕರ ಜನವಸತಿ ಅನಾರೋಗ್ಯಕರವಾಗಿ ಹೆಚ್ಚುತ್ತಿದೆ.

ಈ ಸಲದ ಬಜೆಟ್ ನಲ್ಲಿಯೂ ಹಿಂದಿನಂತೆ ಕೃಷಿ ಕೂಲಿಕಾರರ ಹಾಗೂ ಗ್ರಾಮೀಣ ಕೆಲಸಗಾರರ ಪ್ರಸ್ತಾಪವಿಲ್ಲ. ಕಳೆದ ಕೆಲವು ವರ್ಷಗಳಿಂದ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಕೇಂದ್ರ ಸರ್ಕಾರ ಅನುದಾನವನ್ನು ನಿರಂತರವಾಗಿ ಕಡಿತ ಮಾಡುತ್ತಾ ಬರುತ್ತಿತ್ತು. ಈ ಬಾರಿ ಎಂ ಎನ್ ಆರ್ ಇ ಜಿಎ ಕಾರ್ಯಕ್ರಮಕ್ಕೆ 86 ಸಾವಿರ ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದೆ. ಯಾವುದೇ ಹೆಚ್ಚಳವಿಲ್ಲ. ಎರಡು ವರ್ಷಗಳ ಹಿಂದೆ ಈ ಮೊತ್ತ 90,000 ಕೋಟಿ ರೂ.ಗಳಷ್ಟಿತ್ತು. ಕೇಂದ್ರ ಬಜೆಟ್ ಗಾತ್ರ ಶೇಕಡ 10 ರಷ್ಟು ಹೆಚ್ಚಾಗಿದ್ದು, 44 ಲಕ್ಷ ಕೋಟಿ ರೂ.ಗಳಿಂದ 48 ಲಕ್ಷ ಕೋಟಿ ರೂಗಳಿಗೆ ಏರಿಕೆಯಾಗಿದೆ. ಬಜೆಟ್ ನ ಒಟ್ಟು ಗಾತ್ರ ಶೇಕಡ 10 ಹೆಚ್ಚಳವಾಗಿರುವಾಗ, ಎಲ್ಲ ಯೋಜನೆಗಳಿಗೂ ಅನುದಾನ ಪ್ರಮಾಣ ಹೆಚ್ಚಾಗಬೇಕಿತ್ತು. ಅಂತಹ ಹೆಚ್ಚಳ ಉದ್ಯೋಗ ಖಾತ್ರಿಯಲ್ಲಿ ಕಂಡು ಬರುತ್ತಿಲ್ಲ. ಉದ್ಯೋಗ ಖಾತ್ರಿ ಕಾರ್ಯಕ್ರಮದ ಅನುದಾನ 2 ಲಕ್ಷ ಕೋಟಿಗೆ ಹೆಚ್ಚಿಸಬಹುದು ಎಂಬುದು ಜನರ ನಿರೀಕ್ಷೆಯಾಗಿತ್ತು. ಈಗ ಸೂಚಿಸಲಾದ ಹೆಚ್ಚಳ ಅತ್ಯಲ್ಪವಾಗಿದೆ. ಹಾಗಾಗಿ ಈ ಬಜೆಟ್ ಗ್ರಾಮೀಣ ಕೆಲಸಗಾರರ ಪರವಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ.



ಗ್ರಾಮೀಣ ನಿರುದ್ಯೋಗವನ್ನು ತಡೆಯುವಲ್ಲಿ ಎಂಎನ್ ಆರ್‌ಇಜಿಎ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾ ಬಂದಿದೆ. ಗ್ರಾಮೀಣ ನಿರುದ್ಯೋಗ ಹೆಚ್ಚಾಗುತ್ತಾ ಹೋದರೆ ನಗರಗಳಲ್ಲಿಯೂ ನಿರುದ್ಯೋಗ ಹೆಚ್ಚಾಗುತ್ತದೆ. ವಲಸೆ ಮತ್ತು ಸಂಬಂಧಪಟ್ಟ ಸಮಸ್ಯೆಗಳು ಸ್ಫೋಟಕ ಪರಿಸ್ಥಿತಿ ತಲುಪುತ್ತವೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಗ್ರಾಮೀಣ ಜನತೆಯ ಗಳಿಕೆಯ ಶಕ್ತಿಯನ್ನು ಹೆಚ್ಚಿಸುತ್ತದೆ. ಅವರ ಆದಾಯ ಹಾಗೂ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುತ್ತದೆ. ದೇಶದ ಸರ್ವೋತ್ತಮ ಅಭಿವೃದ್ಧಿಯ ಬಾಗಿಲನ್ನು ತೆರೆಯುತ್ತದೆ. ಆದರೆ ಮೋದಿ ಸರ್ಕಾರ ಈ ಪ್ರಶ್ನೆಯನ್ನು ಭಿನ್ನವಾಗಿ ನೋಡುತ್ತದೆ. ಇದು ಗ್ರಾಮೀಣ ಸಂಘರ್ಷಕ್ಕೆ ಕಾರಣವಾಗುತ್ತದೆ ಎಂಬ ವಾದಕ್ಕೆ ವಾಲುತ್ತದೆ. ಇದು ಬಡವರ ವಿರೋಧಿ, ಗ್ರಾಮೀಣ ಶ್ರಮಿಕರ ವಿರೋಧಿಯಾಗಿದೆ, ಶ್ರೀಮಂತರ ಪರವಾಗಿದೆ.

ನಿರುದ್ಯೋಗ ಕೇವಲ ನಗರದ ವಿದ್ಯಾವಂತ ನಿರುದ್ಯೋಗಿಗಳನ್ನು ಕಾಡುತ್ತದೆ ಮಾತ್ರವಲ್ಲ, ನಗರ ಪ್ರದೇಶಗಳನ್ನೂ ಕಾಡುತ್ತದೆ. ಹಳ್ಳಿಗಾಡು ಪ್ರದೇಶಗಳ ಅಸಂಘಟಿತ ಅವಿದ್ಯಾವಂತ ಯುವಕರನ್ನು, ಮಹಿಳೆಯರನ್ನು ಅದು ಆಕರ್ಷಿಸುತ್ತದೆ. ಬಿಜೆಪಿ ಸರ್ಕಾರ ಇದನ್ನು ಮನಗಾಣುತ್ತಿಲ್ಲ. ಕೇವಲ ಗ್ರಾಮೀಣ ಶ್ರೀಮಂತರ ಹಿತ ಕಾಪಾಡುವತ್ತ ಮಾತ್ರ ಅದರ ಗಮನ. ಉದ್ಯೋಗ ಖಾತ್ರಿ ಯೋಜನೆಗೆ ಪ್ರತಿವರ್ಷ ಅನುದಾನವನ್ನು ಹೆಚ್ಚಿಸುವ ಬದಲು ಕಡಿತ ಮಾಡುತ್ತಾ ಹೊರಟಿದೆ. ಮೋದಿ ಸರ್ಕಾರಕ್ಕೆ ಮೊದಲಿನಿಂದಲೂ ಈ ಯೋಜನೆಯನ್ನು ಪ್ರೋತ್ಸಾಹಿಸುವ ಆಸಕ್ತಿ ಇಲ್ಲ. ಕಾರ್ಯಕ್ರಮವನ್ನು ಎಲ್ಲ ಗ್ರಾಮಗಳಿಗೂ ವಿಸ್ತರಿಸಲು ಮತ್ತು ಅದಕ್ಕಾಗಿ ವರ್ಷ ವರ್ಷ ಅನುದಾನವನ್ನು ಹೆಚ್ಚಿಸಲು ಅದು ಮುಂದಾಗುತ್ತಿಲ್ಲ. ಕಾನೂನು ಕ್ರಮಗಳ ಜಾರಿಯ ಹೆಸರಿನಲ್ಲಿ ಕೆಲಸಗಾರರಿಗೆ ಕಿರುಕುಳ ನೀಡುತ್ತಿರುತ್ತದೆ. ಅವರ ದುಡಿಮೆಯ ವೇತನವನ್ನು ಕಾಲಕಾಲಕ್ಕೆ ಸಂದಾಯ ಮಾಡದೆ ಕೆಲಸಗಾರರಲ್ಲಿ ಕೆಲಸದ ಆಸಕ್ತಿ ಕುಗ್ಗಿಸುತ್ತದೆ. ಅವರಾಗಿಯೇ ಕೆಲಸವನ್ನು ಬಿಟ್ಟುಬಿಡುವಂತೆ ಅಪ್ರತ್ಯಕ್ಷ ಒತ್ತಡ ಹೇರುತ್ತದೆ. ಹೀಗೆ ಸರ್ಕಾರವೇ ನಿರುದ್ಯೋಗವನ್ನು ಪ್ರೋತ್ಸಾಹಿಸುತ್ತದೆ. ಸರ್ಕಾರದ ಈ ಮೋಸದ ನೀತಿಯನ್ನು ಸಂಘಟಿತವಾಗಿ ಹೋರಾಡಿ ಹಿಮ್ಮೆಟ್ಟಿಸಬೇಕು. ಉದ್ಯೋಗ ಖಾತ್ರಿ ಯೋಜನೆಯನ್ನು ಉಳಿಸಿಕೊಳ್ಳಬೇಕು. ಈ ಮೋಸದ ಕೇಂದ್ರ ಬಜೆಟ್ ವಿರುದ್ಧ ಹೋರಾಡಬೇಕಾಗಿದೆ. ಉದ್ಯೋಗ ಖಾತ್ರಿ ಯೋಜನೆಯನ್ನು ಎಲ್ಲ ಗ್ರಾಮಗಳಿಗೆ ವಿಸ್ತರಿಸಬೇಕು. ನಗರ ಪ್ರದೇಶಗಳಿಗೂ ಅನ್ವಯವಾಗುವ ಯೋಜನೆ ಒಂದನ್ನು ರೂಪಿಸಿ ಜಾರಿ ಮಾಡಬೇಕು. ಬಾಕಿ ಇರುವ ವೇತನವನ್ನು ಕೂಡಲೇ ಸಂದಾಯ ಮಾಡಬೇಕು. ವರ್ಷದಲ್ಲಿ ನೂರು ದಿನಗಳ ಬದಲಾಗಿ 150 ದಿನಗಳ ಕೆಲಸ ಕೊಡಬೇಕು. ದಿನಕ್ಕೆ 600 ರೂ. ವೇತನ ನೀಡಬೇಕು. ಸ್ವಂತ ಮನೆ ಇಲ್ಲದ ಗ್ರಾಮೀಣ ಕೆಲಸಗಾರರಿಗೆ ವಾಸಕ್ಕೆ ಯೋಗ್ಯವಾದ ಮನೆಗಳನ್ನು ನಿರ್ಮಿಸಿ ಕೊಡಬೇಕು. ಪಿಡಿಓಗಳ ಅಡಿಯಲ್ಲಿ ಕೆಲಸ ಮಾಡುವ ಬಿಎಸ್‌ಟಿ ಗಳಿಗೆ ಕಾಲಕಾಲಕ್ಕೆ ವೇತನ ಪಾವತಿ ಮತ್ತು ಇತರ ಕಾರ್ಮಿಕ ಹಕ್ಕುಗಳನ್ನು ನೀಡಬೇಕು. ಪ್ರಸಕ್ತ ಸಾಲಿನಲ್ಲಿ ಉದ್ಯೋಗ ಖಾತ್ರಿ ಕಾರ್ಯಕ್ರಮದಲ್ಲಿ 1 ಲಕ್ಷ ಕೋಟಿ ರೂ.ಗಳನ್ನು ಒದಗಿಸಬೇಕು.

ಚಿರಸ್ಮರಣೆ ಮತ್ತು ಮೃತ್ಯುಂಜಯದ ರಂಗರೂಪ

ಡಾ.ಶ್ರೀಪಾದ ಭಟ್

ಸಹಸ್ರಮಾನದ, ಶತಮಾನದ ಎರಡು ಕತೆಗಳು ಇಲ್ಲಿ ಒಂದನ್ನೊಂದು ಸೇರಿಕೊಳ್ಳುತ್ತ ಈ ಹೊತ್ತಿನ ರೈತ ತಲ್ಲಣಗಳನ್ನೂ, ಧರ್ಮ ಮತ್ತು ರಾಜಕೀಯದ ಅನೈತಿಕ ಸಂಬಂಧಗಳನ್ನೂ ವ್ಯಾಖ್ಯಾನಿಸುತ್ತಿದೆ.

ಪ್ರಗತಿಶೀಲತೆಯನ್ನು ತಮ್ಮ ಬದುಕು ಮತ್ತು ಬರಹದ ಧ್ಯೇಯವಾಗಿಸಿಕೊಂಡು ನಿರಂತರವಾಗಿ ರೈತರ, ಕಾರ್ಮಿಕರ, ಮಹಿಳೆಯರ ಕುರಿತು ಬರೆಯುತ್ತ ಹೋದವರು ನಿರಂಜನರು. ಅವರ ಎರಡು ಮಹತ್ವದ ಕಾದಂಬರಿಗಳಾದ ಚಿರಸ್ಮರಣೆ ಮತ್ತು ಮೃತ್ಯುಂಜಯದ ರಂಗರೂಪ ಈ ನಾಟಕ. ರೈತಬವಣೆಯ ಸಂಕಟಗಳನ್ನೂ ಆ ಬದುಕಿನ ಘನತೆಯನ್ನೂ ಒಟ್ಟಾಗಿಯೇ ಪರಿಭಾವಿಸುವ ನಿರಂಜನರ ಈ ಕಥನ ವರ್ತಮಾನದ ಹಲವು ತಲ್ಲಣಗಳಿಗೆ ಒಂದು ಕಾಣ್ಕೆಯನ್ನೂ ಒದಗಿಸಬಲ್ಲದು. ಸಹಸ್ರಮಾನದ, ಶತಮಾನದ ಎರಡು ಕತೆಗಳು ಇಲ್ಲಿ ಒಂದನ್ನೊಂದು ಸೇರಿಕೊಳ್ಳುತ್ತ ಈ ಹೊತ್ತಿನ ರೈತ ತಲ್ಲಣಗಳನ್ನೂ, ಧರ್ಮ ಮತ್ತು ರಾಜಕೀಯದ ಅನೈತಿಕ ಸಂಬಂಧಗಳನ್ನೂ ವ್ಯಾಖ್ಯಾನಿಸುತ್ತಿದೆ ಅನ್ನುವದೇ ಈ ಕಥನದ ಸಮಕಾಲೀನತೆಯನ್ನು ಸಾರುತ್ತಿದೆ.

ಪ್ರಾಚೀನ ಈಜಿಪ್ಟಿನಲ್ಲಿ ನಿರಂಕುಶ ಸತ್ತೆ ಹಾಗೂ ಸಂಪತ್ತಿಗಾಗಿ ಅರಮನೆ ಗುರುಮನೆಗಳ ನಡುವೆ ನಡೆಯುವ ಚೌಕಮಣೆ ಆಟದಲ್ಲಿ ಬಲಿಯಾಗುತ್ತಿರುವ ಜನಸಾಮಾನ್ಯರ ಬದುಕನ್ನು ಪುನರ್ ಸಂಘಟಿಸುತ್ತ, ಸಮಾನತೆಯ ಸಮಾಜವೊಂದರ ಸ್ಥಾಪನೆಗೆ ಪ್ರಯತ್ನಿಸಿ ಬಲಿಯಾದವನು ಮೃತ್ಯುಂಜಯ ಕಾದಂಬರಿಯ ಮನೆಪ್ಟಾ. ಆತ ಅಳಿಯುತ್ತಾನಾದರೂ ಆತ ಸಂಘಟಿಸಿದ ಹೋರಾಟವು ಸೂರ್ಯದೇವನ ಮಗ ಒಸೈರಿಸ್‌ನಂತೆ ಮೃತ್ಯುಂಜಯ.

ಚಿರಸ್ಮರಣೆ ಕಾದಂಬರಿಯು ಇಪ್ಪತ್ತನೇ ಶತಮಾನದ ಆದಿಯಲ್ಲಿ ಕೇರಳದ ಕಯ್ಯೂರಿನಲ್ಲಿ ನಡೆದ ರೈತಚಳುವಳಿಗೆ ಸಂಬಂಧಿಸಿದ್ದು. ಸಮಾನತೆಯ ಕನಸು ಹೊತ್ತ ರೈತಸಂಘಟನೆಯೊಂದು ಬ್ರಿಟೀಷರು ಹಾಗೂ ಜಮೀನ್ದಾರರ ಚೌಕಮಣೆ ಆಟದಲ್ಲಿ ಬಲಿಯಾಗುತ್ತದಾದರೂ, ಅದು ಸಂಘಟಿಸಿದ ಹೋರಾಟ ಹೇಗೆ ಚಿರಸ್ಮರಣೆಯಾಗಿ ಉಳಿಯಿತು ಎಂಬುದನ್ನು ಕಾಣಿಸುತ್ತದೆ.

ಹೀಗೆ, ವರ್ಗಸಂಘರ್ಷ ಹಾಗೂ ತತ್ಪರಿಣಾಮವಾಗಿ ರೂಪುಗೊಳ್ಳುವ ಸಮಾನತೆಯ ಸಮಾಜವೊಂದರ ಕನಸುಕಂಡ ನಿರಂಜನರು ನಂಬಿದ್ದರು ಕತ್ತಲಾದ ಮೇಲೆ ಬೆಳಕು ಹರಿತದೆ. ಇದು ಸಾಮಾನ್ಯ ಅಂತ ತೋರುವ ಅಸಾಮಾನ್ಯ ವಿಷಯ ಅಂತ.

ಹೀಗೆ ಅಕ್ಷರದ ಬೆಳಕಿನಲ್ಲಿ ಮನುಷ್ಯನ ಅದಮ್ಯವಾದ ಹಂಬಲವನ್ನು ಘನವಾದ ಹೋರಾಟವಾಗಿಸಿ ಅರಮನೆ ಗುರುಮನೆಗಳ, ಅಧಿಕಾರ ಸಂಪತ್ತುಗಳ ಅಪವಿತ್ರಮೈತ್ರಿಗೆ ಸವಾಲೆಸೆಯುವ ಕತೆಗಳನ್ನು ಸೃಜಿಸಿಕೊಟ್ಟ ನಿರಂಜನರ ವಿಭಿನ್ನ ಕಾಲದೇಶಗಳ ಬರಹವನ್ನು ಒಂದುಗೂಡಿಸಿ ಡಾ. ಎಂ.ಜಿ.ಹೆಗಡೆ ಇಲ್ಲಿ ಅವು ಪುನರಭಿನಯಕ್ಕೆ ಪಕ್ಕಾಗುವಂತೆ



ರಚಿಸಿದ್ದಾರೆ. ಇದು ಹೊಸಕಾಲದ ಹೊಸ ತೋರ್ಕೆಯೂ ಹೌದು.

ಪ್ರತಿಗಾಮಿ ಸಂಕುಚನಕಾರಿ ಬಜೆಟ್–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಜುಲೈ 23ರಂದು ಮಂಡಿಸಿದ ಒಕ್ಕೂಟ ಬಜೆಟ್, ಒಂದು ಪ್ರತಿಗಾಮಿ ಸಂಕುಚನಕಾರಿ ಬಜೆಟ್ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ.

ಒಟ್ಟಿನಲ್ಲಿ ಈ ಬಜೆಟ್ ಶ್ರೀಮಂತರನ್ನು ಮತ್ತಷ್ಟು ಶ್ರೀಮಂತಗೊಳಿಸಿ ಬಡವರನ್ನು ಬಡವರನ್ನಾಗಿಸುವ ಗುರಿಯನ್ನು ಹೊಂದಿದೆ. ಭಾರತದ ಅತಿ ಶ್ರೀಮಂತರ ಮೇಲೆ ಸಂಪತ್ತು ಅಥವಾ ಪಿತ್ರಾರ್ಜಿತ ತೆರಿಗೆಯ ಯಾವುದೇ ಪ್ರಸ್ತಾಪವನ್ನು ಪರಿಗಣಿಸಲು ನಿರಾಕರಿಸಿದೆ ಮತ್ತು ಜನರ ಮೇಲಿನ ಪರೋಕ್ಷ ತೆರಿಗೆ ಹೊರೆಗೆ ಯಾವುದೇ ಪರಿಹಾರವನ್ನು ನೀಡಿಲ್ಲ.

ಜನರ ಮತ್ತು ಅರ್ಥವ್ಯವಸ್ಥೆಯ ತುರ್ತು ಸಮಸ್ಯೆಗಳನ್ನು ಪರಿಹರಿಸಲು ಬಜೆಟ್ ವಿಫಲವಾಗಿರುವುದರ ವಿರುದ್ಧ ಪ್ರತಿಭಟಿಸಬೇಕೆಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ವಿಪರೀತ ನಿರುದ್ಯೋಗ, ಹೆಚ್ಚಿನ ಆಹಾರ ಹಣದುಬ್ಬರ ದರ, ಅಸಮಾನತೆಗಳ ಅಭೂತಪೂರ್ವ ವಿಸ್ತರಣೆ ಮತ್ತು ಖಾಸಗಿ ಹೂಡಿಕೆಯ ನಿಧಾನಗತಿಯ ಆರ್ಥಿಕ ವಾಸ್ತವಗಳ ಸಂದರ್ಭದಲ್ಲಿ, ಬಜೆಟ್ ಆರ್ಥಿಕ ಚಟುವಟಿಕೆಗಳನ್ನು ವಿಸ್ತರಿಸುವತ್ತ ಗಮನ ಹರಿಸಬೇಕಿತ್ತು. ಬದಲಾಗಿ, ಅದರ ಪ್ರಸ್ತಾಪಗಳು ಜನರ ಮೇಲೆ ಮತ್ತಷ್ಟು ಸಂಕಷ್ಟಗಳನ್ನು ಹೇರುತ್ತವೆ ಮತ್ತು ಹೂಡಿಕೆ ಮತ್ತು ಉದ್ಯೋಗ ಸೃಷ್ಟಿಯ ಮಟ್ಟವನ್ನು ಕುಗ್ಗಿಸುತ್ತವೆ ಎಂದು ಅದು ಟೀಕಿಸಿದೆ.

ಬಜೆಟ್ ಅಂಕಿಅಂಶಗಳ ಪ್ರಕಾರ ಸರ್ಕಾರದ ಆದಾಯ ಗಳಿಕೆಗಳು 14.5 ಶೇ.ದಷ್ಟು ಹೆಚ್ಚಾಗಿವೆ, ಆದರೆ ವೆಚ್ಚಗಳು 5.94 ಶೇ.ದಷ್ಟು ಮಾತ್ರ ಬೆಳೆದಿವೆ. ಆರ್ಥಿಕ ಚಟುವಟಿಕೆಗಳನ್ನು ವಿಸ್ತರಿಸಲು ಈ ಆದಾಯಗಳನ್ನು ಬಳಸುವ ಬದಲು, ವಿತ್ತೀಯ ಕೊರತೆಯನ್ನು ಜಿಡಿಪಿಯ 5.4ಶೇ.ದಿಂದ 4.9%ಕ್ಕೆ ಇಳಿಸಲು, ಆಮೂಲಕ ಅಂತರರಾಷ್ಟ್ರೀಯ ಹಣಕಾಸು ಬಂಡವಾಳವನ್ನು ತೃಪ್ತಗೊಳಿಸಲು ಬಳಸಲಾಗಿದೆ ಎಂದು ಸಿಪಿಐ(ಎಂ) ಹೇಳಿದೆ.

ಮಾಹಿತಿ-ಶಕ್ಯತನದ ಮತ್ತೊಂದು ಕಸರತ್ತು

ಬಜೆಟ್‌ನಲ್ಲಿ ತೋರಿಸಿರುವ ಜಿಡಿಪಿ ಲೆಕ್ಕಾಚಾರಗಳು ಮಾಹಿತಿ-ಶಕ್ಯತನದ ಮತ್ತೊಂದು ಕಸರತ್ತು ಎಂದು ಪೊಲಿಟ್ ಬ್ಯುರೊ ಖಂಡಿಸಿದೆ. ಹಣದುಬ್ಬರವನ್ನು ಗಣನೆಗೆ ತಗೊಳ್ಳದ ಜಿಡಿಪಿ ಬೆಳವಣಿಗೆ ಶೇ 10.5 ಎಂದು ಅಂದಾಜಿಸಲಾಗಿದೆ. ನಿಜ ಜಿಡಿಪಿ ಬೆಳವಣಿಗೆ 6.5 ರಿಂದ 7 ಶೇ.ದಷ್ಟು ಇರುತ್ತದೆ ಎಂದು ಅಂದಾಜು ಮಾಡಿರುವುದು, 'ಮೂಲ' ಹಣದುಬ್ಬರ 3 ಶೇ. ಇರುತ್ತದೆ ಎಂಬ ಆಧಾರದಲ್ಲಿ. ಇದು 9.4ಶೇ.ದಷ್ಟು ದೊಡ್ಡ ಪ್ರಮಾಣದ ಆಹಾರ ಹಣದುಬ್ಬರವನ್ನು ಗಣನೆಗೆ ತಗೊಂಡಿಲ್ಲ, ಈ ಮೂಲಕ ನೈಜ ಜಿಡಿಪಿ ಬೆಳವಣಿಗೆಯನ್ನು ಬಹಳಷ್ಟು ಉತ್ಪ್ರೇಕ್ಷಿಸಿ ಹೇಳಲಾಗಿದೆ.

ಸರ್ಕಾರದ ವೆಚ್ಚವನ್ನು ಮತ್ತಷ್ಟು ಹಿಂಡಿ, ಸಬ್ಸಿಡಿಗಳನ್ನು ಗಣನೀಯವಾಗಿ ಕಡಿತಗೊಳಿಸಲಾಗಿದೆ. ರಸಗೊಬ್ಬರ ಸಬ್ಸಿಡಿಯನ್ನು ರೂ.24894 ಕೋಟಿಗಳಷ್ಟು ಮತ್ತು ಆಹಾರ ಸಬ್ಸಿಡಿ ರೂ.7,082 ಕೋಟಿಯಷ್ಟು ಕಡಿತ ಮಾಡಲಾಗಿದೆ. ಜಿಡಿಪಿಯ ಶೇಕಡಾವಾರು ಪ್ರಮಾಣದಲ್ಲಿ ಶಿಕ್ಷಣ, ಆರೋಗ್ಯ ಮತ್ತು ಗ್ರಾಮೀಣಾಭಿವೃದ್ಧಿಯ ಮೇಲಿನ ವೆಚ್ಚಗಳು ಹೆಚ್ಚು ಕಡಿಮೆ ಹಾಗೆಯೇ ಉಳಿಯುತ್ತವೆ. ಮನರೇಗ ಮತ್ತಷ್ಟು ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದೆ. ಬಜೆಟ್ ಹಂಚಿಕೆ ರೂ.86,000 ಕೋಟಿಗಳಾಗಿದ್ದು, ಇದು ಹಣಕಾಸು ವರ್ಷ 23 ರಲ್ಲಿ ಖರ್ಚು ಮಾಡಿದ್ದಕ್ಕಿಂತ ಕಡಿಮೆಯಾಗಿದೆ. ಇದರಲ್ಲಿ, ಈ ಆರ್ಥಿಕ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ರೂ.41,500 ಕೋಟಿಗಳನ್ನು ಈಗಾಗಲೇ ಖರ್ಚು ಮಾಡಲಾಗಿದೆ, ಅಂದರೆ ಉಳಿದ ಎಂಟು ತಿಂಗಳಿಗೆ ಕೇವಲ ರೂ.44,500 ಕೋಟಿಗಳು ಉಳಿಯುತ್ತವೆ. ಗ್ರಾಮೀಣ ಭಾರತದಲ್ಲಿ ಆಳವಾಗಿರುವ ನಿರುದ್ಯೋಗ ಬಿಕ್ಕಟ್ಟನ್ನು ನಿಭಾಯಿಸಲು ಇದು ಏನೇನೂ ಸಾಲದು ಎಂಬುದು ಸ್ಪಷ್ಟ.

ಇ.ಎಲ್.ಐ. ಗಿಮಿಕ್

ನಿರುದ್ಯೋಗ ನಿವಾರಣೆಯ ಹೆಸರಿನಲ್ಲಿ ಬಜೆಟ್ ಗಿಮಿಕ್ ನಡೆಸಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಗೇಲಿ ಮಾಡಿದೆ. ಎಂಪ್ಲಾಯ್‌ಮೆಂಟ್ ಲಿಂಕ್ಡ್ ಇನ್ಸೆಂಟಿವ್, ಅಂದರೆ ಉದ್ಯೋಗಕ್ಕೆ ಕೊಂಡಿ ಹಾಕಿರುವ ಉತ್ತೇಜನೆ ಎಂಬ ಹೊಸ ಯೋಜನೆಯು ಔಪಚಾರಿಕ ವಲಯದಲ್ಲಿ ರೂ.1 ಲಕ್ಷಕ್ಕಿಂತ ಕಡಿಮೆ ಆದಾಯದ ಹೊಸ ಉದ್ಯೋಗಿಗಳಿಗೆ ಒಂದು ತಿಂಗಳ ವೇತನವನ್ನು ನೀಡುತ್ತದೆ. ಅರ್ಹ ಕೆಲಸಗಾರರು ಗರಿಷ್ಠ ರೂ. 5,000. ಮೂರು ತಿಂಗಳ ಕಂತುಗಳಲ್ಲಿ ಪಡೆಯುತ್ತಾರೆ, ಆದರೆ, ಉದ್ಯೋಗದಾತರು ರೂ.1 ಲಕ್ಷದವರೆಗೆ ಮಾಸಿಕ ವೇತನದೊಂದಿಗೆ ನೇಮಕಗೊಂಡ ಪ್ರತಿ ಹೊಸ ಉದ್ಯೋಗಿಗೆ, ಅಂದರೆ ತಲಾ ಹೆಚ್ಚುವರಿ ಉದ್ಯೋಗಕ್ಕೆ ರೂ.72,000 ದಂತೆ 24 ಮಾಸಿಕ ಕಂತುಗಳಲ್ಲಿ ಪಡೆಯುತ್ತಾರೆ. ಇದು ಹೊಸ ಉದ್ಯೋಗವನ್ನು ಸೃಷ್ಟಿಸುವ ಹೆಸರಿನಲ್ಲಿ ಕಾರ್ಪೊರೇಟ್‌ಗಳಿಗೆ ಸಬ್ಸಿಡಿ ನೀಡುವ ಮತ್ತೊಂದು ಮಾರ್ಗವಾಗಿದೆ. ಇಂತಹ ಗಿಮಿಕ್‌ಗಳಿಂದ ಉದ್ಯೋಗ ಸೃಷ್ಟಿಸಲು ಸಾಧ್ಯವಿಲ್ಲ. ಕಾರ್ಪೊರೇಟ್ ವಲಯವು ಈ ಹಿಂದೆ ಗಳಿಸಿದ ಭಾರಿ ಲಾಭಗಳ ಫಲವಾಗಿ ಯಂತ್ರೋಪಕರಣಗಳು ಮತ್ತು ಉತ್ಪಾದನೆಯಲ್ಲಿ ಹೂಡಿಕೆ ಹೆಚ್ಚಲಿಲ್ಲ, ಇದು ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯ ಕೊರತೆಯಿಂದಾಗಿ ಜನರಲ್ಲಿ ಕೊಳ್ಳುವ ಶಕ್ತಿ ಕುಗ್ಗಿರುವ ಪರಿಣಾಮವಾಗಿದೆ.

ಭಾರತದ ಯುವಕರಲ್ಲಿ ಕೌಶಲಗಳನ್ನು ಹೆಚ್ಚಿಸುವ ಯೋಜನೆಗಳನ್ನೂ ಬಜೆಟ್ ಎತ್ತಿ ತೋರಿಸುತ್ತದೆ. ಇದು ಕೂಡ ಹೆಚ್ಚಿನ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವುದಿಲ್ಲ. 2016 ಮತ್ತು 2022 ರ ಅವಧಿಯಲ್ಲಿ ಕೌಶಲ್ಯ ಉತ್ತೇಜನ ಯೋಜನೆಗಳ ಮೂಲಕ ತರಬೇತಿ ಪಡೆದ ಕೇವಲ 18 ಶೇ. ಯುವಕರು ಮಾತ್ರ ಉದ್ಯೋಗವನ್ನು ಪಡೆದರು. ಇಲ್ಲಿಯೂ, ಅರ್ಥವ್ಯವಸ್ಥೆಯು ವಿಸ್ತರಿಸದ ಹೊರತು ಉದ್ಯೋಗಾವಕಾಶಗಳು ಬೆಳೆಯಲು ಸಾಧ್ಯವಿಲ್ಲ.

'ಸಹಕಾರಿ ಒಕ್ಕೂಟ'ದ ಬಗ್ಗೆ ಬಹಳಷ್ಟು ಮಾತಾಡಿದರೂ, ರಾಜ್ಯ ಸರ್ಕಾರಗಳು, ರಾಜಕೀಯ ಒತ್ತಡಗಳಿಂದಾಗಿ ಆಂಧ್ರ ಪ್ರದೇಶ ಮತ್ತು ಬಿಹಾರವನ್ನು ಹೊರತುಪಡಿಸಿ ಒರಟು ನಡೆಯನ್ನು ಎದುರಿಸಬೇಕಾಗಿ ಬಂದಿದೆ,. ಈ ಎನ್.ಡಿ. ಮೈತ್ರಿ ಸರ್ಕಾರದ ಉಳಿವು ಮಿತ್ರಪಕ್ಷಗಳ, ವಿಶೇಷವಾಗಿ ತೆಲುಗು ದೇಶಂ ಪಕ್ಷ ಮತ್ತು ಜನತಾ ದಳ(ಯು) ಬೆಂಬಲವನ್ನು ಅವಲಂಬಿಸಿದೆ. ಆದಾಗ್ಯೂ, ರಾಜ್ಯಗಳಿಗೆ ಹಣಕಾಸು ಆಯೋಗದ ಅನುದಾನವನ್ನು (ತೆರಿಗೆ ಹಂಚಿಕೆ ಹೊರತುಪಡಿಸಿ) 2022–23ರಲ್ಲಿ ರೂ.1,72,760 ಕೋಟಿಗಳಿಂದ 2023–24ರಲ್ಲಿ ರೂ.1,40,429 ಕೋಟಿಗಳಿಗೆ ಇಳಿಸಲಾಗಿತ್ತು. ಈ ಬಜೆಟ್ ಅದನ್ನು ಮತ್ತಷ್ಟು ರೂ 132378 ಕೋಟಿಗಳಿಗೆ ಇಳಿಸಿದೆ.

ಒಟ್ಟಿನಲ್ಲಿ ಈ ಬಜೆಟ್ ಶ್ರೀಮಂತರನ್ನು ಮತ್ತಷ್ಟು ಶ್ರೀಮಂತಗೊಳಿಸಿ ಬಡವರನ್ನು ಬಡವರನ್ನಾಗಿಸುವ ಗುರಿಯನ್ನು ಹೊಂದಿದೆ. ಭಾರತದ ಅತಿ ಶ್ರೀಮಂತರ ಮೇಲೆ ಸಂಪತ್ತು ಅಥವಾ ಪಿತ್ರಾರ್ಜಿತ ತೆರಿಗೆಯ ಯಾವುದೇ ಪ್ರಸ್ತಾಪವನ್ನು ಪರಿಗಣಿಸಲು ನಿರಾಕರಿಸಉತ್ತದೆ ಮತ್ತು ಜನರ ಮೇಲಿನ ಪರೋಕ್ಷ ತೆರಿಗೆ ಹೊರೆಗೆ ಯಾವುದೇ ಪರಿಹಾರವನ್ನು ನೀಡಿಲ್ಲ.

ಜನರ ಮತ್ತು ಅರ್ಥವ್ಯವಸ್ಥೆಯ ತುರ್ತು ಸಮಸ್ಯೆಗಳನ್ನು ಪರಿಹರಿಸಲು ಬಜೆಟ್ ವಿಫಲವಾಗಿರುವುದರ ವಿರುದ್ಧ ಪ್ರತಿಭಟಿಸಬೇಕೆಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಉತ್ತರ ಪ್ರದೇಶ ಮತ್ತು ಉತ್ತರಾಖಂಡದ ಬಿಜೆಪಿ ಸರ್ಕಾರಗಳ ವಿಭಜನಾಕಾರಿ ಮತ್ತು ಅಪಾಯಕಾರಿ ಆದೇಶವನ್ನು ರದ್ದುಗೊಳಿಸಬೇಕು

ಉತ್ತರ ಪ್ರದೇಶ ಮತ್ತು ಉತ್ತರಾಖಂಡದ ಬಿಜೆಪಿ ರಾಜ್ಯ ಸರ್ಕಾರಗಳು ಕನ್ವರ್ ಯಾತ್ರಾ ಮಾರ್ಗದ ಉದ್ದಕ್ಕೂ ಎಲ್ಲಾ ತಿನಿಸು ಮಾರಾಟದ ಅಂಗಡಿಗಳಲ್ಲಿ ಮಾಲೀಕರ ಹೆಸರನ್ನು ಪ್ರದರ್ಶಿಸಲು ನಿರ್ದೇಶಿಸಿದ ನಿರ್ಧಾರವನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಇದು ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸಲು ಮತ್ತು ಧಾರ್ಮಿಕ ಸಮುದಾಯಗಳ ನಡುವೆ ಉದ್ವಿಗ್ನತೆಯನ್ನು ಬೆಳೆಸುವ ಹುನ್ನಾರವನ್ನು ಹೊಂದಿದೆ ಎಂದು ಅದು ಹೇಳಿದೆ.

ಈ ಕ್ರಮವು ಅಸಂವಿಧಾನಿಕವಾಗಿದೆ ಮತ್ತು ಎಲ್ಲಾ ನಾಗರಿಕರಿಗೆ ಸಮಾನತೆಯ ಮೂಲಭೂತ ಹಕ್ಕಿನ ಬುಡಕ್ಕೇ ಪ್ರಹಾರ ಮಾಡುತ್ತದೆ.

ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದು ತಕ್ಷಣದ ಉದ್ದೇಶವಾಗಿದ್ದು, ಬಿಜೆಪಿ ಸರ್ಕಾರಗಳ ಇಂತಹ ಕ್ರಮಗಳು ಶೀಘ್ರದಲ್ಲೇ ಜಾತಿ ಉದ್ವಿಗ್ನತೆಗಳನ್ನು ಕೂಡ ಉಲ್ಬಣಗೊಳ್ಳಲು ದಾರಿ ಮಾಡಿಕೊಡಲು ಮತ್ತು ಜಾತಿ ಆಧಾರಿತ ಸಾಮಾಜಿಕ ದಬ್ಬಾಳಿಕೆಯನ್ನು ತೀವ್ರಗೊಳಿಸಲು ಕಾರಣವಾಗಬಹುದು. ಬಿಜೆಪಿ ಈ ದಿಕ್ಕಿನಲ್ಲಿ ಸಮಾಜವನ್ನು 'ಮನುಸ್ಮೃತಿ'ಯಲ್ಲಿ ಹೇಳಿರುವಂತೆ ಮರುವ್ಯವಸ್ಥೆಗೊಳಿಸಲು ಹೊರಟಿದೆ.

ಇದು ನಮ್ಮ ಸಂವಿಧಾನದ ಆಡಿಪಾಯ ಮತ್ತು ಎಲ್ಲಾ ನಾಗರಿಕರಿಗೆ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಮತ್ತು ನ್ಯಾಯವನ್ನು ಖಾತ್ರಿಪಡಿಸಿರುವುದನ್ನು ನಿರಾಕರಿಸುವ ನಡೆ ಎಂದಿರುವ ಪೊಲಿಟ್‌ಬ್ಯುರೊ, ಇಂತಹ ವಿಭಜನಕಾರಿ ಮತ್ತು ಅಪಾಯಕಾರಿ ನಡೆಗೆ ಅವಕಾಶ ನೀಡಬಾರದು, ಈ ಆದೇಶವನ್ನು ತಕ್ಷಣವೇ ಹಿಂತೆಗೆದುಕೊಳ್ಳುವಂತೆ ಉತ್ತರಪ್ರದೇಶ ಮತ್ತು ಉತ್ತರಾಖಂಡ ಸರಕಾರಗಳ ಮೇಲೆ ಪ್ರಭಾವ ಬೀರಬೇಕು ಎಂದು ಎನ್‌ಡಿಎ ದಲ್ಲಿನ ಬಿಜೆಪಿಯ ಮಿತ್ರಪಕ್ಷಗಳನ್ನು ಆಗ್ರಹಿಸಿದೆ.

'ಎರಡು ಬಿಜೆಪಿ ರಾಜ್ಯ ಸರಕಾರಗಳಿಗೆ ಸುಪ್ರಿಂ ಕೋರ್ಟ್ ಕಪಾಳಮೋಕ್ಷ'

ಉತ್ತರಪ್ರದೇಶ ಮತ್ತು ಉತ್ತರಾಖಂಡದ ಬಿಜೆಪಿ ಸರಕಾರಗಳ ಈ ಆದೇಶಗಳ ವಿಷಯದಲ್ಲಿ ಸುಪ್ರಿಂ ಕೋರ್ಟ್ ಮಧ್ಯಪ್ರವೇಶ ನಡೆಸಿ ಅದಕ್ಕೆ ತಡೆಯಾಜ್ಞೆ ನೀಡಿರುವುದನ್ನು ಪಕ್ಷ ಸ್ವಾಗತಿಸುವುದಾಗಿ ಪೊಲಿಟ್‌ಬ್ಯುರೊ ಸದಸ್ಯೆ ಬೃಂದಾ ಕಾರಟ್ ಹೇಳಿದ್ದಾರೆ.

ನಿಜವಾಗಿಯೂ ಇದು ಚುನಾವಣೆಗಳಲ್ಲಿ ಸೋಲಿನ ನಂತರ ಮತ್ತೆ ಜನಗಳನ್ನು ಕೋಮುವಾದಿ ಮತ್ತು ಜಾತಿವಾದಿ ಆಧಾರಗಳಲ್ಲಿ ವಿಭಜಿಸಲು ಪ್ರಯತ್ನಿಸುತ್ತಿರುವ ಉತ್ತರಪ್ರದೇಶ ಮತ್ತು ಉತ್ತರಾಖಂಡ ಸರಕಾರಗಳಿಗೆ ಆಗಿರುವ ಕಪಾಳಮೋಕ್ಷ ಎಂದು ಅವರು ಹೇಳಿದ್ದಾರೆ.

ಪ್ಯಾಲೇಸ್ಟೀನಿಯನ್ನರಿಗೆ ಸೌಹಾರ್ದದ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯಬೇಕು

ಮೊಹರಂ ಮೆರವಣಿಗೆಯಲ್ಲಿ ಪ್ಯಾಲೇಸ್ಟೀನಿಯನ್ ಬಾವುಟವನ್ನು ಪ್ರದರ್ಶಿಸಿದ ಜನರ ವಿರುದ್ಧ ದಾಖಲಿಸಲಾದ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಿರುವುದನ್ನು ತಕ್ಷಣವೇ ಹಿಂಪಡೆಯಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹಿಸಿದೆ. ಜಮ್ಮು ಮತ್ತು ಕಾಶ್ಮೀರ, ಬಿಹಾರ, ಮಧ್ಯಪ್ರದೇಶ ಮತ್ತು ಜಾರ್ಖಂಡ್‌ನಲ್ಲಿ ಬಿಜೆಪಿ ಮತ್ತು ವಿಎಚ್‌ಪಿ ನಾಯಕರು ನೀಡಿದ ದೂರಿನ ಮೇರೆಗೆ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಮತ್ತು ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ದ ಕಠಿಣ ಸೆಕ್ಷನ್‌ಗಳ ಅಡಿಯಲ್ಲಿ ಈ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ವರದಿಯಾಗಿದೆ.

ಈ ಪ್ರಕರಣಗಳು ದಾಖಲಾಗಿರುವ ಹೆಚ್ಚಿನ ರಾಜ್ಯಗಳು ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ಅಥವಾ ಕೇಂದ್ರ ಸರ್ಕಾರದ ನೇರ ಆಳ್ವಿಕೆಯಲ್ಲಿವೆ. ಬಿಜೆಪಿ ನೇತೃತ್ವದ ಸರ್ಕಾರವು ಪ್ಯಾಲೆಸ್ತೀನ್ ಪ್ರಭುತ್ವವನ್ನು ಬೆಂಬಲಿಸುವುದಾಗಿ ಹೇಳಿಕೊಳ್ಳುತ್ತದೆ, ಆದರೆ ಈ ಪ್ರಕರಣಗಳನ್ನು ದಾಖಲಿಸಿರುವುದು ಅದರ ನಿಜವಾದ ಮುಖವನ್ನು ಬಯಲಿಗೆಳೆದಿದೆ. ಅದಕ್ಕೆ ಪ್ಯಾಲೆಸ್ತೀನ್‌ಗೆ ಭಾರತೀಯ ಜನರ ಬೆಂಬಲವನ್ನು ಸಹಿಸಲು ಸಾಧ್ಯವಾಗುತ್ತಿಲ್ಲ.

ಈ ಪ್ರಕರಣಗಳನ್ನು ಹಿಂಪಡೆಯಬೇಕು ಮತ್ತು ಪ್ಯಾಲೆಸ್ತೀನ್‌ಗೆ ಬೆಂಬಲ ವ್ಯಕ್ತಪಡಿಸಿದ್ದಕ್ಕಾಗಿ ನಿರ್ಬಂಧಕ್ಕೊಳಗಾಗಿರುವ ಮತ್ತು ಬಂಧಿಸಲ್ಪಟ್ಟಿರುವ ಎಲ್ಲರನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದೆ. ಕೇಂದ್ರ ಸರ್ಕಾರವು ಪ್ಯಾಲೆಸ್ತೀನ್‌ನೊಂದಿಗೆ ತನ್ನ ಸೌಹಾರ್ದವನ್ನು ನಿಸ್ಸಂದಿಗ್ಧವಾಗಿ ವ್ಯಕ್ತಪಡಿಸಬೇಕು, ಇಸ್ರೇಲ್ ಆಕ್ರಮಿಸಿಕೊಂಡಿರುವ ಎಲ್ಲಾ ಪ್ರದೇಶಗಳಿಂದ ಹಿಂದೆ ಸರಿಯುವಂತೆ ಒತ್ತಾಯಿಸಬೇಕು ಮತ್ತು 1967 ರ ಪೂರ್ವದ ಗಡಿಗಳು ಮತ್ತು ಪೂರ್ವ ಜೆರುಸಲೆಮ್ ಅನ್ನು ರಾಜಧಾನಿಯಾಗಿ ಹೊಂದಿರುವ ಪ್ಯಾಲೆಸ್ತೈನ್ ಪ್ರಭುತ್ವವನ್ನು ಪುನಃಸ್ಥಾಪಿಸಬೇಕು ಎಂದು ಆಗ್ರಹಿಸಿದೆ.

ಕೃಷಿಯ ಕಾರ್ಪೊರೇಟೀಕರಣದ ಬಜೆಟ್: ಪ್ರತಿಗಳನ್ನು ಸುಡಲು ಎಸ್‌ಕೆಎಂ ಕರೆ

2024–25ರ ಒಕ್ಕೂಟ ಬಜೆಟ್ ಮೊಂಡುತನದಿಂದ ಕೃಷಿಯ ಕಾರ್ಪೊರೇಟೀಕರಣದತ್ತವೇ ಮುಖ ಮಾಡಿದೆ. ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಒತ್ತಡದ ಅಡಿಯಲ್ಲಿ ತಯಾರಾದ ಈ ಬಜೆಟ್ ಬಹುರಾಷ್ಟ್ರೀಯ ಕಂಪನಿಗಳಿಗೆ 5% ತೆರಿಗೆ ರಿಯಾಯ್ತಿ ಒದಗಿಸಿದೆ, ಕಾರ್ಪೊರೇಟ್‌ಗಳು ಮತ್ತು ಸೂಪರ್ ಶ್ರೀಮಂತರ ಮೇಲೆ ತೆರಿಗೆ ವಿಧಿಸಲು ನಿರಾಕರಿಸಿದೆ. ಈ ಬಜೆಟನ್ನು ಸುಡಬೇಕು ಎಂದು ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ) ಕರೆ ನೀಡಿದೆ.

ರೈತರಿಗೆ ಕನಿಷ್ಠ ಬೆಂಬಲ ಬೆಲೆ ಕೊಡುತ್ತಿರುವದಾಗಿ ಬಜೆಟ್ ಹೇಳಿದೆ. ಆದರೆ ಇದು ನಿಜವಲ್ಲ, ಸರಕಾರ ಯಾವ ದರದಲ್ಲಿ ಕನಿಷ್ಠ ಬೆಂಬಲ ಬೆಲೆ ಲೆಕ್ಕ ಹಾಕುತ್ತಿದೆ ಎಂಬ ಬಗ್ಗೆ ಒಂದು ಶ್ವೇತಪತ್ರವನ್ನು ಪ್ರಕಟಿಸಬೇಕು ಎಂದು ಎಸ್‌ಕೆಎಂ ಹಣಕಾಸು ಮಂತ್ರಿಗಳನ್ನು ಆಗ್ರಹಿಸಿದೆ.

ಖಾಸಗಿಯವರ ತೆಕ್ಕೆಗೆ ಬಿಡಿಎ ಕಾಂಪ್ಲೆಕ್ ಗಳು

ವ್ಯಾಪಾರಿಗಳ ಮತ್ತು ಸ್ಥಳೀಯರ ವಿರೋಧ

ವಿಸ್ತರಣೆ ಮತ್ತು ಅಭಿವೃದ್ಧಿ ಹೆಸರಿನಲ್ಲಿ ಸರ್ಕಾರಗಳು ರಸ್ತೆಗಳನ್ನು ಖಾಸಗಿಯವರಿಗೆ ಒಪ್ಪಿಸಿರುವುದನ್ನು ಕಂಡಿದ್ದೇವೆ. ಅಭಿವೃದ್ಧಿ ಹೆಸರಿನಲ್ಲಿ ವಿಮಾನ ನಿಲ್ದಾಣಗಳನ್ನೂ, ರೈಲು ನಿಲ್ದಾಣಗಳನ್ನೂ ಖಾಸಗಿಯವರ ತೆಕ್ಕೆಗೆ ಒಪ್ಪಿಸಿರುವುದನ್ನು ಕಂಡಿದ್ದೇವೆ. ಈಗ ಮರು ನಿರ್ಮಾಣ ಮಾಡುವ ಹೆಸರಿನಲ್ಲಿ, ಸಾರ್ವಜನಿಕ–ಖಾಸಗಿ ಸಹಭಾಗಿತ್ವದ(ಪಿಪಿಪಿ) ಮಾದರಿಯಲ್ಲಿ ಸರ್ಕಾರಿ ಒಡೆತನದ ಬಿಡಿಎ ವಾಣಿಜ್ಯ ಸಂಕೀರ್ಣಗಳನ್ನೇ ಖಾಸಗಿ ಕಂಪನಿಗಳಿಗೆ ಕೊಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಸರ್ಕಾರದ ಈ ನಿರ್ಧಾರ, ಹಲವು ವರ್ಷಗಳಿಂದ ವ್ಯಾಪಾರ ವಹಿವಾಟು ನಡೆಸಿಕೊಂಡು ಬರುತ್ತಿರುವ ವ್ಯಾಪಾರಿಗಳು ಮತ್ತು ಬಡಾವಣೆಗಳ ನಾಗರೀಕರ ಆಕ್ರೋಶಕ್ಕೆ ಕಾರಣವಾಗಿದೆ. ಇವರು 'ಬಿಡಿಎ ಕಾಂಪ್ಲೆಕ್ಸ್ ಉಳಿಸಿ ಹೋರಾಟ ಸಮಿತಿ' ರಚಿಸಿಕೊಂಡು ಹೋರಾಟಕ್ಕೆ ಸಿದ್ಧರಾಗುತ್ತಿದ್ದಾರೆ.

'ಒಂದು ತಿಂಗಳಲ್ಲಿ ನಿಮ್ಮ ಮಳಿಗೆ ಖಾಲಿ ಮಾಡಿ' ಎಂಬ ನೋಟೀಸ್ ಎಎಚ್. ಎಸ್.ಆರ್. ಲೇಔಟ್ ನ ಬಿಡಿಎ ಕಾಂಪ್ಲೆಕ್ಸ್ ನಲ್ಲಿನ ವ್ಯಾಪಾರಿಗಳಿಗೆ ಬಂದಿದೆ. ಇದನ್ನು ಕಂಡು ಅಲ್ಲಿನ ವ್ಯಾಪಾರಿಗಳು ದಿಕ್ಕುತೋಚದಂತಾಗಿದ್ದಾರೆ. 'ಹತ್ತಾರು ವರ್ಷಗಳಿಂದ ಇಲ್ಲಿಯೇ ವ್ಯಾಪಾರ ನಡೆಸಿಕೊಂಡು ಬರುತ್ತಿರುವ ನಮ್ಮನ್ನು ಈಗ ಏಕಾಏಕಿ ಖಾಲಿ ಮಾಡಿ ಎಂದರೆ ನಾವೆಲ್ಲಿ ಹೋಗೋಣ?' ಎಂದು ಅವರು ತಮ್ಮ ಅಳಲು ತೋಡಿಕೊಳ್ಳುತ್ತಾರೆ.



ಕರ್ನಾಟಕ ರಾಜ್ಯ ಸರ್ಕಾರವು ಸಾರ್ವಜನಿಕ ಆಸ್ತಿಯನ್ನು ಖಾಸಗಿಯವರಿಗೆ ಒಪ್ಪಿಸಲು ಹೊಸದೊಂದು ಹಾದಿ ಹಿಡಿದಿದೆ. ಇದರ ಒಂದು ಭಾಗವಾಗಿ ಸರ್ಕಾರಕ್ಕೆ ನಿಗದಿತ ಆದಾಯ ತಂದುಕೊಡುವ ಹಲವು ಬಿಡಿಎ ಕಾಂಪ್ಲೆಕ್ಸ್ ಗಳನ್ನೇ ಹೊಡೆದು ಉರುಳಿಸಿ, ಮತ್ತಷ್ಟು ವಿಸ್ತಾರವಾಗಿ ಹೊಸ ಕಟ್ಟಡ ನಿರ್ಮಾಣ ಮಾಡಿ, ಅವರ ಮಾತಿನಲ್ಲಿ 'ಮಾಲ್' ಗಳನ್ನಾಗಿ ಮಾಡಲು ಮುಂದಾಗಿದೆ. ಈ ಮೂಲಕ ಸಾರ್ವಜನಿಕ ಆಸ್ತಿಯನ್ನು ಖಾಸಗಿಯವರಿಗೆ ಒಪ್ಪಿಸಿ, ಲಾಭ ಗಳಿಸಿಕೊಳ್ಳಲು ಅವರಿಗೆ ಅವಕಾಶ ಮಾಡಿಕೊಡಲು ಸರ್ಕಾರ ಮುಂದಾಗಿದೆ. ಉದಾಹರಣೆಗೆ, ಸುಸ್ಥಿತಿಯಲ್ಲಿರುವ ಹೆಚ್ಎಸ್ಆರ್ ಬಿಡಿಎ ಕಾಂಪ್ಲೆಕ್ಸ್ ಅನ್ನು ಕೆಡವಿಹಾಕಿ, ಇದೇ ಜಾಗದಲ್ಲಿ 11 ಅಂತಸ್ತಿನ ಕಮರ್ಷಿಯಲ್ ಕಾಂಪ್ಲೆಕ್ಸ್ ನಿರ್ಮಾಣ ಮಾಡಲಾಗುವುದು. ಅದರಲ್ಲಿ ಶೇ.30ರಷ್ಟು ಮಳಿಗೆಗಳನ್ನು ಮಾತ್ರ ಬಿಡಿಎ ಗೆ ನೀಡಲಿವೆ. ಉಳಿದ ಶೇ.70ರಷ್ಟು ಮಳಿಗೆಗಳನ್ನು ಕಂಪನಿಗಳೇ ಉಳಿಸಿಕೊಳ್ಳಲಿದೆ. ಈ ರೀತಿಯಾಗಿ ಒಪ್ಪಂದವಾಗಿದೆ. ಇದನ್ನು ಕೆಲವು ಮಾಧ್ಯಮಗಳು 'ಬಿಡಿಎ ಕಾಂಪ್ಲೆಕ್ಸ್ ಗಳು ಮಾಲ್ ಗಳಾಗಲಿವೆ' ಎಂದು ಬಣ್ಣಿಸಿದರೆ, 'ಕಾಂಪ್ಲೆಕ್ಸ್ ಅನ್ನು ಅಭಿವೃದ್ಧಿ ಮಾಡುವುದಾದರೆ ಸರ್ಕಾರವೇ ಅದನ್ನು ಮಾಡಬಹುದಲ್ಲಾ. ಇದನ್ನು ಖಾಸಗಿಯವರಿಗೆ ಕೊಡುವುದೇಕೆ? ಎಂಬ ಪ್ರಶ್ನೆ ಅಲ್ಲಿನ ವ್ಯಾಪಾರಿಗಳು ಮತ್ತು ಸ್ಥಳಿಯ ನಾಗರೀಕರದು.

20,000 ಕೋಟಿ ರೂ. ಮೌಲ್ಯದ ಆಸ್ತಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹೊಸ ಬಡಾವಣೆ ನಿರ್ಮಾಣ ಮಾಡುವಾಗ ಆಸ್ಪತ್ರೆ, ಶಾಲೆ, ಆಟದ ಮೈದಾನ, ಉದ್ಯಾನವನ, ವಾಣಿಜ್ಯ ಸಂಕೀರ್ಣ, ಧಾರ್ಮಿಕ ಚಟುವಟಿಕೆಗಳು ಇತ್ಯಾದಿಗಳಿಗಾಗಿ ಒಂದಷ್ಟು ಸಾರ್ವಜನಿಕ ಬಳಕೆಯ ಜಾಗ ಮೀಸಲಿಡುತ್ತದೆ. ಇದರ ಒಂದು ಭಾಗವಾಗಿ ತಾನು ನಿರ್ಮಿಸಿರುವ ಬಡಾವಣೆಗಳಲ್ಲಿ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸಿದೆ. ಇವುಗಳು ಜನರ ಬಾಯಲ್ಲಿ ಬಿಡಿಎ ಕಾಂಪ್ಲೆಕ್ ಎಂದೇ ಕರೆಯಲ್ಪಡುತ್ತವೆ. ಬೆಂಗಳೂರು ನಗರದಲ್ಲಿ 15 ಬಿಡಿಎ ಕಾಂಪ್ಲೆಕ್ಸ್ ಗಳಿವೆ. ಇವುಗಳಿಂದ 2022–23 ನೇ ಸಾಲಿನಲ್ಲಿ 10 ಕೋಟಿ ರೂ ಬಾಡಿಗೆ ರೂಪದಲ್ಲಿ ಸರ್ಕಾರಕ್ಕೆ ಆದಾಯ ಬಂದಿದೆ ಎಂದು ಕೆಲವು ಮೂಲಗಳು ತಿಳಿಸುತ್ತವೆ. ಇವುಗಳಲ್ಲಿ ಈಗ ಏಳು ಕಾಂಪ್ಲೆಕ್ಸ್ ಗಳನ್ನು ಮರು ನಿರ್ಮಾಣ ಮಾಡುವ ಹೆಸರಿನಲ್ಲಿ ಖಾಸಗಿ ಕಂಪನಿಗಳಿಗೆ ಕೊಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಇಂದಿರಾನಗರ ವಾಣಿಜ್ಯ ಸಂಕೀರ್ಣವನ್ನು Mavrick Holidings Investments Pvt Ltd ಕಂಪನಿಗೂ ಹಾಗೂ ಕೋರಮಂಗಲ, ಹೆಚ್. ಎಸ್.ಆರ್.ಬಡಾವಣೆ, ಆರ್.ಟಿ.ನಗರ, ಆಸ್ಟಿನ್ ಟೌನ್, ಸದಾಶಿವನಗರ ಮತ್ತು ವಿಜಯನಗರ ಬಿಡಿಎ ವಾಣಿಜ್ಯ ಸಂಕೀರ್ಣಗಳನ್ನು M-FAR Developers Pvt Ltd ಕಂಪನಿಗೆ ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಮರು ನಿರ್ಮಾಣ ಮಾಡುವ ಗುತ್ತಿಗೆ ನೀಡಲಾಗಿದೆ. ಇಷ್ಟೂ ಆಸ್ತಿಗಳ ಮೌಲ್ಯ ಅಂದಾಜು 20 ಸಾವಿರ ಕೋಟಿ! ಹೆಚ್ಎಸ್ಆರ್ ಮತ್ತು ಕೋರಮಂಗಲ ಬಿಡಿಎ ಕಾಂಪ್ಲೆಕ್ಸ್ ಇರುವ ಜಾಗದ ಪ್ರಸ್ತುತ ಮಾರುಕಟ್ಟೆ ಮೌಲ್ಯ ಚದರ ಅಡಿಗೆ 50 ಸಾವಿರ ರೂಪಾಯಿವರೆಗೂ ಇದೆ. (ಅಂದರೆ 1200 ಚದರಡಿ ನಿವೇಶನದ ಬೆಲೆ 6 ಕೋಟಿ ರೂ.)

ಸಾವಿರಾರು ಕೋಟಿ ರೂಪಾಯಿ ಬೆಲೆಬಾಳುವ ಸಾರ್ವಜನಿಕರ ಸ್ವತ್ತನ್ನು ಖಾಸಗಿಯವರಿಗೆ ನೀಡುವ ತೀರ್ಮಾನದ ಹಿಂದೆ ನೂರಾರು ಕೋಟಿ ರೂಪಾಯಿಗಳ ಕಿಕ್ ಬ್ಯಾಕ್ ವ್ಯವಹಾರ ನಡೆದಿದೆ ಎಂದು ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿದೆ. ಈ ಏಳೂ ಬಿಡಿಎ ಕಾಂಪ್ಲೆಕ್ಸ್‌ಗಳು ಆಯಕಟ್ಟಿನ ಜಾಗದಲ್ಲಿವೆ. ಈ ಗುತ್ತಿಗೆ 30 ವರ್ಷ ಇರಲಿದ್ದು, ಮುಂದಿನ 30 ವರ್ಷಕ್ಕೂ ಗುತ್ತಿಗೆ ವಿಸ್ತರಿಸಲು ಅವಕಾಶ ನೀಡಲಾಗಿದೆ. ಅಂದರೆ ಖಾಸಗಿ ಕಂಪನಿಯು ಸರ್ಕಾರದ ಆಸ್ತಿಯನ್ನು ಬಳಸಿಕೊಂಡು 60 ವರ್ಷ ಬಾಡಿಗೆ ಸಂಗ್ರಹಿಸಿ ತಮ್ಮ ತಿಜೋರಿ ತುಂಬಿಸಿಕೊಳ್ಳಲಿವೆ!

ಇಷ್ಟು ಆದಾಯ ಬರುವ ವಾಣಿಜ್ಯ ಸಂಕೀರ್ಣಗಳನ್ನು ಹೊಡೆದು ಉರುಳಿಸುವುದೇಕೆ? ಈ ಕಟ್ಟಡಗಳು ಹಳೆಯದಾಗಿವೆ, ಸಿಥಿಲಾವಸ್ಥೆಯಲ್ಲಿವೆ ಎಂಬುದೆಲ್ಲಾ ಬರೀ ಸುಳ್ಳು. ಇವುಗಳು ಇನ್ನೂ ಸದೃಡವಾಗಿವೆ. ಕೆಲವು ಕಟ್ಟಡಗಳನ್ನು ಕೋಟ್ಯಾಂತರ ಹಣ ವೆಚ್ಚ ಮಾಡಿ ಇತ್ತೀಚೆಗಷ್ಟೇ ನವೀಕರಿಸಲಾಗಿದೆ. ಹೆಚ್ಎಸ್ಆರ್ ಬಿಡಿಎ ಕಾಂಪ್ಲೆಕ್ಸ್ ಅನ್ನು ಇತ್ತೀಚೆಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ, ನವೀಕರಿಸಲಾಗಿದೆ. ಹೀಗಾಗಿ ಇನ್ನೂ ಹತ್ತಾರು ವರ್ಷ ಬಾಳಿಕೆ ಬರುವಷ್ಟು ಸದೃಢವಾಗಿವೆ. ಹೀಗಿರುವಾಗ ಒಡೆದು ಕಟ್ಟುವುದಾದರೂ ಏಕೆ? ಶಿಥಿಲಾವಸ್ಥೆಯಲ್ಲಿರುವ ಬಿಡಿಎ ವಾಣಿಜ್ಯ ಸಂಕೀರ್ಣಗಳನ್ನು ಮರು ನಿರ್ಮಾಣ ಮಾಡುವುದೇ ಆದಲ್ಲಿ, ಸರ್ಕಾರವೇ ಅದನ್ನು ಮಾಡಲು ಸಾಧ್ಯವಿದೆಯಲ್ಲವೇ?

ಇಷ್ಟಕ್ಕೂ ಮಾಲ್ ಗಳನ್ನು ನಿರ್ಮಿಸಬೇಕೆಂದರೆ, ಸರ್ಕಾರ ಬೇರೆ ಜಾಗವನ್ನೇ ಖಾಸಗಿಯವರಿಗೆ ಕೊಡಬಹುದಿತ್ತಲ್ಲ? ಖಾಸಗಿಯವರೂ ಬೇರೆ ಜಾಗ ಖರೀದಿಸಿ ಮಾಲ್ ಗಳನ್ನು ಅಥವಾ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸಬಹುದಲ್ಲವೇ? ಖಾಸಗಿಯವರಿಗೆ ಈ ಬಿಡಿಎ ಕಾಂಪ್ಲೆಕ್ಸ್ ಗಳ ಜಾಗದ ಮೇಲೆಯೇ ಏಕೆ ಕಣ್ಣು? ಎಂಬ ಪ್ರಶ್ನೆ ಸಾರ್ವಜನಿಕರದ್ದು. ಬಿಡಿಎ ವಸತಿ ಬಡಾವಣೆ ನಿರ್ಮಾಣ ಮಾಡುವಾಗ ನಿವಾಸಿಗಳ ಅನುಕೂಲಕ್ಕಾಗಿ ಅಲ್ಲಿನ ಸಿ.ಎ. ನಿವೇಶನಗಳಲ್ಲಿ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಾಣ ಮಾಡಲಾಗಿತ್ತು. ಹೀಗಿರುವಾಗ ಬಡಾವಣೆಯ ನಿವಾಸಿಗಳ ಅಭಿಪ್ರಾಯವನ್ನೂ ಸಂಗ್ರಹಿಸದೇ, ಏಕಾಏಕಿ ಖಾಸಗಿಯವರಿಗೆ ನೀಡಿರುವುದು ಏಕೆ ಎಂದು ಪ್ರಶ್ನಿಸುತ್ತಾರೆ ಅಲ್ಲಿನ ನಿವಾಸಿಗಳು.

ಇಷ್ಟಕ್ಕೂ ನಗರದಲ್ಲಿ ಖಾಸಗಿ ಮಾಲ್ ಗಳು, ಸುಪರ್ ಮಾರ್ಕೆಟ್ ಗಳೇನೂ ಕಡಿಮೆ ಇಲ್ಲ. ನಗರದಲ್ಲಿ ಇಂತಹ ನೂರಾರು ಖಾಸಗಿ ವಾಣಿಜ್ಯ ಸಂಕೀರ್ಣಗಳಿವೆ. ದೊಡ್ಡ ದೊಡ್ಡ ಮಾಲ್ ಗಳಿವೆ. ಆದರೂ ಸಾರ್ವಜನಿಕ ಆಸ್ತಿಯಾಗಿರುವ ಬಿಡಿಎ ಕಾಂಪ್ಲೆಕ್ಸ್ ಗಳನ್ನು ತಮ್ಮದಾಗಿಸಿಕೊಳ್ಳಲು ಇವರು ಮುಂದಾಗಿದ್ದಾರೆ. ರಾಜ್ಯ ಸರ್ಕಾರವೂ ಖಾಸಗಿಯವರ ಲಾಭಕ್ಕಾಗಿ ನೀತಿಗಳನ್ನು ರೂಪಿಸತೊಡಗಿದೆ. ಸಾರ್ವಜನಿಕ ಸ್ವತ್ತುಗಳನ್ನು ಎಷ್ಟು ಸಾಧ್ಯವೋ ಅಷ್ಟನ್ನು ಖಾಸಗಿಯವರಿಗೆ ಒಪ್ಪಿಸಲು ಹಲವು ರೀತಿಯ ತಂತ್ರಗಳನ್ನು ಮಾಡತೊಡಗಿದೆ. ಮೋದಿ ನೇತೃತ್ವದ ಭಾರತ ಸರ್ಕಾರ ಅನುಸರಿಸುತ್ತಿರುವ ಖಾಸಗೀಕರಣ ನೀತಿಯನ್ನು ರಾಜ್ಯ ಕಾಂಗ್ರೆಸ್ ಸರ್ಕಾರವೂ ಬಹಳ ಶ್ರದ್ದೆಯಿಂದ ಅನುಸರಿಸುತ್ತಿದೆ. ಎಷ್ಟೇ ಆದರೂ 1990ರ ದಶಕದಲ್ಲಿ ನವ ಉದಾರವಾದಿ ನೀತಿಗಳನ್ನು ಜಾರಿಗೆ ತರಲು ಮುಂದಾಗಿದ್ದು ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರವೇ ತಾನೆ.

ಸಾರ್ವಜನಿಕ ಆಸ್ತಿಗಳನ್ನು ಮಾರಾಟ ಮಾಡುತ್ತಾ ಹೋದಲ್ಲಿ ಭವಿಷ್ಯದ ಪೀಳಿಗೆಗೆ ಆಸ್ಪತ್ರೆ, ಶಾಲೆ, ಆಟದ ಮೈದಾನ ಇತ್ಯಾದಿಗಳಿಗಾಗಿ ಜಮೀನುಗಳೇ ಇಲ್ಲದ ಸ್ಥಿತಿ ನಿರ್ಮಾಣವಾಗಬಹುದು. ಬಿಡಿಎ ವಾಣಿಜ್ಯ ಸಂಕೀರ್ಣಗಳು, ಕೇವಲ ವಾಣಿಜ್ಯ ವ್ಯವಹಾರದ ಕೇಂದ್ರವಾಗಿರದೇ, ಬಹಳ ಧೀರ್ಘಕಾಲದಿಂದ ಅಲ್ಲಿನ ನಿವಾಸಿಗಳೊಂದಿಗೆ ಭಾವನಾತ್ಮಕ ಸಂಬಂಧವನ್ನು ಬೆಸೆದಿವೆ. ಜನರಲ್ಲಿ ಇದು ನಮ್ಮದು ಎಂಬ ಭಾವನೆ ಮೂಡಿರುತ್ತದೆ. ಹೀಗಿರುವಾಗ ಸರ್ಕಾರದ ಈ ತೀರ್ಮಾನ ಬಿಡಿಎ ಕಾಂಪ್ಲೆಕ್ಸ್ ಜತೆಗಿನ ಜನರ ಭಾವನಾತ್ಮಕ ಸಂಬಂಧವನ್ನು ನಿರ್ದಯವಾಗಿ ಕತ್ತರಿಸಿಹಾಕುವ ಕಟುಕತನದ ತೀರ್ಮಾನ ಎನ್ನುತ್ತಾರೆ ಅವರು. 'ಬಿಡಿಎ ಕಾಂಪ್ಲೆಕ್ಸ್ ಉಳಿಸಿ ಹೋರಾಟ ಸಮಿತಿ' ರಚಿಸಿಕೊಂಡು ಹೋರಾಟಕ್ಕೆ ಸಿದ್ದರಾಗುತ್ತಿದ್ದಾರೆ.

–ಸಿಚಿ

ವಾಲ್ಮೀಕಿ ಅಭಿವೃದ್ಧಿ ನಿಗಮದ ಭ್ರಷ್ಟಾಚಾರವನ್ನು ನ್ಯಾಯಾಂಗದ ಸುಪರ್ದಿಯ ತನಿಖೆಗೆ ಕ್ರಮ ವಹಿಸಿ: ದುರುದ್ದೇಶಿತ ಇ.ಡಿ.ತನಿಖೆ ನಿಲ್ಲಿಸಿ: ಸಿಪಿಐ(ಎಂ)

ರಾಜ್ಯದ ಪರಿಶಿಷ್ಟ ಸಮುದಾಯಗಳ ಬಡ ಫಲಾನುಭವಿಗಳನ್ನು ವಂಚಿಸುವ ವಾಲ್ಮೀಕಿ ಅಭಿವೃದ್ಧಿ ನಿಗಮದ ಭ್ರಷ್ಟಾಚಾರದ ಪ್ರಕರಣವನ್ನು ರಾಜ್ಯ ಸರ್ಕಾರ ವಿಶೇಷ ತನಿಖಾ ದಳದ ಮೂಲಕ ತನಿಖೆಗೆ ಕ್ರಮವಹಿಸಿದೆ. ಈ ಭ್ರಷ್ಟಾಚಾರದ ಪ್ರಕರಣವನ್ನು ನ್ಯಾಯಾಂಗ ಸುಪರ್ದಿಯಲ್ಲಿ ತನಿಖೆಗೆ ಕ್ರಮ ವಹಿಸುವಂತೆ ಮುಖ್ಯಮಂತ್ರಿಯವರನ್ನು ಸಿಪಿಐ(ಎಂ) ರಾಜ್ಯ ಸಮಿತಿ ಆಗ್ರಹಿಸಿದೆ.

ಒಕ್ಕೂಟ ಸರಕಾರ ಸ್ವಾಯತ್ತ ಸಂಸ್ಥೆಯಾದ ಇ.ಡಿ.ಯನ್ನು ಮತ್ತು ಅದರ ಅಧಿಕಾರಿಗಳನ್ನು ದುರ್ಬಳಕೆ ಮಾಡಿ ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸುವ ಹಾಗು ಕಿತ್ತು ಹಾಕುವ ಅಕ್ರಮವನ್ನು ಬಲವಾಗಿ ಖಂಡಿಸಿರುವ ಸಿಪಿಐ(ಎಂ) ಈ ಪ್ರಕರಣದಲ್ಲಿ ಈ ಕೂಡಲೆ ಎಲ್ಲ ಕೇಂದ್ರೀಯ ತನಿಖಾ ಸಂಸ್ಥೆಗಳ ತನಿಖೆಯನ್ನು ನಿಲ್ಲಿಸುವಂತೆ ಆಗ್ರಹಿಸಿದೆ.

ಇದು ಸುಮಾರು 87 ಕೋಟಿ ರೂ.ಗಳ ದೊಡ್ಡ ಹಗರಣ ಮಾತ್ರವಲ್ಲಾ, ಸದರಿ ವಿಚಾರಕ್ಕೆ ಸಂಬಂಧಿಸಿ ನಿಗಮದ ಕೇಂದ್ರ ಕಛೇರಿಯ ಅಧೀಕ್ಷಕ ಶ್ರೀ ಚಂದ್ರ ಶೇಖರನ್ ಆತ್ಮಹತ್ಯೆ ಮಾಡಿಕೊಂಡಿದ್ದರು. ನಿಗಮದ ಉನ್ನತ ಕಛೇರಿಯ ಪ್ರಮುಖ ಅಧಿಕಾರಿಗಳು ಮತ್ತು ನಾಗೇಂದ್ರರವರು ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಿ ಬಂದಿಸಲ್ಪಟ್ಟಿದ್ದಾರೆ.

ಸದರಿ ಪ್ರಕರಣದಲ್ಲಿ ಉನ್ನತ ಹಂತದ ಅಧಿಕಾರಿಗಳು ಮತ್ತು ಮಂತ್ರಿಗಳು ಭಾಗಿಯಾಗಿರುವ ಸಂಭವಗಳಿರುವುದರಿಂದ, ರಾಜ್ಯ ಸರ್ಕಾರದ ತನಿಖೆ ನಂಬಲರ್ಹವಲ್ಲವೆಂದು ಬಿಜೆಪಿ ಹಾಗು ಜೆಡಿಎಸ್ ಪಕ್ಷಗಳು ಸಿಬಿಐ ತನಿಖೆಗೆ ಒತ್ತಾಯಿಸಿದ್ದವು.

ಒಕ್ಕೂಟ ಸರಕಾರ, ಕೇಂದ್ರ ತನಿಖಾ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಂಡು ವಿರೋಧ ಪಕ್ಷಗಳ ರಾಜ್ಯ ಸರ್ಕಾರಗಳನ್ನು ಅಸ್ಥಿರಗೊಳಿಸುವ ದುರುದ್ದೇಶದ ಪ್ರಕರಣಗಳು ಕಂಡು ಬರುತ್ತಿರುವುದರಿಂದ ಇದನ್ನು ಸಿಪಿಐ(ಎಂ) ವಿರೋಧಿಸಿತ್ತು. ಮತ್ತು ಈ ಎರಡು ಸರಕಾರಗಳ ಸುಪರ್ಧಿಯ ತನಿಖೆಯು ವಿಶ್ವಾಸಾರ್ಹವಲ್ಲವೆಂದು ಇವುಗಳಿಂದಾಚೆ ನ್ಯಾಯಾಂಗ ಸುಪರ್ಧಿಯ ತನಿಖೆಗೆ ಕ್ರಮವಹಿಸುವುದೊಂದೆ ನಿಷ್ಪಕ್ಷಪಾತ ತನಿಖೆಗಿರುವ ಏಕೈಕ ಮಾರ್ಗವೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿತ್ತು.

ಈ ನಡುವೆ ಕೇಂದ್ರ ತನಿಖಾ ದಳ ಜಾರಿ ನಿರ್ದೇಶನಾಲಯ (ಇ.ಡಿ) ಹಾಗು ಸಿಬಿಐಗಳ ಮೂಲಕ ತನಿಖೆಯು ಜಾರಿಯಲ್ಲಿದ್ದು, ಮುಖ್ಯವಾಗಿ ಇ.ಡಿ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂದಿಸಿದ ಅಧಿಕಾರಿಯೊಬ್ಬರನ್ನು ಹಿಂಸೆಗೊಳಪಡಿಸಿ, ಭ್ರಷ್ಟಾಚಾರದಲ್ಲಿ ಮುಖ್ಯಮಂತ್ರಿ ಸೇರಿದಂತೆ ಮತ್ತಿತರರ ಪಾತ್ರಗಳಿವೆ ಎಂದು ಹೇಳಿಕೆ ನೀಡುವಂತೆ ಒತ್ತಾಯಿಸಿದುದರ ವಿರುದ್ದ ಕಲ್ಲೇಶ್ ಎಂಬ ಅಧಿಕಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ರಾಜ್ಯ ಸರ್ಕಾರವನ್ನು ಅಕ್ರಮವಾಗಿ ಕಿತ್ತು ಹಾಕುವ ಬಿಜೆಪಿ ಹಾಗು ಜೆಡಿಎಸ್ ರಾಜಕಾರಣದಲ್ಲಿ ಭ್ರಷ್ಟಾಚಾರದ ಪ್ರಕರಣ ಮುಚ್ಚಿ ಹೋಗಬಾರದು. ಆದ್ದರಿಂದ ರಾಜ್ಯ ಸರ್ಕಾರ ತನ್ನ ಮೇಲಿನ ಕಳಂಕ ನಿವಾರಣೆಗೆ ಈ ಭ್ರಷ್ಟಾಚಾರದ ಪ್ರಕರಣವನ್ನು ನ್ಯಾಯಾಂಗ ಸುಪರ್ದಿಯಲ್ಲಿ ತನಿಖೆಗೆ ಕ್ರಮ ವಹಿಸುವಂತೆ ಮುಖ್ಯಮಂತ್ರಿಯವರನ್ನು ಆಗ್ರಹಿಸಿದೆ.

ಅದೇ ಜನ–ವಿರೋಧಿ ಕಸರತ್ತಿನೊಂದಿಗೆ ಜನತೆಯ ಕಲ್ಯಾಣದ ಟೊಳ್ಳು ಮಾತು: ಸಿಐಟಿಯು

ಮೋದಿ ನೇತೃತ್ವದ ಎನ್‌ಡಿಎ ಸಮ್ಮಿಶ್ರ ಸರ್ಕಾರ ತನ್ನ ಅದೇ ಜನವಿರೋಧಿ, ದೊಡ್ಡ ಉದ್ಯಮಿಗಳ ಪರ–ಕಸರತ್ತನ್ನು ಮುಂದುವರೆಸುವ ಹತಾಶ ಪ್ರಯತ್ನ ಅದರ ಬಜೆಟ್ 2024–25 ರಲ್ಲಿ ಪ್ರದರ್ಶನಗೊಂಡಿದೆ ಎಂದು ಸಿಐಟಿಯು ಹೇಳಿದೆ. ಇದು ಮುಖ್ಯವಾಗಿ ಸಾಮಾನ್ಯ ಜನರ ತೆರಿಗೆ ಪಾವತಿಗಳಿಂದ ನಿರ್ಮಿಸಲಾದ ರಾಷ್ಟ್ರೀಯ ಖಜಾನೆಯಿಂದ ದೊಡ್ಡ ಉದ್ಯಮಿಗಳು/ಕಾರ್ಪೊರೇಟ್ ವರ್ಗಕ್ಕೆ ಪ್ರಯೋಜನಗಳು ಮತ್ತು ನೇರ ಸಬ್ಸಿಡಿಗಳನ್ನು ಒದಗಿಸುವ ದುಂದು ವೆಚ್ಚವನ್ನು ಇನ್ನಷ್ಟು ಆಕ್ರಮಣಕಾರಿಯಾಗಿ ಮುಂದುವರೆಸುವ ಕಸರತ್ತು.; ಮತ್ತು ಅತ್ಯಂತ ಹಾಸ್ಯಾಸ್ಪದ ಸಂಗತಿಯೆಂದರೆ, ಬೆಳವಣಿಗೆ, ಉದ್ಯೋಗ ಮತ್ತು ಜನರ ಕಲ್ಯಾಣವನ್ನು ಉತ್ತೇಜಿಸುವ ಹೆಸರಿನಲ್ಲಿ ಈ ಎಲ್ಲಾ ಮೋಸದ ಕಸರತ್ತುಗಳನ್ನು ಮಾಡಲಾಗುತ್ತಿದೆ ಎಂದು ಅದು ಹೇಳಿದೆ.

ಬಜೆಟ್ ಭಾಷಣ ಮತ್ತು ಬಜೆಟ್ ದಾಖಲೆಗಳ ಪ್ರಥಮ ನೋಟದಲ್ಲೇ ಹಣಕಾಸು ಮಂತ್ರಿಗಳ ಮಾತುಗಳು ಮತ್ತು ಕೃತಿಗಳಲ್ಲಿನ ನಡುವೆ ಇರುವ ಮೋಸದ ಅಂತರ ಬಯಲಿಗೆ ಬರುತ್ತದೆ. ಆದಾಯ ಸುಮಾರು 15% ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಹೆಚ್ಚಿದ್ದರೂ, ಒಟ್ಟಾರೆಯಾಗಿ ವೆಚ್ಚವು ಕೇವಲ 5.9% ರಷ್ಟು ಹೆಚ್ಚಾಗಿದೆ, ಇದು ಜಿಡಿಪಿಯ ಶೇಕಡಾವಾರಾಗಿ ಕಳೆದ ವರ್ಷಕ್ಕಿಂತ 1.8% ರಷ್ಟು ಕುಸಿತ ತೋರಿಸುತ್ತದೆ. ಒಂದು ದಶಕದ ಆಳ್ವಿಕೆಯಲ್ಲಿ ಅರ್ಥವ್ಯವಸ್ಥೆ ವಿಪರೀತ ನಿರುದ್ಯೋಗ, ಹೊಲಸು ಮಟ್ಟದ ಅಸಮಾನತೆ ಮತ್ತು ಜನಗಳ ದಾರಿದ್ರ್ಯ ಹೆಚ್ಚುತ್ತಿರುವ ಒಂದು ಗಂಭೀರ ಪರಿಸ್ಥಿತಿಯಲ್ಲಿ ಬಂದಿದೆ. ಬಜೆಟ್ ಈ ಯಾವ ಸಮಸ್ಯೆಯ ಬಗ್ಗೆ ಏನನ್ನೂ ಹೇಳುವುದಿಲ್ಲ. ಬದಲಿಗೆ ಉತ್ಪಾದಕತೆ, ಬಂಡವಾಳ ವೆಚ್ಚ ಮತ್ತು ಉದ್ಯೋಗ ಸೃಷ್ಟಿಗೆ ವಿವಿಧ ರೀತಿಗಳ ಉತ್ತೇಜನೆಯ ಹೆಸರಿನಲ್ಲಿ ಖಾಸಗಿ ಕಾರ್ಪೊರೇಟ್‌ಗಳ ಬೊಕ್ಕಸಕ್ಕೆ ಸಾರ್ವಜನಿಕ ಹಣದ ಹರಿವು ಹೆಚ್ಚುವಂತೆ ಮಾಡಲಾಗಿದೆ, ಆದರೆ ಅದಕ್ಕೆ ತಕ್ಕಂತೆ ಹೊಣೆಗಾರಿಕೆಯನ್ನು ನಿರ್ಧರಿಸುವ ಯಾವುದೇ ವ್ಯವಸ್ಥೆ ಇಲ್ಲವಾಗಿದೆ.

ಹಲವು ಸಾಮಾಜಿಕ ಬಾಬ್ತುಗಳಲ್ಲಿ ಹಣ ಕಡಿತಗಳೊಂದಿಗೆ, ಕಾರ್ಮಿಕ ಕಲ್ಯಾಣ ನಿಧಿಯು 1200 ಕೋಟಿ ರೂಪಾಯಿಗಳ ಕಡಿತವನ್ನು ಎದುರಿಸಬೇಕಾಗಿದೆ ಮತ್ತು ಕಾರ್ಮಿಕ ಬಜೆಟ್‌ನಲ್ಲಿ 3000 ಕೋಟಿಗಳಷ್ಟು ಇಳಿಕೆಯಾಗಿದೆ. ಅದೇ ರೀತಿ ಗ್ರಾಮೀಣಾಭಿವೃದ್ಧಿ ನಿಧಿಯು 20% ಇಳಿಕೆ ಕಾಣುತ್ತಿದೆ, ಬೆಳೆ ವಿಮಾ ಯೋಜನೆಗೆ ಹಂಚಿಕೆಯಲ್ಲಿ 1500 ಕೋಟಿ ರೂ.ಕಡಿತವನ್ನು ಮಾಡಲಾಗಿದೆ ಮತ್ತು ಶುದ್ಧ ನೀರಿನ ಕಾರ್ಯಕ್ರಮಕ್ಕೆ ರೂ. 1500 ಕೋಟಿ ಹಂಚಿಕೆಯಲ್ಲಿ ಕಡಿತವಾಗಿದೆ. ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್‌ಗೆ ಹಂಚಿಕೆಯನ್ನೂ 43% ದಷ್ಟು ಕಡಿಮೆ ಮಾಡಲಾಗಿದೆ.

ಆಹಾರ, ರಸಗೊಬ್ಬರ ಮತ್ತು ಇಂಧನದ ಮೇಲಿನ ಸಬ್ಸಿಡಿಯನ್ನು ತೀವ್ರವಾಗಿ ಕಡಿತಗೊಳಿಸಲಾಗುತ್ತಿರುವಾಗ, ದೇಶೀ ಮತ್ತು ವಿದೇಶಿ ಕಾರ್ಪೊರೇಟ್‌ಗಳಿಗೆ ಸಬ್ಸಿಡಿಗಳನ್ನು ವಿವಿಧ ಪ್ರೋತ್ಸಾಹಕಗಳ ರೂಪದಲ್ಲಿ ರಾಷ್ಟ್ರೀಯ ಖಜಾನೆಯಿಂದ ಹರಿಸಲಾಗಿದೆ. ಆದರೆ ಇದರ ಫಲಾನುಭವಿಗಳ ಮೇಲೆ ಹೊಣೆಗಾರಿಕೆಯ ಯಾವುದೇ ವ್ಯವಸ್ಥೆಯನ್ನು ಗಂಭೀರವಾಗಿ ಜಾರಿಗೊಳಿಸಲಾಗಿಲ್ಲ. ಇದರಿಂದಾಗಿ ವಾಸ್ತವಿಕವಾಗಿ ಯಾವುದೇ ಖಾಸಗಿ ಹೂಡಿಕೆಯ ಬೆಳವಣಿಗೆಯಾಗಲೀ, ಅಥವಾ ಉದ್ಯೋಗ ಸೃಷ್ಟಿಗೆ ಯಾವುದೇ ಗಣನೀಯ ಸೇರ್ಪಡೆಯಾಗಲೀ ಆಗಿಲ್ಲ.

ಈಗ ಈ ಬಜೆಟ್‌ನಲ್ಲಿ ಎಂಪ್ಲಾಯ್‌ಮೆಂಟ್ ಲಿಂಕ್ಡ್ ಇನ್ಸೆಂಟಿವ್ ಸ್ಕೀಮ್, ಅಂದರೆ ಉದ್ಯೋಗದೊಂದಿಗೆ ತಳುಕು ಹಾಕಿದ ಮೂರು ಉತ್ತೇಜನಾ ಸ್ಕೀಮುಗಳನ್ನು ಪ್ರಕಟಿಸಲಾಗಿದೆ. ಇದಕ್ಕೆ ರೂ.2 ಲಕ್ಷ ಕೋಟಿಗಳ ಹಂಚಿಕೆ ಒದಗಿಸಲಾಗಿದೆ, ಜೊತೆಗೆ ಉದ್ಯೋಗ ಮತ್ತು ಕೌಶಲ ಉತ್ತೇಜನೆಗೆಂದು ರೂ.1.48 ಲಕ್ಷ ಕೋಟಿಗಳನ್ನು ನೀಡಲಾಗಿದೆ–ಇವನ್ನೆಲ್ಲಾ ತಯಾರಿಕಾ ವಲಯದಲ್ಲಿ ಉದ್ಯೋಗ ಸೃಷ್ಟಿಯನ್ನು ಉತ್ತೇಜಿಸುವ ಹೆಸರಿನಲ್ಲಿ ಮಾಡಲಾಗಿದೆ. ವಾಸ್ತವವಾಗಿ ಇವೆಲ್ಲ ದೇಶೀ ಮತ್ತು ವಿದೇಶಿ ಕಾರ್ಪೊರೇಟ್‌ಗಳಿಗೆ ಶ್ರಮ ಸಬ್ಸಿಡಿಯನ್ನು ಒದಗಿಸುವ ಕ್ರಮಗಳು.

ಕಾರ್ಪೊರೇಟ್ ತೆರಿಗೆಯ ಪಾಲು ಮೊದಲ ಬಾರಿಗೆ ಒಟ್ಟು ನೇರ ತೆರಿಗೆ ಸಂಗ್ರಹಗಳಲ್ಲಿ (27.2%) ವೈಯಕ್ತಿಕ ಆದಾಯ ತೆರಿಗೆ (29.2%) ಗಿಂತ ಕಡಿಮೆಯಾಗಿದೆ ಎಂಬುದು ಕುತೂಹಲಕಾರೀ ಸಂಗತಿ, ಇದು ಕಾರ್ಪೊರೇಟ್ ತೆರಿಗೆಗಳಲ್ಲಿ ಹಲವು ರೀತಿಗಳ ರಿಯಾಯಿತಿಗಳು ಮತ್ತು ವಿನಾಯಿತಿಗಳ ಫಲ. ಅಲ್ಲದೆ ದಿವಾಳಿ ಸಂಹಿತೆಯನ್ನು ಮತ್ತಷ್ಟು ಉದಾರೀಕರಿಸಿ ಬ್ಯಾಂಕ್ ಸಾಲಗಳ ಸುಸ್ತಿದಾರ ಕಂಪನಿಗಳಿಗೆ ಅನುಕೂಲ ಕಲ್ಪಿಸಿ ಕೊಡಲಾಗಿದೆ. ಒಟ್ಟಿನಲ್ಲಿ ಪ್ರಸ್ತುತ ಎನ್‌ಡಿಎ ಆಡಳಿತ ಕಾರ್ಪೊರೇಟ್ ವರ್ಗದ ಸೇವೆಗೆ ತನ್ನನ್ನು ಸಮರ್ಪಿಸಿ ಕೊಂಡಿದೆ ಎಂಬುದನ್ನು ಪ್ರದರ್ಶಿಸುತ್ತದೆ.

'ಸಹಕಾರಿ ಒಕ್ಕೂಟ ತತ್ವ' ಎಂದು ದೊಡ್ಡ–ದೊಡ್ಡ ಮಾತುಗಳನ್ನಾಡಿದರೂ ರಾಜ್ಯಗಳಿಗೆ ಹಣಕಾಸು ಆಯೋಗದ ಅನುದಾನಗಳು 2022–23 ರಲ್ಲಿ ರೂ.1,72,760 ಕೋಟಿಗಳು ಇದ್ದದ್ದು 2023–24 ರಲ್ಲಿ ರೂ. 140429 ಕೋಟಿಗೆ ಇಳಿಯಿತು ಮತ್ತು ಈ ಬಜೆಟ್ ಅದನ್ನು ಇನ್ನಷ್ಟು ಕೆಳಕ್ಕೆ, ರೂ.1,32,378 ಕೋಟಿಗಳಿಗೆ ಇಳಿಸಿದೆ.

ಇಂಧನ ಪರಿವರ್ತನೆಯ ಮೂಲಕ ಇಂಧನ ಭದ್ರತೆಯ ಹೆಸರಿನಲ್ಲಿ ಆಯಕಟ್ಟಿನ ಪರಮಾಣು ಶಕ್ತಿ ಕ್ಷೇತ್ರವನ್ನು ಖಾಸಗೀಕರಣಗೊಳಿಸುವುದು, ಅನಿಯಂತ್ರಿತ ಎಫ್‌ಡಿಐಗೆ ಅರ್ಥವ್ಯವಸ್ಥೆಯನ್ನು ತೆರೆಯುವುದು, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿಯ ಖಾಸಗೀಕರಣ, ಬಾಹ್ಯಾಕಾಶ ಪರಿಶೋಧನೆಯಲ್ಲಿ ಸಾಹಸೋದ್ಯಮ ಬಂಡವಾಳಕ್ಕೆ ಅವಕಾಶ ನೀಡುವುದು, 25 ನಿರ್ಣಾಯಕ ಖನಿಜಗಳ ಮೇಲೆ ಅಬಕಾರಿ ಸುಂಕ ಕಡಿತಗೊಳಿಸುವುದು ಮತ್ತು ಮೊಬೈಲ್‌ಗಳು ಮತ್ತು ಪರಿಕರಗಳ ಮೇಲಿನ ಸುಂಕವನ್ನು ಕಡಿತಗೊಳಿಸುವುದು ಈ ಬಜೆಟ್‌ನ ಮೂಲಕ ಜನರ ಮತ್ತು ರಾಷ್ಟ್ರೀಯ ಆರ್ಥಿಕತೆಯ ಹಿತಾಸಕ್ತಿಗಳಿಗೆ ವಿರುದ್ಧವಾದ ಕೆಲವು ದುಷ್ಕೃತ್ಯಗಳಾಗಿವೆ ಎಂದಿರುವ ಸಿಐಟಿಯು ಈ ಬಜೆಟ್ ಪಕ್ಕಾ ಜನ–ವಿರೋಧಿ ಪ್ರತಿಗಾಮಿ ಕಸರತ್ತು ಎನ್ನುತ್ತ ಇದರ ವಿರುದ್ಧ ಪ್ರತಿಭಟನೆಯ ಮತ್ತು ಆಕ್ರೋಶದ ದನಿಯೆತ್ತಬೇಕು ಎಂದು ಕರೆ ನೀಡಿದೆ.

ಪರಶು ರಾಮ ಥೀಮ್ ಪಾರ್ಕ್: ಅಂದು 'ಅಡ್ಜೆಸ್ಟ್ ಮೆಂಟ್' ಆಟವಾಡಿದ ಕಾಂಗ್ರೆಸ್

ಪರಶು ರಾಮ ಥೀಮ್ ಪಾರ್ಕ್, ನಕಲಿ ಪ್ರತಿಮೆ ಹಗರಣದ ರೂವಾರಿ ಕಾರ್ಕಳ ಶಾಸಕ ಸುನಿಲ್ ಕುಮಾರ್. ಈ ಕುರಿತು ಸರಿಯಾದ ತನಿಖೆ ನಡೆಸಿ ಸುನಿಲ್ ಕುಮಾರ್ ಅಟ್ಟಹಾಸಕ್ಕೆ ಕಡಿವಾಣ ಹಾಕಿ ಎಂದು ಕಾರ್ಕಳದ ನೈಜ ಕಾಂಗ್ರೆಸ್ ಕಾರ್ಯಕರ್ತರು ತಮ್ಮದೇ ಸರಕಾರದ ಮುಂದಾಳುಗಳ ಎದುರು ಅಂಗಲಾಚಿ ಬೇಡಿಕೊಂಡರೂ ಕಾಂಗ್ರೆಸ್ ಸರಕಾರ ಸರಿಯಾದ ತನಿಖೆ ನಡೆಸಲೇ ಇಲ್ಲ. ಈ "ಅಡ್ಜೆಸ್ಟ್ ಮೆಂಟ್" ಆಟದಿಂದ ಕಾಂಗ್ರೆಸ್ ಕಾರ್ಯಕರ್ತರು ಎಷ್ಟು ಹೈರಾಣಾದರು ಅಂದರೆ, ಸಾರ್ವಜನಿಕವಾಗಿ ಮುಖ ತೋರಿಸಲಾಗದೆ ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ನಿಷ್ಕ್ರಿಯರಾದರು. ಇಷ್ಟಾದರು ಕಾಂಗ್ರೆಸ್ ಸರಕಾರ ಸುನಿಲ್ ಕುಮಾರ್ ವಿರುದ್ದವಿದ್ದ ಈ ಪ್ರಕರಣದಲ್ಲಿ ಸರಿಯಾದ ತನಿಖೆಗೆ ಮುಂದಾಗಲೇ ಇಲ್ಲ. ಸುನಿಲ್ ಕುಮಾರ್ ಅವರ ಹಿತಕಾಯಲು ಎಲ್ಲಾ ಯತ್ನಗಳು ನಡೆದವು.

ಈಗ ವಾಲ್ಮೀಕಿ ನಿಗಮ ಹಗರಣ, ಮೈಸೂರು ಮೂಡಾ ಸೈಟು ಹಗರಣದಲ್ಲಿ ಬಿಜೆಪಿ ಯಾವ ಮುಲಾಜೂ ಇಲ್ಲದೆ ಕಾಂಗ್ರೆಸ್ ಸರಕಾರ ಹಾಗೂ ಕೈ ಮುಖಂಡರ ಮೇಲೆ ಮುಗಿಬಿದ್ದಿದೆ. ಪರಶುರಾಮ ಥೀಮ್ ಪಾರ್ಕ್ ಹಗರಣದ ಆರೋಪ ಹೊತ್ತಿರುವ ಶಾಸಕ ಸುನಿಲ್ ಕುಮಾರ್ ರವರು ಸರಕಾರದ ಮೇಲಿನ ಭ್ರಷ್ಟಾಚಾರ ಆರೋಪ ಹೊರಿಸುವುದರಲ್ಲಿ ಸದನದಲ್ಲಿ ಮುಂಚೂಣಿಯಲ್ಲಿ ನಿಂತಿದ್ದಾರೆ. ಅವರು ಮುಖ್ಯಮಂತ್ರಿ ಸಿದ್ದರಾಮಯ್ಯರವರನ್ನೇ ನೇರ ಗುರಿಯಾಗಿಸಿದ್ದಾರೆ. ಪರಶುರಾಮ ನಕಲಿ ಪ್ರತಿಮೆ ಹಗರಣದಲ್ಲಿ ಕಾಂಗ್ರೆಸ್ ಸರಕಾರ ತನಗೆ ನೆರವಾದ ಬಗ್ಗೆ ಯಾವುದೇ ಮುಲಾಜೂ ಸುನಿಲ್ ಕುಮಾರ್ ರಲ್ಲಿ ಕಾಣುತ್ತಿಲ್ಲ.

ಇದೀಗ ತಡವಾಗಿ ಜ್ಞಾನೋದಯ ಆದಂತೆ, ಸುನಿಲ್ ಕುಮಾರ್ ಸಹಿತ ಬಿಜೆಪಿ ಪ್ರಮುಖರ ಬಾಯಿ ಮುಚ್ಚಿಸಲು ಬಿಜೆಪಿ ಸರಕಾರದ ಕಾಲದ ಹಗರಣಗಳ ತನಿಖೆ ನಡೆಸುವುದಾಗಿ ಕಾಂಗ್ರೆಸ್ ಸರಕಾರ ಬಾಯಿ ಬಡಿದುಕೊಳ್ಳುತ್ತಿದೆ. ಪರಶುರಾಮ ನಕಲಿ ಪ್ರತಿಮೆ ಹಗರಣದ ಕುರಿತು ಸದನದಲ್ಲಿ ಸಿದ್ದರಾಮಯ್ಯ ಏರು ದನಿಯಲ್ಲಿ ಪ್ರಸ್ತಾಪಿಸಿದ್ದಾರೆ. ಕರಾವಳಿ ಕೈ ನಾಯಕರು, ಕಾರ್ಯಕರ್ತರನ್ನು ಬೆಂಗಳೂರಿಗೆ ಕರೆಸಿ ಪರಶುರಾಮ ಥೀಮ್ ಪಾರ್ಕ್ ಹಗರಣದ ಕುರಿತು ತನಿಖೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದಾರೆ. ಬಿಜೆಪಿ ಶಾಸಕರೊಂದಿಗೆ ಮೃದುವಾಗಿರುವ, ಆ ಕಾರಣಕ್ಕೆ ಕಾರ್ಯಕರ್ತರ ಸಿಟ್ಟಿಗೆ ಗುರಿಯಾಗಿರುವ ಉಡುಪಿ ಉಸ್ತುವಾರಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ "ಸುನಿಲ್ ಕುಮಾರ್" ಕಳ್ಳ ಎಂದು ಮೈಕ್ ಹಿಡಿದು ಆರ್ಭಟಿಸಿದ್ದಾರೆ.

ಇಷ್ಟೆಲ್ಲಾ ಆದ ಮೇಲೂ, ಕೈ ಸರಕಾರದ ತನಿಖೆ ಬಿಜೆಪಿ ಶಾಸಕ ಸುನಿಲ್ ಕುಮಾರ್ ರ ಕೂದಲನ್ನೂ ಕೊಂಕಿಸಿಲ್ಲ. ಬದಲಿಗೆ, ಆಗಿನ ಬಿಜೆಪಿ ಸರಕಾರದ ಪ್ರಭಾವಿ ಮಂತ್ರಿ ಸುನಿಲ್ ಕುಮಾರ್ ಬಲವಾದ ಒತ್ತಡವನ್ನು ತಡೆಯಲಾಗದೆ, ನಕಲಿ ಪ್ರತಿಮೆ ಉದ್ಘಾಟನೆಗೆ ಒಪ್ಪಿಗೆ ನೀಡಿದ ಉಡುಪಿ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಅರುಣ್ ಕುಮಾರ್ ರನ್ನು ರಾಜ್ಯ ಸರಕಾರ ಉಡುಪಿ



ಜಿಲ್ಲಾಧಿಕಾರಿ ಮೇಲೆ ಬಲವಾದ ಒತ್ತಡ ಹಾಕಿ ಅಮಾನತುಗೊಳಿಸಿ, ಈಗ ಮನೆಗೆ ಕಳುಹಿಸಿದೆ, ನಾಳೆ ಜೈಲಿಗೂ ಕಳುಹಿಸಬಹುದು. ಸುನಿಲ್ ಕುಮಾರ್ ಮಾತ್ರ ಈ ಸರಕಾರದ ತನಿಖೆಗೆ ಕ್ಯಾರೇ ಅನ್ನದೆ ಸದನದಲ್ಲಿ ಕಾಂಗ್ರೆಸ್ ಸರಕಾರದ ವಿರುದ್ದ ಆರ್ಭಟಿಸುತ್ತಿದ್ದಾರೆ. ಸ್ಪೀಕರ್ ಖಾದರ್ ಜೊತೆ ತುಳು ಭಾಷೆಯಲ್ಲಿ ಜಗಳವಾಡಿ ಗಮನ ಸೆಳೆಯುತ್ತಿದ್ದಾರೆ.

ಪೂರ್ಣಗೊಳ್ಳದ ಕಾಮಗಾರಿ, ಪರಶುರಾಮ ನಕಲಿ ವಿಗ್ರಹ, ನಿಯಮಗಳನ್ನು ಉಲ್ಲಂಘಿಸಿ ಎರಡೂವರೆ ಕೋಟಿ ರೂಪಾಯಿ ಸರಕಾರದ ಹಣ ಅಂದಾದುಂಧಿ ಖರ್ಚು ಮಾಡಿ ಉದ್ಘಾಟನಾ ಕಾರ್ಯಕ್ರಮ ಆಯೋಜನೆ, ಉದ್ಘಾಟನಾ ಕಾರ್ಯಕ್ರಮದಲ್ಲಿ ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಗಿ, ನಕಲಿ ವಿಗ್ರಹದ ತರಾತುರಿ ತೆರವು... ಎಷ್ಟೊಂದು ವಿಷಯಗಳಿದ್ದವು ಸುನಿಲ್ ಕುಮಾರ್ ರನ್ನು ತನಿಖೆಗೆ ಒಳಪಡಿಸಲು! ಇಷ್ಟೆಲ್ಲಾ ಇದ್ದೂ ಸರಕಾರದ ಯಾವ ತನಿಖಾ ಏಜನ್ಸಿಯೂ ಈವರಗೆ ಯಾಕೆ ಸುನಿಲ್ ಕುಮಾರ್ ರಿಗೆ ಒಂದು ನೋಟೀಸು ಕೂಡಾ ನೀಡುವ ಧೈರ್ಯ ತೋರಲಿಲ್ಲ? ಒಂದು ವರ್ಷದ ತರುವಾಯ ಓರ್ವ ಅಧಿಕಾರಿಯನ್ನು ಬಲಿಕೊಟ್ಟರೆ (ಅಮಾನತು) ಅದನ್ನು ತನಿಖೆ ಅನ್ನುತ್ತಾರಾ? ಕಾಂಗ್ರೆಸ್ ಸರಕಾರ ಬಿಜೆಪಿ ಕಾಲದ ಭ್ರಷ್ಟಾಚಾರವನ್ನು ಬಯಲುಗೊಳಿಸುತ್ತಿದೆ ಎಂದು ಭಾವಿಸಬೇಕಾ? ಕಣ್ಣಾಮುಚ್ಚಾಳೆ ಆಟವನ್ನು ಜನತೆ ನಂಬುವುದಿಲ್ಲ. ಪರಶುರಾಮ ಥೀಮ್ ಪಾರ್ಕ್ ಹಗರಣದ ವಿರುದ್ದ ಈಗ ಪಕ್ಷಾತೀತವಾಗಿ ಒಂದು ಹೋರಾಟ ಎದ್ದು ಬರಬೇಕಿದೆ.

–ಮುನೀರ್ ಕಾಟಿಪಳ್ಳ

ಕಾಮ್ರೆಡ್ 'ಸೂರಿ'ಯವರ ಜನ್ಮ ಶತಮಾನೋತ್ಸವ ಆಚರಣೆ: ವೈವಿಧ್ಯ ಕಾರ್ಯಕ್ರಮಗಳು

ಕಾಮ್ರೇಡ್ 'ಸೂರಿ' ಎಂದೇ ಕರೆಯಲ್ಪಡುವ ಎಸ್.ಸೂರ್ಯನಾರಾಯಣ ರಾವ್ ಅವರು ಸ್ವಾತಂತ್ರ ಹೋರಾಟಗಾರರಾಗಿ, ವಿದ್ಯಾರ್ಥಿ ನಾಯಕರಾಗಿ, ಕಾರ್ಮಿಕ ನಾಯಕರಾಗಿ, ಕಮ್ಯುನಿಸ್ಟ್ ನಾಯಕರಾಗಿ ಮತ್ತು ಶಾಸಕರಾಗಿ ಕರ್ನಾಟಕ ರಾಜ್ಯದ ಜನರ ಹಿತಾಸಕ್ತಿ ಕಾಪಾಡುವಲ್ಲಿ ಹಲವಾರು ಕೊಡುಗೆಗಳನ್ನು ನೀಡಿ, ತನ್ನನ್ನು ತಾನೇ ಅರ್ಪಿಸಿಕೊಂಡ ಮಹಾನ್ ನಾಯಕ.

1942 ಆಗಸ್ಟ್ 8ರಂದು 'ಭಾರತ ಬಿಟ್ಟು ತೊಲಗಿ' ಚಳುವಳಿ ದೇಶದೆಲ್ಲೆಡೆ ತೀವ್ರಗೊಂಡಿತ್ತು. ಅಂದು ಖ್ಯಾತ ವಕೀಲರಾಗಿದ್ದ ಕೆ.ಟಿ. ಭಾಷ್ಯಂ ರವರು ವಕೀಲಿಗಿರಿಯ ಸನ್ನದ್ದನ್ನು ಹಿಂತಿರುಗಿಸಲು ತೀರ್ಮಾನಿಸಿ, ಆ ಸುದ್ದಿಯನ್ನು ಪತ್ರಿಕೆಗಳಿಗೆ ನೀಡಲು ಸೂರಿಯವರಿಗೆ ಜವಾಬ್ದಾರಿ ಕೊಟ್ಟಿದ್ದರು. ಇದರ ಪ್ರಾಮುಖ್ಯತೆಯನ್ನು ಅರಿತ ಸೂರಿಯವರು, ತನ್ನ 18ನೇ ವಯಸ್ಸಿನಲ್ಲೇ ಸ್ವಾತಂತ್ರ್ಯ ಹೋರಾಟದ ಅಖಾಡಕ್ಕಿಳಿದರು. ಆಗ ವಿದ್ಯಾರ್ಥಿಗಳು ದೊಡ್ಡ ಪ್ರಮಾಣದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ತೀವ್ರ ಪ್ರತಿಭಟನೆಗಳನ್ನು ನಡೆಸುತ್ತಿದ್ದರು. ಇದರ ಸಂಘಟಕರಾಗಿ ಸೂರಿಯವರು ಎಂಎಲ್‌ಪಿ (ವೈದ್ಯಕೀಯ ಡಿಪ್ಲೋಮಾ ಕಾಲೇಜು) ಬಳಿ ಪಿಕೆಟಿಂಗ್ ನಡೆಸುತ್ತಿದ್ದರು. ಇದರಿಂದ ಬಂಧನಕ್ಕೊಳ್ಳಗಾಗಿ ಮೈಸೂರು ಜೈಲಿನಲ್ಲಿ ಒಂದು ವರ್ಷ ಆರು ತಿಂಗಳು ಜೈಲುವಾಸ ಅನುಭವಿಸಿದರು.

ಜೈಲಿನಿಂದ ಹೊರ ಬಂದ ನಂತರ ಕಾರ್ಮಿಕನಾಗಿ ಕೆಲಸ ಮಾಡುತ್ತಾ "ಬೆಂಗಳೂರು ಸ್ಟೂಡೆಂಟ್ಸ್ ಯೂನಿಯನ್" ಅನ್ನು ರಚಿಸಿದರು. ನಂತರ 1945–47ರಲ್ಲಿ ಉತ್ತುಂಗದಲ್ಲಿದ್ದ ಕಾರ್ಮಿಕ ಚಳುವಳಿಗಳ ಜೊತೆ ಒಡನಾಟ ಬೆಳೆಸಿಕೊಂಡರು. 1947 ರ ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ ಬಂದ ನಂತರದ ದಿನಗಳಲ್ಲಿ ನಡೆಯುತ್ತಿದ್ದ ಹಿಂದು–ಮುಸ್ಲಿಂ ಕೋಮು ಗಲಭೆಗಳ ಸಂದರ್ಭದಲ್ಲಿ ಸೂರಿಯವರು ಮಧ್ಯಪ್ರವೇಶಿಸಿ ಕೋಮು ಸೌಹಾರ್ದತೆಗಾಗಿ ಕೆಲಸ ಮಾಡಿದರು.

ಮುಂದೆ ಸಿಐಟಿಯು ವಿನ ರಾಜ್ಯ ಅಧ್ಯಕ್ಷರಾಗಿ, ಜವಳಿ ಮತ್ತು ರೇಷ್ಮೆ ಕೈಗಾರಿಕೆ, ಸಾರ್ವಜನಿಕ ಕ್ಷೇತ್ರ, ಹೋಟೆಲ್ ಕಾರ್ಮಿಕರು, ಐಟಿಸಿ, ಮೈಕೋ, ತಾತಗುಣಿ ಎಸ್ಟೇಟ್ ಕಾರ್ಮಿಕರು, ಮೈಸೂರಿನ ಜೆಕೆ ಟೈಯರ್ಸ್, ಭದ್ರಾವತಿ ವಿ.ಐ.ಎಸ್.ಎಲ್., ಹೀಗೆ



ರಾಜ್ಯಾದ್ಯಂತ ಹಲವು ಘನ ಮತ್ತು ಅಸಂಘಟಿತ ಕೈಗಾರಿಕೆಗಳ ಕಾರ್ಮಿಕರನ್ನು ಸಂಘಟಿಸಿದರು. ಬೆಂಗಳೂರು ಹಾಗೂ ಮೈಸೂರು ನಗರದಲ್ಲಿ ಬಂದ್ ನಂತಹ ಹೋರಾಟ ಯಶಸ್ವಿ ಹೋರಾಟ ನಡೆಸುವ ಮುಖಾಂತರ ಆ ಕಾರ್ಮಿಕರ ಸಂಘಟನೆಗಳ ಹಕ್ಕುಗಳನ್ನು ಉಳಿಸಿದರು.

1983 ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ವರ್ತೂರು ವಿಧಾನಸಭಾ ಕ್ಷೇತ್ರದಲ್ಲಿ ಸೂರಿಯವರು ಸಿಪಿಐಎಂ ನಿಂದ ಸ್ಪರ್ಧಿಸಿ ಶಾಸಕರಾಗಿ ಆಯ್ಕೆಯಾಗಿದ್ದರು. ಅವರು 43,000 ಮತಗಳ ಮುನ್ನಡೆಯಲ್ಲಿ ಗೆದ್ದಿದ್ದರು. ವಿಧಾನಸಭೆಯಲ್ಲೂ ಕೂಡ ರೈತ–ಕೃಷಿ ಕೂಲಿಕಾರರ, ಕಾರ್ಮಿಕರ ಹಕ್ಕುಗಳ ಧ್ವನಿಯಾಗಿದ್ದರು. ಮಾತ್ರವಲ್ಲದೇ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳಾಗಿ 1998 ರಲ್ಲಿ ಆಯ್ಕೆಯಾಗಿ ದುಡಿದರು.

2002 ಜುಲೈ ಒಂದರಂದು ತೀವ್ರವಾದ ಹೃದಯ ಸಂಬಂಧಿ ಕಾಯಿಲೆಯಿಂದ ಅವರು ನಮ್ಮನ್ನಗಲಿದರು. ಈ ವರ್ಷದ ಆಗಸ್ಟ್ 24ರಂದು ಸೂರಿಯವರ ಜನ್ಮದಿನದ ಶತಮಾನೋತ್ಸವ. ಈ ದಿನದಂದು ಸಿಐಟಿಯು ರಾಜ್ಯ ಸಮಿತಿ ವಿವಿಧ ಸ್ವರೂಪದ ಕಾರ್ಯಕ್ರಮಗಳನ್ನು ರೂಪಿಸಿದೆ. ಅವರ ಜೀವನ ಚರಿತ್ರೆಯನ್ನು ನಾಟಕದ ರೂಪದಲ್ಲಿ ತರಲು, ಕಾರ್ಮಿಕರ ಮತ್ತು ಮಹಿಳಾ ಕಾರ್ಮಿಕರ ಭವಣೆಗಳನ್ನು ವಿವರಿಸುವ ಮೂರು ನಾಟಕಗಳು ತಯಾರಾಗುತ್ತಿವೆ. ಈ ನಾಟಕಗಳು ಆಗಸ್ಟ್ ಆರರಿಂದ ಬೆಂಗಳೂರು, ಮಂಡ್ಯ ಹಾಗೂ ಮೈಸೂರಿನಲ್ಲಿ ಪ್ರದರ್ಶನಗೊಳ್ಳಲಿದೆ.

ಆಗಸ್ಟ್ 24ರಂದು ಬೆಂಗಳೂರಿನ ಟೌನ್ ಹಾಲ್ ನಲ್ಲಿ "ಕರ್ನಾಟಕದ ಅಭಿವೃದ್ಧಿಯಲ್ಲಿ ಕಾರ್ಮಿಕರ ಪಾತ್ರ" ಎಂಬ ವಿಚಾರದ ಬಗ್ಗೆ ಇಡೀ ದಿನ ವಿಚಾರ ಸಂಕಿರಣ, ಅಭಿಪ್ರಾಯಗಳ ಹಂಚಿಕೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಈ ಸಂದರ್ಭದಲ್ಲಿ ಕಾಮ್ರೇಡ್ ಸೂರಿಯವರ ನೆನಪಿನಲ್ಲಿ ಚಿತ್ರ ಪ್ರದರ್ಶನ ನಡೆಸಲಾಗುತ್ತದೆ. ಮುಖಾಂತರ ಸೂರಿಯವರನ್ನು ನೆನೆಯೋಣ. ಅವರ ಕನಸನ್ನು ನನಸು ಮಾಡಲು ಎಲ್ಲರೂ ಶ್ರಮಿಸೋಣ.

ಮಹಿಳೆಯರ ಕಾಳಜಿಗಳನ್ನು ನಿರ್ಲಕ್ಷಿಸಿರುವ 2024–25ರ ಬಜೆಟ್

2024–25ರ ಬಜೆಟ್ ಬಗ್ಗೆ ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯೂಎ) ನಿರಾಶೆಯನ್ನು ವ್ಯಕ್ತಪಡಿಸಿದೆ. ಎನ್‌ಡಿಎ ಸರ್ಕಾರದ ಮೊದಲ ಚುನಾವಣೋತ್ತರ ಸಂಪೂರ್ಣ ಬಜೆಟ್ ಇಂದು ಮಹಿಳೆಯರು ಎದುರಿಸುತ್ತಿರುವ ಸಾಮಾಜಿಕ ವಾಸ್ತವತೆಯನ್ನು ಸಂಪೂರ್ಣವಾಗಿ ನಿರಾಕರಿಸಿರುವಂತೆ ಕಾಣುತ್ತದೆ ಎಂದು ಅದು ಹೇಳಿದೆ.

ಈ ದೇಶದ ಮಹಿಳೆಯರು ಭಾರೀ ಬೆಲೆ ಏರಿಕೆ ಮತ್ತು ನಿರುದ್ಯೋಗದ ಹೊಡೆತವನ್ನು ಎದುರಿಸುತ್ತಿದ್ದಾರೆ. ಈ ವರ್ಷದ ಸರಾಸರಿ ಆಹಾರ ಹಣದುಬ್ಬರವು ಶೇಕಡಾ 8–9.5 ರ ನಡುವೆ ಇದೆ. ಆದರೆ ಸರ್ಕಾರ ಮತ್ತು ಅದರ ಅರ್ಥಶಾಸ್ತ್ರಜ್ಞರು ತಮ್ಮ ಮೂಲ ಹಣದುಬ್ಬರ ದರದ ಲೆಕ್ಕಾಚಾರಕ್ಕೆ ಆಹಾರ ಮತ್ತು ಇಂಧನ ಬೆಲೆ ಏರಿಕೆಯನ್ನು ಸೇರಿಸಲಿಲ್ಲ, ಆದ್ದರಿಂದ ಅದು 3.1 ಶೇ. ಎಂದು ಹೇಳುತ್ತಾರೆ.

ಯೋಗ್ಯವಾದ ಕೆಲಸದ ಪರಿಸ್ಥಿತಿಗಳು ಮತ್ತು ಸಾಮಾಜಿಕ ಭದ್ರತೆಯಿರುವ ಉದ್ಯೋಗಗಳು ಮಹಿಳೆಯರಿಗೆ ಈಗ ದೊರೆಯುತ್ತಿಲ್ಲ.ಅನೌಪಚಾರಿಕ ವಲಯದಲ್ಲಿನ ಉದ್ಯೋಗ ಬಿಕ್ಕಟ್ಟಿನಿಂದ ಅತಿ ಹೆಚ್ಚು ಬಾಧಿತರಾದವರು ಮಹಿಳೆಯರು. ಆದರೆ ಕಳೆದ ಒಂದು ದಶಕದಲ್ಲಿ ಉದ್ಯೋಗ ಸೃಷ್ಟಿ ಯೋಜನೆಗಳ ಮೇಲಿನ ಸಾರ್ವಜನಿಕ ವೆಚ್ಚವು ಕ್ರಮೇಣ ಕಡಿಮೆಯಾಗುತ್ತಿದೆ. ಈ ಬಾರಿಯ ಬಜೆಟ್‌ನಲ್ಲೂ ಇದೇ ಪ್ರವೃತ್ತಿ ಮುಂದುವರಿದಿದೆ.

ಸಾಮಾನ್ಯ ನಾಗರಿಕರ ಕಲ್ಯಾಣಕ್ಕಾಗಿ ಸಾರ್ವಜನಿಕ ವೆಚ್ಚದ ಕುಸಿತದ ಪ್ರವೃತ್ತಿಯೂ ಈ ಬಜೆಟ್‌ನಲ್ಲಿ ಮುಂದುವರೆದಿದೆ. ಮೂಲಭೂತ ಸೇವೆಗಳನ್ನು ಒದಗಿಸುವ ಮತ್ತು ಎಲ್ಲಾ ಸೇವೆಗಳ ಖಾಸಗೀಕರಣದ ತನ್ನ ನೀತಿಯನ್ನು ಮುಂದುವರಿಸುತ್ತಿರುವುದನ್ನು ಮತ್ತು ತನ್ನ ಜವಾಬ್ದಾರಿಯಿಂದ ಕೇಂದ್ರ ಸರ್ಕಾರವು ಹಿಂದೆ ಸರಿಯುವುದನ್ನು ಇದು ತೋರಿಸುತ್ತದೆ.

ಲಿಂಗ ಬಜೆಟ್ ಒಟ್ಟು ವೆಚ್ಚದ 6.78 ಶೇ. ಆಗಿದೆ, ಇದು ಕಳೆದ ವರ್ಷದ ಬಜೆಟ್‌ನಲ್ಲಿ 6.2 ಶೇ.ಕ್ಕಿಂತ ತುಸು ಹೆಚ್ಚು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯಕ್ಕೆ ಹಂಚಿಕೆಯು ಶೇಕಡಾ 8 ಕ್ಕಿಂತ ಸ್ವಲ್ಪ ಹೆಚ್ಚಾಗಿದೆಯಾದರೂ, ಈ ಹಂಚಿಕೆಯು ಒಟ್ಟು ವೆಚ್ಚದ ಶೇಕಡಾ 0.57 ಮತ್ತು ಜಿಡಿಪಿಯ 0.08 ಶೇಕಡಾ ಮಾತ್ರ. ಲಿಂಗ ಬಜೆಟ್‌ನಲ್ಲಿನ ಪ್ರಮುಖ ಹೆಚ್ಚಳವು ಪ್ರಧಾನ ಮಂತ್ರಿ ಆವಾಸ್ ಯೋಜನೆಗೆ ಹಂಚಿಕೆಯಾಗಿದೆ.

. ಆಹಾರ ಸಬ್ಸಿಡಿಯನ್ನು 2022–2023 ರ ವಾಸ್ತವಿಕ ವೆಚ್ಚದಿಂದ 34.75 ಶೇ.ದಷ್ಟು ಕಡಿಮೆ ಮಾಡಿರುವುದು ಹಸಿವು ಮತ್ತು ಅಪೌಷ್ಟಿಕತೆಯ ಬಗೆಗಿನ ಕಾಳಜಿಯ ನಿರ್ಲಕ್ಷ್ಯವನ್ನು ತೋರಿಸುತ್ತದೆ. ಕಳೆದ ವರ್ಷದಿಂದ ಸಕ್ಷಮ್ ಅಂಗನವಾಡಿ ಮತ್ತು ಪಿಎಂ ಪೋಶನ್ ಕಾರ್ಯಕ್ರಮಗಳ ಹಂಚಿಕೆಯಲ್ಲಿ 323 ಕೋಟಿ ರೂ. ಕಡಿಮೆಯಾಗಿದೆ. ಈ ಯೋಜನೆಗಳನ್ನು ವಾಸ್ತವವಾಗಿ ಆರಂಭಿಸಿದ ಪೌಷ್ಟಿಕಾಂಶ ಕಾರ್ಯಕ್ರಮದ ಮೇಲೆ ಇದು ಪ್ರತಿಕೂಲ ಪರಿಣಾಮ ಬೀರುತ್ತದೆ. ಸರ್ಕಾರವು ಎನ್‌ಎಫ್‌ಎಸ್‌ಎ (ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ) ಅಡಿಯಲ್ಲಿ ಯಾವುದೇ ಹಂಚಿಕೆ ಮಾಡದಿರುವುದು ಆಘಾತಕಾರಿಯಾಗಿದೆ, ಇದರಿಂದಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆ(ಪಿಡಿಎಸ್)ಯನ್ನು ಕೊಂದಂತಾಗಿದೆ. ಇದರ ಬದಲು ಕಒಉಏಂಜ ಅಡಿಯಲ್ಲಿ ಹಂಚಿಕೆ ಮಾಡಲಾಗಿದೆ,ಆದರೆ ಇದರಲ್ಲಿ 6662 ಕೋಟಿ (ಪರಿಷ್ಕೃತ ಅಂದಾಜು)) ರಷ್ಟು ಕಡಿಮೆಯಾಗಿದೆ. ಪಿಡಿಎಸ್ ಒಂದು ಕಾನೂನುಬದ್ಧ ಅರ್ಹತೆಯಾಗಿದ್ದು ಅದನ್ನು ಈಗ ಸರ್ಕಾರವು ದತ್ತಿಯಾಗಿ ಪರಿವರ್ತಿಸಿದೆ. ಇದು ಬಡ ಕುಟುಂಬಗಳಿಗೆ ಆಹಾರ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಜಾರಿಗೆ ತಂದ ಎನ್‌ಎಫ್‌ಎಸ್‌ಎ ಉಲ್ಲಂಘನೆಯಾಗಿದೆ. ಸರ್ಕಾರ ಉಚಿತ ಧಾನ್ಯಗಳ ವಿತರಣೆಯನ್ನು ಕೊನೆಗೊಳಿಸಲು ನಿರ್ಧರಿಸಿದಾಗ, ಕೋಟಿಗಟ್ಟಲೆ ಬಡ ಕುಟುಂಬಗಳು ಮಾರುಕಟ್ಟೆಯ ಮರ್ಜಿಗೆ ಒಳಗಾಗುತ್ತವೆ.

ಉದ್ಯೋಗ ಸೃಷ್ಟಿಯ ಯೋಜನೆಗಳ ಮೇಲಿನ ಸಾರ್ವಜನಿಕ ವೆಚ್ಚವು ಕಡಿಮೆಯಾಗಿದೆ, ಸರ್ಕಾರವು ಮತ್ತೊಮ್ಮೆ ಪ್ರಮುಖ ಮನರೇಗ ಯೋಜನೆಗೆ ಅಸಮರ್ಪಕ ಹಂಚಿಕೆಯನ್ನು ಮಾಡಿದೆ. ಎನ್‌ಆರ್‌ಎಲ್‌ಎಂ (ರಾಷ್ಟ್ರೀಯ ಗ್ರಾಮೀಣ ಜೀವನಾಧಾರ ಮಿಷನ್) ಅಡಿಯಲ್ಲಿ ಹಂಚಿಕೆಗಳು ಸ್ವಲ್ಪಮಟ್ಟಿಗೆ ಹೆಚ್ಚಿವೆ, ಆದರೆ ಈ ಹೆಚ್ಚಳವು ಮಹಿಳಾ ಸ್ವಸಹಾಯ ಗುಂಪು(ಎಸ್‌ಹೆಚ್‌ಜಿ) ಗಳಿಗೆ ಕ್ರೆಡಿಟ್ ಗ್ಯಾರಂಟಿಗಳಿಂದಾಗಿ ಆಗಿದೆ. ಇದು ಪರೋಕ್ಷವಾಗಿ ಮಹಿಳೆಯರನ್ನು ಹೆಚ್ಚು ಸಾಲ ಪಡೆಯಲು ಪ್ರೇರೇಪಿಸುತ್ತದೆ. ಮಹಿಳಾ ಕಾರ್ಮಿಕ ಬಲದ ಭಾಗವಹಿಸುವಿಕೆಯ ಪ್ರಮಾಣವು ಸಾರ್ವಕಾಲಿಕ ಗರಿಷ್ಠ 41 ಪ್ರತಿಶತದಲ್ಲಿದೆ ಎಂದು ಆರ್ಥಿಕ ಸಮೀಕ್ಷೆಯು ಹೇಳಿಕೊಂಡಿದೆ. ಇದು ತಪ್ಪುದಾರಿಗೆಳೆಯುವ ದಾವೆ, ಏಕೆಂದರೆ ಇದು ಕುಟುಂಬ ಉದ್ಯಮಗಳಲ್ಲಿ ಸಹಾಯಕರಾಗಿ ಕೆಲಸ ಮಾಡುವ ವೇತನವಿಲ್ಲದ ಮಹಿಳೆಯರನ್ನು ಕೂಡ ಒಳಗೊಂಡಿದೆ. ಆಯ್ದ ನಗರಗಳಲ್ಲಿ 100 ಹಾಟ್(ಶಂತೆ)ಗಳ ಅಭಿವೃದ್ಧಿಯ ಮೂಲಕ ಹೆಚ್ಚಿನ ಸಂಖ್ಯೆಯ ಮಹಿಳೆಯರನ್ನು ಒಳಗೊಂಡಿರುವ ಬೀದಿ ವ್ಯಾಪಾರಿಗಳ ಜೀವನವನ್ನು ಪರಿವರ್ತಿಸುವ ಹಣಕಾಸು ಸಚಿವರ ಹೇಳಿಕೆಯು ಸುಳ್ಳು ಎಂಬುದನ್ನು ಪಿಎಂ–ಸ್ವನಿಧಿ ಯೋಜನೆಯಲ್ಲಿ 30 ಪ್ರತಿಶತದಷ್ಟು ಇಳಿಕೆ ಬಯಲಿಗೆ ತಂದಿದೆ. ಸರ್ಕಾರ ಜೀವನೋಪಾಯದ ಅವಕಾಶಗಳನ್ನು ಒದಗಿಸುವ ಅವಶ್ಯಕತೆಯಿದೆ.ಆದರೆ ಇದರತ್ತ ಸರಕಾರ ಗಮನ ಹರಿಸಿಲ್ಲ.

ವಿಧವಾ ಪಿಂಚಣಿ ಯೋಜನೆ ಸೇರಿದಂತೆ ಸಾಮಾಜಿಕ ನೆರವು ಯೋಜನೆಗಳ ವೆಚ್ಚವು ಕಳೆದ ಕೆಲವು ವರ್ಷಗಳಲ್ಲಿ ವಾಸ್ತವಿಕವಾಗಿ ಒಂದೇ ಆಗಿರುತ್ತದೆ. ಕೋವಿಡ್ ಸಾಂಕ್ರಾಮಿಕದ ನಂತರ ಜನಸಂಖ್ಯೆಯ ಬೆಳವಣಿಗೆ ಮತ್ತು ವಿಧವೆಯರ ಸಂಖ್ಯೆಯಲ್ಲಿ ಹೆಚ್ಚಿನ ಹೆಚ್ಚಳವನ್ನು ಸರ್ಕಾರ ಗಣನೆಗೆ ತೆಗೆದುಕೊಂಡಿಲ್ಲ. ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗಾಗಿ ಮತ್ತು ಮಹಿಳೆಯರ ಸಬಲೀಕರಣಕ್ಕಾಗಿ ಯೋಜನೆಗಳ ವೆಚ್ಚ, ಅಂದರೆ, 'ಮಿಷನ್ ಶಕ್ತಿ' ಅಡಿಯಲ್ಲಿ ಯೋಜನೆಗಳು ಕೇಂದ್ರ ಬಜೆಟ್ ವೆಚ್ಚದ ಕೇವಲ 0.067 ಶೇ. ವನ್ನು ಹೊಂದಿವೆ. ಈ ತೀರಾ ಕಡಿಮೆ ಹಂಚಿಕೆಯು ಹಾಸ್ಟೆಲ್‌ಗಳು ಮತ್ತು ಕ್ರೆಚ್‌ಗಳನ್ನು ವಿಸ್ತರಿಸಲಾಗುವುದು ಎಂಬ ಹಣಕಾಸು ಸಚಿವರ ಹೇಳಿಕೆಗಳನ್ನು ಹುಸಿಗೊಳಿಸುತ್ತವೆ.

ಶಿಕ್ಷಣ ಮತ್ತು ಆರೋಗ್ಯ ವೆಚ್ಚಗಳು ಹಿಂದಿನ ವರ್ಷದ ಬಜೆಟ್ ಅಂದಾಜಿಗಿಂತ ಸ್ವಲ್ಪ ಹೆಚ್ಚಳವನ್ನು ಕಂಡಿವೆ. ಆದರೆ ಇದು ಹಣದುಬ್ಬರವನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಅಲ್ಲದೆ, ಈ ಹೆಚ್ಚಳಗಳು ಖಅಖಿ ಮತ್ತು ಅಪ್ರೆಂಟಿಸ್‌ಶಿಪ್ ಮತ್ತು ಇಂಟರ್ನ್‌ಶಿಪ್ ಯೋಜನೆಗಳ ಪ್ರಚಾರದಲ್ಲಿ ಕಂಡುಬರುತ್ತವೆ. ಶಿಕ್ಷಣದ ಡಿಜಿಟಲೀಕರಣಕ್ಕೆ ಒತ್ತು ನೀಡಲಾಗಿದೆ. ಎರಡನೆಯ ಒತ್ತು ಶಿಕ್ಷಣ ಸಾಲಗಳ ಮೇಲೆ ಮತ್ತು ಸ್ಕಾಲರ್‌ಶಿಪ್‌ಗಳ ಹಂಚಿಕೆಗಳು, ಆದರೆ ಇವಕ್ಕೆ ಹಂಚಿಕೆಗಳಲ್ಲಿ ಏರಿಕೆಯಾಗಿಲ್ಲ. ಇದರಿಂದ ಬಡ ಕುಟುಂಬದ ಲಕ್ಷಾಂತರ ಮಕ್ಕಳು ಅದರಲ್ಲೂ ಹೆಣ್ಣು ಮಕ್ಕಳು ಶಿಕ್ಷಣದ ಹಕ್ಕಿನಿಂದ ವಂಚಿತರಾಗುತ್ತಾರೆ. ಆರೋಗ್ಯ ಕ್ಷೇತ್ರದಲ್ಲಿ, ಆರೋಗ್ಯ ವಿಮೆ ಮತ್ತು ಡಿಜಿಟಲ್ ಆರೋಗ್ಯ ಸೇವೆಗಳ ಮೇಲೆ ಮುಖ್ಯ ಒತ್ತು ನೀಡಲಾಗಿದೆ. ಆರೋಗ್ಯ ಸೌಲಭ್ಯಗಳ ವಿಸ್ತರಣೆ ಮತ್ತು ವೈದ್ಯಕೀಯ ಸಿಬ್ಬಂದಿ ಹೆಚ್ಚಳ ಅಥವಾ ಖಾಲಿ ಹುದ್ದೆಗಳ ಭರ್ತಿಗೆ ಕಡಿಮೆ ಒತ್ತು ನೀಡಲಾಗಿದೆ. ಸಂಪೂರ್ಣ ಆರೋಗ್ಯ ಬಜೆಟ್ ಒಟ್ಟು ವೆಚ್ಚದ ಕೇವಲ 1.81 ಶೇ.

ಆಹಾರ ಭದ್ರತೆ, ಉದ್ಯೋಗ, ಸಾಮಾಜಿಕ ಭದ್ರತಾ ಯೋಜನೆಗಳು, ಶಿಕ್ಷಣ ಮತ್ತು ಆರೋಗ್ಯಕ್ಕಾಗಿ ವೆಚ್ಚವನ್ನು ಹೆಚ್ಚಿಸುವಂತೆ ಒತ್ತಾಯಿಸಿ ದೇಶಾದ್ಯಂತ ಪ್ರತಿಭಟನೆಗಳನ್ನು ನಡೆಸಲಾಗುವುದು ಎಂದು ಅಖಿಲ ಭಾರತ ಜನವಾದಿ ಮಹಿಳಾಸಂಘ ಹೇಳಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE July 29-August 4, 2024 Price: Rs. 10/- Date of Publication: 26 July 2024 RNI No. KARKAN /2006/17926 Posted on 29-07-2024
Posted at BG PSO, BG - 560026 **Posted at Periodical Rate -** Rs. 2

ಬಿಜೆಪಿ ಆಡಳಿತದ ಉತ್ತರಪ್ರದೇಶದಲ್ಲಿ ಈಗ ಪ್ರತ್ಯಕ್ಷವಾಗಿಯೇ ಅಲ್ಪಸಂಖ್ಯಾತರ ಮೇಳೆ ದಾಳಿ ಪ್ರಾರಂಭವಾಗಿದೆ. ಧರ್ಮದ ಹೆಸರಿನಲ್ಲಿ ವಿಭಜಿಸುವ ಕೆಲಸವೂ ಬಹಿರಂಗವಾಗಿಯೇ ಪ್ರಾರಂಭವಾಗಿದೆ. ನಿನ್ನ ಹೆಸರೇನು? ಅದನ್ನು ಬೋರ್ಡ್ ನಲ್ಲಿ ಬರೆದು ಕುತ್ತಿಗೆಗೆ ನೇತುಹಾಕಿಕೊ ಎನ್ನುತ್ತಾರೆ ಅವರು. ಅಂದಿನ ಹಿಟ್ಲರ್, ಮುಸೊಲಿನಿಯ ಹಾದಿಯನ್ನು ಅನುಸರಿಸುತ್ತ ಇಂದು ಉತ್ತರಪ್ರದೇಶ ರಾಜ್ಯದ ಮುಖ್ಯಮಂತ್ರಿ ಯೋಗಿ ಆಧಿತ್ಯನಾಥ್ ನಿರಂಕುಶಾಧಿಕಾರಿಯಾಗಿ ಜನರ ಒಗ್ಗಟ್ಟನ್ನು ತುಂಡರಿಸುತ್ತಿದ್ದಾರೆ. ಮನುಷ್ಯರನ್ನು ಧರ್ಮದ ಆದಾರದಲ್ಲಿ ವಿಭಜಿಸಿ ಗಲಭೆ ಎಬ್ಬಿಸಲು ಪ್ರಜಾಪ್ರಭುತ್ವ ದೇಶದಲ್ಲಿ ನಿಸ್ಸಂಶಯವಾಗಿ ಬಾಗಿಲುಗಳು ತೆರೆದುಕೊಳ್ಳುತ್ತಿವೆ. ಇದು ಭಾರತದ ಪ್ರಜಾಪ್ರಭುತ್ವ ಮತ್ತು ಜ್ಯಾತ್ಯಾತೀತ ವ್ಯವಸ್ಥೆಗೆ ಗಂಭೀರ ಅಪಾಯದ ಸೂಚನೆಯಾಗಿದೆ.

ಅಂಗಡಿಗಳು, ಹೋಟೆಲುಗಳು, ತಳ್ಳುಗಾಡಿಗಳಲ್ಲಿ ಹೆಸರಿನ ಫಲಕ ಹಾಕಿಕೊಳ್ಳಲು ಆದೇಶ

ಕೇಸರಿ ಪಕ್ಷದಿಂದ ವಿಭಜಿಸುವ ಕೆಲಸ ಬಹಿರಂಗವಾಗಿಯೇ ಪ್ರಾರಂಭವಾಗಿದೆ

ಈ ದೇಶ 'ನಿಮ್ಮದಲ್ಲ ನಮ್ಮದು' ಎಂದು ಹೇಳಿದರೆ ವಿವಿಧತೆಯಲ್ಲಿಯೂ ಏಕತೆಯಿಂದ ಒಗ್ಗೂಡುವ ಜನರು ಎಲ್ಲಿಗೆ ಹೋಗಬೇಕು? ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ನಿರ್ಬಂಧಗಳ ಪಂಜರದಲ್ಲಿ ಜನರನ್ನು ಬಂಧಿಸುತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ಜುಲೈ 22 ರಂದು ಆರಂಭವಾದ ಕನ್ವರ್ ಯಾತ್ರೆ ಆಗಸ್ಟ್ 4 ರಂದು ಮುಗಿಯುತ್ತದೆ. ಈ ಯಾತ್ರೆ ಸಾಗುವ ಮಾರ್ಗದುದ್ದಕ್ಕೂ ಇರುವ ತಿಂಡಿ ತಿನಿಸುಗಳನ್ನು ಮಾರುವ ಅಂಗಡಿಗಳು, ಟೀ ಅಂಗಡಿಗಳು, ಹೋಟೆಲುಗಳ ಮುಂದೆ ಮತ್ತು ತಳ್ಳುಗಾಡಿಗಳಲ್ಲಿ ಅದರ ಮಾಲೀಕರ ಹೆಸರು, ಅಲ್ಲಿ ಕೆಲಸ ಮಾಡುವವರ ಹೆಸರು ಮತ್ತು ಅವರ ವೈಯಕ್ತಿಕ ವಿವರಗಳನ್ನು ಒಳಗೊಂಡ ಫಲಕಗಳನ್ನು ಹಾಕಲು ಮುಜಾಫರ್ ನಗರ ಆಡಳಿತ ಆದೇಶಿಸಿದೆ. ಇದಾದ ನಂತರ ಈ ಆದೇಶವನ್ನು ಯೋಗಿ ಸರ್ಕಾರ ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಸೂಚಿಸುತ್ತದೆ.

ಉತ್ತರ ಪ್ರದೇಶದ ಇದೇ ಮಾರ್ಗವನ್ನು ಉತ್ತರಾಖಂಡ ಮತ್ತು ಮಧ್ಯಪ್ರದೇಶ ಸರ್ಕಾರಗಳು ಅನುಸರಿಸಿದವು. ಮಧ್ಯಪ್ರದೇಶದ ಪ್ರಾಚೀನ ನಗರ ಉಜ್ಜಯಿನಿಯಲ್ಲಿಯೂ ಅಂಗಡಿಗಳ ಮುಂದೆ ಮಾಲೀಕರ ಹೆಸರು, ಮೊಬೈಲ್ ಸಂಖ್ಯೆಯನ್ನು ಪ್ರಧರ್ಶಿಸಬೇಕೆಂದು ಅಲ್ಲಿನ ಮಹಾನಗರ ಪಾಲಿಕೆ ಆದೇಶಿಸಿತು. ಈ ಆದೇಶ ಉಲ್ಲಂಘಿಸುವವರು ಮೊದಲ ಬಾರಿಗೆ 2,000 ರೂಪಾಯಿ ದಂಡ ಪಾವತಿಸಬೇಕು. ಎರಡನೇ ಬಾರಿಯೂ ಆದೇಶ ಉಲ್ಲಂಘಿಸಿದರೆ 5,000 ರೂಪಾಯಿ ದಂಡ ಪಾವತಿಸಬೇಕಾಗುತ್ತದೆ ಎಂದು ಉಜ್ಜಯಿನಿಯ ಮೇಯರ್ ಆ ಆದೇಶದಲ್ಲಿ ತಿಳಿಸಿದ್ದಾರೆ. ಈ ಪ್ರಕರಣಕ್ಕೆ ಸಂಭಂದಿಸಿದಂತೆ ಜುಲೈ 22ರಂದು ಸುಪ್ರೀಂ ಕೋರ್ಟ್ ಈ ರಾಜ್ಯಗಳ ಆಡಳಿತವು ನೀಡಿರುವ ಇಂತಹ ಆದೇಶಕ್ಕೆ ತಡೆ ನೀಡಿದೆ. ನ್ಯಾಯಾಲಯದ ಈ ತೀರ್ಪು ಸ್ವಲ್ಪ ಮಟ್ಟಿಗೆ ಆಶಾದಾಯಕವಾಗಿದೆ.





ಜಾತಿ ಮತ್ತು ಧರ್ಮವನ್ನು ತಿಳಿದುಕೊಳ್ಳುವ ಉದ್ದೇಶವೇನು?

ಫಲಕಗಳಲ್ಲಿ ಪ್ರಧರ್ಶನಗೊಂಡ ಆ ಹೆಸರುಗಳ ಆಧಾರದ ಮೇಲೆ ಅವರ ಜಾತಿ ಮತ್ತು ಧರ್ಮವನ್ನು ತಿಳಿದುಕೊಳ್ಳುವ ಉದ್ದೇಶ ಈ ಆದೇಶಗಳ ಹಿಂದೆ ಅಡಗಿದೆ. ಈ ನಡೆಯನ್ನು ಏನೆನ್ನಬೇಕು? ಇದು ಏನನ್ನು ಸೂಚಿಸುತ್ತದೆ? ಹಿಂದುತ್ವವಾದಿಗಳ ಮೂಲ ಉದ್ದೇಶವನ್ನು ಮರೆಮಾಚಿ ಮಾರುವೇಷದಲ್ಲಿ ನೀಡಿದ ಆದೇಶಗಳಿವು. ನಾಮಫಲಕಗಳನ್ನು ಪ್ರದರ್ಶಿಸಸದೆ ಇರುವವರಿಗೆ ದಂಡ ವಿಧಿಸುತ್ತಾರಂತೆ. ಯಾರು ನಮಗೆ ಊಟ ಬಡಿಸುತ್ತಾರೆ ಎಂಬ ಕಾರಣದಿಂದ ನಾವು ಯಾವುದೇ ಹೊಟೆಲ್ ಗಳಿಗೆ ಹೋಗುವುದಿಲ್ಲ. ನಾವು ತಿನ್ನಲು ಬಯಸುವ ತಿಂಡಿ ತಿನಿಸುಗಳು ಎಲ್ಲಿ ಸಿಗುತ್ತವೆ ಎಂಬುದನ್ನು ನೋಡಿ ಅಂತಹ ಹೋಟೆಲುಗಳಿಗೆ ಹೋಗುತ್ತೇವೆ. ಗುರುತಿನ ಆಧಾರದ ಮೇಲೆ ಜನರನ್ನು ಪರಸ್ಪರ ದೂರವಿಡುವ ಉದ್ದೇಶವೇ ಈ ಆದೇಶಗಳಲ್ಲಿದೆ ಎಂದು ತೋರುತ್ತದೆ. ಇದು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ. ಅದು ಅಲ್ಲಿಗೇ ನಿಲ್ಲಲಿಲ್ಲ. ಆ ಅಂಗಡಿಗಳಲ್ಲಿದ್ದ ಮುಸ್ಲಿಂ ನೌಕರರನ್ನು ಕೆಲಸದಿಂದ ತೆಗೆದು ಹಾಕುವಂತೆ ಆದೇಶಿಸಿದ ಉದಾಹರಣೆಗಳಿವೆ. ಉತ್ತರ ಪ್ರದೇಶದಲ್ಲಿ ಕನ್ವರ್ ಯಾತ್ರೆ ಕಾರಣದಿಂದಾಗಿ ಆ ಭಾಗದ ಮುಸ್ಲಿಮರು ಕೆಲಸ ಕಳೆದುಕೊಳ್ಳುವಂತಾಗುತ್ತದೆ.

ಮಿತ್ರ ಪಕ್ಷಗಳ ವಿರೋಧಕ್ಕೂ ಬೆಲೆಯಿಲ್ಲ

ಅನ್ಯ ಧರ್ಮೀಯರ ವ್ಯವಹಾರಗಳಿಗೆ ಧಕ್ಕೆ ತರುವ ಕೇಸರಿ ಪಕ್ಷದ ಉದ್ದೇಶ ವಿಕೃತ ರೀತಿಯಲ್ಲಿ ಹೊರ ಬರುತ್ತಿದೆ. ಯೋಗಿ ಸರ್ಕಾರದ ಕ್ರಮವನ್ನು ಸ್ವಪಕ್ಷ, ವಿರೋಧ ಪಕ್ಷಗಳೆಂಬ ಭೇದವಿಲ್ಲದೆ ಬಹಳಷ್ಟು ಪಕ್ಷಗಳು ಟೀಕಿಸಿವೆ. ಸಿಪಿಐ(ಎಂ) ಸೇರಿದಂತೆ ಎಡಪಕ್ಷಗಳು ಬಿಜೆಪಿ ನೇತೃತ್ವದ ಈ ರಾಜ್ಯ ಸರ್ಕಾರಗಳ ಇಂತಹ ನಡೆಯನ್ನು ಕಟುವಾದ ಶಬ್ದಗಳಲ್ಲಿ ಟೀಕಿಸಿವೆ. ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (NDA)ದಲ್ಲಿ ತನ್ನದೇ ಆದ ಮಿತ್ರಪಕ್ಷಗಳಿಂದ ಟೀಕೆಗಳು ಎದುರಾದವು. ಬಿಹಾರದ ನಿತೀಶ್ ಕುಮಾರ್ ನೇತೃತ್ವದ ಜೆಡಿ(ಯು), ಚಿರಾಗ್ ಪಾಸ್ವಾನ್ ನೇತೃತ್ವದ ಆರ್ಎಲ್ ಡಿ ಮತ್ತು ಉತ್ತರ ಪ್ರದೇಶದ ರಾಷ್ಟ್ರೀಯ ಲೋಕದಳ (ಆರ್ಎಲ್ಡಿ) ಸೇರಿದಂತೆ ಮಿತ್ರಪಕ್ಷಗಳು ಕೂಡ ಈ ತಾರತಮ್ಯದ ಆದೇಶವನ್ನು ವಿರೋಧಿಸಿ ಹೇಳಿಕೆ ನೀಡಿದವು.

2024 ರ ಲೋಕಸಭಾ ಚುನಾವಣೆಯಲ್ಲಿ ಕೇಸರಿ ಪಕ್ಷವು 240 ಸ್ಥಾನಗಳನ್ನು ಗೆಲ್ಲುವ ಮೂಲಕ ಬಹುಮತದ ಕೊರತೆಯನ್ನು ಅನುಭವಿಸಿದ ನಂತರ, ಸಂಸತ್ತಿನಲ್ಲಿ ಜೆಡಿ(ಯು) ಬಿಜೆಪಿಗೆ ಪ್ರಮುಖ ಮಿತ್ರ ಪಕ್ಷವಾಗಿದೆ. ಸರ್ಕಾರ ರಚಿಸಲು ಅದು ತನ್ನ ಎನ್ಡಿಎ ಮಿತ್ರಪಕ್ಷಗಳ ಮೇಲೆ ಅವಲಂಬಿತವಾಗಿದೆ. 12 ಲೋಕಸಭಾ ಸ್ಥಾನಗಳನ್ನು ಹೊಂದಿರುವ ಜೆಡಿಯು ಮತ್ತು 16 ಸ್ಥಾನಗಳನ್ನು ಹೊಂದಿರುವ ತೆಲುಗು ದೇಶಂ ಪಕ್ಷ (ಟಿಡಿಪಿ) ಎರಡೂ ಬಿಜೆಪಿ ನೇತೃತ್ವದ ಎನ್ಡಿಎ ಸರ್ಕಾರಕ್ಕೆ ನಿರ್ಣಾಯಕ ಮಿತ್ರಪಕ್ಷಗಳಾಗಿವೆ. ಇಷ್ಟಾದರೂ ಬಿಜೆಪಿ ಆಡಳಿತದ ಈ ರಾಜ್ಯಗಳು ತಮ್ಮ ಆದೇಶವನ್ನು ಹಿಂಪಡೆಯಲು ಮುಂದಾಗಲಿಲ್ಲ. ಮಿತ್ರ ಪಕ್ಷಗಳ ವಿರೋಧವನ್ನೂ ಲೆಕ್ಕಿಸದೆ, ತಮ್ಮ 'ವಿಭಜಿಸುವ' ಕಾರ್ಯದಲ್ಲಿ ಮುಂದುವರಿಯುತ್ತಾರೆ ಎಂದರೆ, ಕೇಸರಿ ಪಕ್ಷದ ನಿಜವಾದ ಕಾರ್ಯತಂತ್ರ ಏನೆಂಬುದು ಸ್ಪಷ್ಟವಾಗುತ್ತದೆ. ಕಡೆಗೆ ಸುಪ್ರೀಂ ಕೋರ್ಟ್ ನ ಮಧ್ಯಪ್ರವೇಶದಿಂದ ಇದಕ್ಕೆ ತಡೆಹಾಕಲು ಸಾಧ್ಯವಾಗಿದೆ.

ಈ ಹಿಂದೆಯೂ ಯೋಗಿ ಸರ್ಕಾರ ಸಾರ್ವಜನಿಕವಾಗಿ ಮಾಂಸ ಮಾರಾಟ ಮಾಡಬಾರದು ಎಂಬ ನಿಯಮವನ್ನು ಜಾರಿಗೆ ತಂದಿತ್ತು. ಆಗಲೂ 'ಭಕ್ತರ ಭಾವನೆಗಳಿಗೆ ಧಕ್ಕೆಯಾಗದಿರಲಿ ಎಂಬ ಕಾರಣಕ್ಕೆ' ಎಂದು ರಾಗ ಎಳೆದರು. ಆದರೆ, ಸಂತ್ರಸ್ತರಿಗೂ ಭಾವನೆಗಳಿವೆ ಅಲ್ಲವೇ? ಅವರ ಭಾವನೆಗಳಿಗೆ ಬೆಲೆಯೇ ಇಲ್ಲವೇನು?

ಇತ್ತೀಚಿನ ಸಾರ್ವತ್ರಿಕ ಚುನಾವಣೆಯಲ್ಲಿ ಉತ್ತರ ಪ್ರದೇಶದ ಜನರು ಮತಾಂಧತೆಯನ್ನು ತಿರಸ್ಕರಿಸಿದರು. ವಾಸ್ತವವಾಗಿ, ಕೇಸರಿ ಪಕ್ಷವನ್ನು ಅಲ್ಲಿನ ಜನರು ಅಯೋಧ್ಯೆಯಲ್ಲಿ ರಾಮನ "ಪಾದದ ಮೇಲೆ" ಮತ್ತು ಬದರಿನಾಥದಲ್ಲಿ ಶಂಕರನ "ಪಾದದ ಮೇಲೆ" ಎಸೆದರು. ಆದರೆ, ಅದರಿಂದ ಪಾಠ ಕಲಿಯದ ಬಿಜೆಪಿ ಸಂಸ್ಕೃತಿ ಸಂಪ್ರದಾಯಗಳನ್ನು ಆಚರಿಸುತ್ತೇವೆ ಎನ್ನುವ ಹೆಸರಿನಲ್ಲಿ, ಜನರನ್ನು ನಿರ್ಬಂಧಗಳ ಬಲೆಗೆ ಬೀಳಿಸುವ ತಂತ್ರಗಳನ್ನು ಮಾಡುತ್ತಿದ್ದಾರೆ. ಇದು ಭಾರತೀಯ ಸಂಸ್ಕೃತಿಯ ಮೇಲಿನ ದಾಳಿಯಾಗಿದೆ.

ಕನ್ವರ್ ಯಾತ್ರೆ ಹಿಂದಿನಿಂದಲೂ ಇದೆ

ಹಿಂದೂ ಯಾತ್ರಾರ್ಥಿಗಳು ವರ್ಷದ ಈ ಸಮಯದಲ್ಲಿ ಕನ್ವರ್ ಯಾತ್ರೆಯನ್ನು ಕೈಗೊಳ್ಳುತ್ತಾರೆ, ಗಂಗಾ ನದಿಯಿಂದ ನೀರನ್ನು ಸಂಗ್ರಹಿಸಲು ಉತ್ತರಾಖಂಡಕ್ಕೆ ಕಾಲ್ನಡಿಗೆಯಲ್ಲಿ ಪ್ರಯಾಣಿಸುತ್ತಾರೆ. ನಂತರ ಅವರು ಶಿವ ದೇವಾಲಯಗಳಲ್ಲಿ ನೀರನ್ನು ಅರ್ಪಿಸುತ್ತಾರೆ. ಈ ವರ್ಷ ಕನ್ವರ್ ಯಾತ್ರೆ ಜುಲೈ 22 ಆರಂಭವಾಗಲಿದೆ. ದೇಶಕ್ಕೆ ಸ್ವಾತಂತ್ರ್ಯ ಬರುವ ಮೊದಲಿನಿಂದಲೂ ಈ ಯಾತ್ರೆ ಆಚರಣೆಯಲ್ಲಿದೆ. ಈ ಹಿಂದೆ ಯಾವ ಸರಕಾರವೂ ಮುಸ್ಲಿಮರ ಮೇಲೆ ಈ ರೀತಿಯ ನಿರ್ಬಂಧಗಳನ್ನು ಹೇರಿರಲಿಲ್ಲ. ಎಂದೂ ಯಾರಿಗೂ ತೊಂದರೆಯಾಗದ ವಿಷಯಗಳನ್ನು ಈಗ ಏಕೆ ಸೃಷ್ಟಿಸಲಾಗುತ್ತಿದೆ? ಈ ರೀತಿಯ ಆದೇಶ ನೀಡುವುದು ಜಾತಿ ಮತ್ತು ಕೋಮುವಾದವನ್ನು ಉತ್ತೇಜಿಸುವ ಹೆಜ್ಜೆಯಾಗಿದೆ. ಇದು ಅಸಂವಿಧಾನಿಕ ನಿರ್ಧಾರ. 'ಹಿಂದೂ–ಮುಸ್ಲಿಂ ಬಾಯಿ ಬಾಯಿ' ಎಂದು ಹೇಳುವ ಮೂಲಕ ಸಹೋದರರಂತೆ ಇರುವವರ ಮಧ್ಯ ಒಡಕು ಉಂಟುಮಾಡಲು ಏಕೆ ಪ್ರಯತ್ನಿಸುತ್ತಿದ್ದಾರೆ ಎಂಬುದನ್ನು ಯೋಚಿಸಬೇಕಾಗಿದೆ. ದೇಶದಲ್ಲಿ ಅಲ್ಪಸಂಖ್ಯಾತರು ನಿರಂತರವಾಗಿ ಅಭದ್ರತೆ, ಆತಂಕ ಮತ್ತು ಅಸಮಾನತೆಯಿಂದ ಬದುಕುತ್ತಿದ್ದಾರೆ. ಅವರಿಗೆ ಸಂವಿಧಾನ ಒದಗಿಸಿದ ಮೀಸಲಾತಿಯ ಸೌಲಭ್ಯಗಳಿಗೂ ಕತ್ತರಿ ಹಾಕಲಾಗಿದೆ. ಮುಸ್ಲಿಮರ ವೃತ್ತಿಗಳಲ್ಲಿ ಮಾಂಸ ಮಾರಾಟವೂ ಒಂದು. ಇದು ವರ್ಷವೆಲ್ಲಾ ನಡೆಯುತ್ತಿದ್ದರೂ ಈಗ ಹೊಸದಾಗಿ ಮೆರವಣಿಗೆ ನಡೆಯುವ ಪ್ರದೇಶದಲ್ಲಿ, ಶೋಭಾಯಾತ್ರೆ ನಡೆಯುವ ಪ್ರದೇಶಗಳಲ್ಲಿ, ಹೋಮಗಳು ನಡೆಯುವ ಸ್ಥಳಗಳಲ್ಲಿ ಮುಸ್ಲಿಮರ ಮೇಲೆ ವಿಧಿಸುತ್ತಿರುವ ನಿರ್ಬಂಧಗಳಿಂದಾಗಿ ಅವರ ಜೀವನೋಪಾಯ ಏನಾಗಬಹುದು?

ನಾಗರಿಕ ಸಮಾಜವೇ ಯೋಚಿಸಬೇಕಿದೆ

ಇಂದು ನಮ್ಮ ದೇಶದಲ್ಲಿ ನಿರ್ಬಂಧಗಳು ಜಾರಿಯಾಗುತ್ತಿವೆ. ಇಲ್ಲಿ ಮುಸ್ಲಿಮರ ಮೇಲೆ ಪ್ರತ್ಯಕ್ಷ ಮತ್ತು ಪರೋಕ್ಷ ದಾಳಿಗಳನ್ನು ನೋಡುತ್ತಿದ್ದರೆ ತಾಲಿಬಾನ್ ವಿಧಿಸಿದ ನಿರ್ಬಂಧಗಳು ನೆನಪಿಗೆ ಬರುತ್ತವೆ. ಇಸ್ರೇಲಿನಿಂದ ಆಮದು ಮಾಡಿಕೊಳ್ಳಲಾದ ಈ ವಿಧಾನವು ದೇಶವನ್ನು ಶಾಶ್ವತ ಅಗ್ನಿಕುಂಡವನ್ನಾಗಿ ಪರಿವರ್ತಿಸುವ ಅಪಾಯದಲ್ಲಿದೆ. 'ವಿಭಜಿಸು, ಆಳು' ಎಂಬ ಘೋಷಣೆಯೊಂದಿಗೆ ಧರ್ಮ ಮತ್ತು ದ್ವೇಷದ ಆಡಳಿತ ನಡೆಸುತ್ತಿರುವ ಕೇಂದ್ರದ ನೀತಿಗಳನ್ನು ಎದುರಿಸುವುದು ದೇಶದ ಪ್ರಸ್ತುತ ಗುರಿಯಾಗಿದೆ. ಜಾತ್ಯತೀತ ಪ್ರಜಾಪ್ರಭುತ್ವಕ್ಕಾಗಿ ಹೋರಾಡುವ ಶಕ್ತಿಗಳನ್ನು ಬೆಂಬಲಿಸುವುದು ಮತ್ತು ಅವರ ಮಾರ್ಗವನ್ನು ಅನುಸರಿಸುವುದು ಜನರ ಕರ್ತವ್ಯ. ಅಂಧಕಾರದತ್ತ ಸಾಗುತ್ತಿರುವ ಭಾರತಕ್ಕೆ ಬೆಳಕು ತೋರಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ನಾಗರಿಕ ಸಮಾಜವೇ ಯೋಚಿಸಬೇಕಿದೆ.

–ಸಿಚಿ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**